Swabhimani Sahakari
Pages : 32 / 20₹

# ಸ್ವಾಭಿಮಾನಿ ಸಹಕಾರಿ

ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಸೌಹಾರ್ದ ಸಹಕಾರಿ ಚಳುವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume - 21
Issue - 04
April - 2024



ಏಪ್ರಿಲ್ ೦9
ಯುಗಾದಿ

ಮೃದು ವಸಂತದ ಮುದ್ದು ಬೆರಳು ಮೊಗ್ಗಿನ ಕಣ್ಣ
ತೆರೆದು ಅರಳಾಗಿಸುವ ವೇಳೆಯಲ್ಲಿ
ಎಳ ಬಿಸಿಲ ಹೊದಿಕೆಯಲಿ ನಗಲು ಚಿಗುರಿದ ತೋಟ
ಬಗೆಬಗೆಯ ಪರಿಮಳದ ಜ್ವಾಲೆಯಲ್ಲಿ...
–ಕೆ. ಎಸ್. ನರಸಿಂಹಸ್ವಾಮಿ



## "ಸರ್ಕಾರದ ನಿರ್ದೇಶನ ಆದೇಶಕ್ಕೆ ಗೌರವಾನ್ವಿತ ಉಚ್ಚ ನ್ಯಾಯಾಲಯದ ತಡೆಯಾಜ್ಞೆ"

ಏಪ್ರಿಲ್ 11



ರಂಜಾನ್

ಏಪ್ರಿಲ್ 14



ಬಾಬಾ ಸಾಹೇಬ್ ಅಂಬೇಡ್ಕರ್ ಜಯಂತಿ

ಏಪ್ರಿಲ್ 17



ಶ್ರೀರಾಮ ನವಮಿ

ಏಪ್ರಿಲ್ 21



ಮಹಾವೀರ ಜಯಂತಿ

## ಜೀವಚಕ್ರ ಉಳಿಯಲು ಜಲಚಕ್ರ ಉಳಿಸಿ




ಏಪ್ರಿಲ್ 26
ಲೋಕಸಭಾ ಚುನಾವಣೆ

## ಮರೆಯದೆ ಮತ ಚಲಾಯಿಸಿ



ಸೌಹಾರ್ದ ಸಹಕಾರಿಗಳ ಸಂಖ್ಯೆ : 6195

ಇ–ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 1631



**ಜಿ. ನಂಜನಗೌಡ**

ಆತ್ಮೀಯ ಸಹಕಾರಿ ಬಂಧು – ಭಗಿನೀಯರಿಗೆ ಸಹೃದಯ ವಂದನೆಗಳು. ರಾಜ್ಯದ ಎಲ್ಲಾ ಸಹಕಾರಿಗಳಿಗೆ ಶ್ರೀಕ್ರೋಧಿನಾಮ ಸಂವತ್ಸರದ, ಹಿಂದೂ ಪಂಚಾಂಗದ ಮೊದಲ ಹಬ್ಬ ಯುಗಾದಿಯ ಶುಭಾಶಯಗಳು. ಹಾಗೆಯೇ ಅಂಬೇಡ್ಕರ ಜಯಂತಿ, ಮಹಾವೀರ ಜಯಂತಿ ಮತ್ತು ಶ್ರೀರಾಮನವಮಿಯ ಹಾರ್ದಿಕ ಶುಭಾಶಯಗಳು.

# ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಮತದಾನ ಜಾಗೃತಿ, ಹಕ್ಕು ಚಲಾವಣೆ ಮತ್ತು ಪೂರ್ಣ ಪ್ರಮಾಣ ಹಾಗೂ ಶಾಂತಿಯುತ ಮತದಾನದ ಎಚ್ಚರಿಕೆ ಅಗತ್ಯ.

ಆತ್ಮೀಯ ಸಹಕಾರಿ ಬಂಧು–ಭಗಿನೀಯರಿಗೆ ಸಹೃದಯ ವಂದನೆಗಳು. ರಾಜ್ಯದ ಎಲ್ಲಾ ಸಹಕಾರಿಗಳಿಗೆ ಶ್ರೀಕ್ರೋಧಿನಾಮ ಸಂವತ್ಸರದ, ಹಿಂದೂ ಪಂಚಾಂಗದ ಮೊದಲ ಹಬ್ಬ ಯುಗಾದಿಯ ಶುಭಾಶಯಗಳು. ಹಾಗೆಯೇ ಅಂಬೇಡ್ಕರ ಜಯಂತಿ, ಮಹಾವೀರ ಜಯಂತಿ ಮತ್ತು ಶ್ರೀರಾಮನವಮಿಯ ಹಾರ್ದಿಕ ಶುಭಾಶಯಗಳು.

ವಿಶ್ವದಲ್ಲಿಯೇ ಅತಿದೊಡ್ಡ ಪ್ರಜಾಪ್ರಭುತ್ವ ದೇಶ ಭಾರತದಲ್ಲಿ 18ನೇ ಲೋಕಸಭಾ ಚುನಾವಣೆ ಕುರಿತು ಚುನಾವಣಾ ಆಯೋಗವು ವೇಳಾಪಟ್ಟಿಯನ್ನು ಪ್ರಕಟಿಸಿದೆ. **"ಚುನಾವ್ ಕಾ ಪರ್ವ್, ದೇಶ್ ಕಾ ಗರ್ವ್" (ಚುನಾವಣೆ ಪರ್ವ–ದೇಶದ ಗರ್ವ)** ಈ ಬಾರಿಯ ಚುನಾವಣಾ ಧ್ಯೇಯ–ವಾಕ್ಯವಾಗಿದ್ದು, 2024ರ ಲೋಕಸಭಾ ಚುನಾವಣೆಯು ದೇಶದಲ್ಲಿ ಏಳು ಹಂತಗಳಲ್ಲಿ ಹಾಗೂ ನಮ್ಮ ರಾಜ್ಯದಲ್ಲಿ ಎರಡು ಹಂತಗಳಲ್ಲಿ ಜರುಗಲಿದೆ. ದಿನಾಂಕ 26 ಏಪ್ರಿಲ್ 2024ರಂದು ದ್ವಕಿಣ ವಿಭಾಗದ 14 ಜಿಲ್ಲೆಗಳಲ್ಲಿ ಮತ್ತು 07 ಮೇ 2024ರಂದು ಉತ್ತರ ವಿಭಾಗದ 14 ಜಿಲ್ಲೆಗಳಲ್ಲಿ ಮಹಾಚುನಾವಣೆ ಘೋಷಣೆಯಾಗಿರುವುದು ತಮಗೆಲ್ಲ ತಿಳಿದಿದೆ ಎಂದು ಭಾವಿಸುತ್ತೇನೆ. ಈ ಹಿನ್ನೆಲೆಯಲ್ಲಿ ಮತದಾರರ ಪಟ್ಟಿಯಲ್ಲಿ ನೊಂದಾಯಿತ ಎಲ್ಲಾ ನಾಗರಿಕರೂ ತಪ್ಪದೇ ತಮ್ಮ ಹಕ್ಕನ್ನು ಯಾವುದೇ ಆಸೆ–ಆಮಿಷಗಳಿಗೆ ಬಲಿಯಾಗದೆ ಕಡ್ಡಾಯವಾಗಿ ಮತ ಚಲಾಯಿಸಲು ಕೋರುತ್ತೇನೆ.

ಈ ಸಂದರ್ಭದಲ್ಲಿ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ತಮ್ಮ ಸದಸ್ಯರಿಗೆ ಹಾಗೂ ಕಾರ್ಯ ವ್ಯಾಪ್ತಿಯಲ್ಲಿ ಬರುವ ಮತದಾರರಲ್ಲಿ **'ಚುನಾವಣೆಯ ಮಹತ್ವ', 'ಮತದಾನದ ಹಕ್ಕಿನ ಮಹತ್ವ'ದ** ಕುರಿತು ಅರಿವು ಮೂಡಿಸುವ ಮೂಲಕ ಸಹಕಾರಿ ತತ್ವಗಳಲ್ಲಿ ಒಂದಾದ **'ಸಾಮಾಜಿಕ ಕಳಕಳಿ'** ಯನ್ನು ಪಾಲಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಈ ಸಂದರ್ಭದಲ್ಲಿ ಪೂರ್ಣ ಪ್ರಮಾಣ ಹಾಗೂ ಶಾಂತಿಯುತ ಮತದಾನ ಮಾಡುವಲ್ಲಿ ಎಚ್ಚರಿಕೆ ಅಗತ್ಯವಾಗಿದೆ

ಪ್ರಪಂಚದಲ್ಲಿಯೇ ನಮ್ಮದು ಅತ್ಯಂತ ದೊಡ್ಡ ಪ್ರಜಾಪ್ರಭುತ್ವದ ದೇಶ. ಪ್ರಜಾಪ್ರಭುತ್ವದ ಯಶಸ್ಸು ಪ್ರಬುದ್ಧ ನಾಗರೀಕರನ್ನು ಅವಲಂಬಿಸುತ್ತದೆ. ಆದ್ದರಿಂದ ಸರಕಾರ ಹಾಗೂ ಚುನಾವಣಾ ಆಯೋಗವು ಮತದಾನದ ಬಗ್ಗೆ ಸಾರ್ವಜನಿಕರಿಗೆ ತಿಳುವಳಿಕೆ ನೀಡುವ ರೀತಿಯಲ್ಲಿ, ಸಹಕಾರಿಗಳಾದ ನಾವು ಸಹ ಪ್ರಜಾಪ್ರಭುತ್ವದ ತತ್ವದಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ ಸಾರ್ವತ್ರಿಕ ಚುನಾವಣೆಗಳಲ್ಲಿ ಮತದಾನ ಮಾಡುವುದು ಅಗತ್ಯ. ಸಹಕಾರಿ ಸಂಸ್ಥೆಗಳನ್ನು ಯಶಸ್ವಿಯಾಗಿ ನಿರ್ವಹಿಸುವಲ್ಲಿ ಯಶಸ್ಸು ಸಾಧಿಸಿ ನಂತರ ದೇಶದ ಪ್ರಜಾಪ್ರಭುತ್ವದ ಯಶಸ್ಸಿಗೆ ಶ್ರಮಿಸಲು ಸಾಧ್ಯವಾಗುತ್ತದೆ. ಆದ್ದರಿಂದ ಸಹಕಾರ ಸಂಸ್ಥೆಗಳು ಮತದಾನದ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಅಗತ್ಯ ಮತ್ತು ಅವಶ್ಯಕ.

ಸ್ವಾಭಿಮಾನಿ ಸಹಕಾರಿ
ಸಂಪಾದಕ ಮಂಡಳಿ

ಶ್ರೀ ಜಿ. ನಂಜನಗೌಡ
ಗೌರವ ಅಧ್ಯಕ್ಷರು
ಶ್ರೀ ಎ.ಆರ್. ಪ್ರಸನ್ನಕುಮಾರ
ಗೌರವ ಸದಸ್ಯರು
ಶ್ರೀ ಶರಣಗೌಡ ಜಿ. ಪಾಟೀಲ
ಸಂಪಾದಕರು
ಶ್ರೀ ವಿ.ಜೆ. ಕಾರಕೂನ
ಸಂಚಾಲಕರು
ಶ್ರೀ ಮಹಾಂತಪ್ಪ ಎಸ್. ಎಮ್
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ದೂರವಾಣಿ/ ಫ್ಯಾಕ್ಸ್ : 080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop
**youtube :** https://www.youtube.com/@souharda471

ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ.......................................... 2
ಸಂಪಾದಕೀಯ.......................................... 3
ಜ್ಞಾನ ಜ್ಯೋತಿ.......................................... 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... .................................................. 05–17
ಸೌಹಾರ್ದ ಸಹಕಾರಿಗಳ ಸಮಾಚಾರಗಳು .... .................................................. 21–24
**ಲೇಖನಗಳು :**
ಸಹಕಾರ ಸಂಘಗಳ ಆಡಳಿತ ಮಂಡಳಿ ಚುನಾವಣೆ ಮುಂದೂಡುವ ಮತ್ತು ಪದಾಧಿಕಾರಿ ಅವಧಿಯನ್ನು ಹೆಚ್ಚಿಸಿ, ಸರ್ಕಾರದ ಆದೇಶ ............ 25–26
ಅವಮಾನಗಳ ನಡುವೇಯೆ ಭಾರತದ ಮಹಾಚೇತನವಾಗಿ ಬೆಳೆದ ಭಾರತರತ್ನ ಡಾ॥ ಬಿ. ಆರ್. ಅಂಬೇಡ್ಕರ.......................... 27–29
ಹೊಸ ವರುಷದ ಸಂಭ್ರಮ ಹೊತ್ತು ತರುವ ಯುಗಾದಿ .......................................... 30
ಜಲಕ್ಷಾಮ ನಿರ್ವಹಣೆ ..................... 31–32

# ಸಂಪಾದಕೀಯ

## ನೂತನ ಆರ್ಥಿಕ ವರ್ಷದಲ್ಲಿ ಹಿಂದಿನ ವರ್ಷಗಳ ಸಾಧನೆಯ ಸಿಂಹಾವಲೋಕನ ಹಾಗೂ ಪ್ರಸಕ್ತ ಸಾಲಿನ ಕ್ರೀಯಾ ಯೋಜನೆಗಳ ಅನುಷ್ಠಾನದತ್ತ ಇರಬೇಕು ಚಿತ್ತ.

31 ಮಾರ್ಚ್ 2024 ಸಹಕಾರಿ ಲೆಕ್ಕ ಪತ್ರಗಳ ಆಖೈರುಗೊಳಿಸಲಾಗಿದೆ. ನೂತನ ಆರ್ಥಿಕ ವರ್ಷ ಪ್ರಾರಂಭವಾಗಿದೆ. ಪ್ರತಿಯೊಂದು ಸಹಕಾರಿ ಸಂಸ್ಥೆಗಳು ತಮ್ಮ ಹಿಂದಿನ ವರ್ಷಗಳ ಕಾರ್ಯಚಟುವಟಿಕೆಗಳ ಸಿಂಹಾವಲೋಕನ ಮಾಡುತ್ತ ತಮ್ಮ ಸಾಧನೆಗಳನ್ನು ಮೆಲಕು ಹಾಕುವುದು ತಮ್ಮ ಸವಾಲುಗಳ್ನು ಮೆಟ್ಟಿನಿಲ್ಲಲು ಮತ್ತು ಅವಕಾಶಗಳನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳುವುದಕ್ಕೆ ಸಂಸ್ಥೆಗಳ ಗುಣಮಟ್ಟ ಸುಧಾರಣೆಗೆ ಕ್ರಮವಿಡಬೇಕಾದ ಸಮಯ ಇದಾಗಿದೆ.

ವರ್ಷ ಪ್ರಾರಂಭದಲ್ಲಿ ಮೊದಲಿಗೆ ಕಳೆದ ಸಾಲಿನ ಅಂತಿಮ ಲೆಕ್ಕ ಪತ್ರಗಳನ್ನು ಸಿದ್ಧಪಡಿಸಿ ಏಪ್ರಿಲ್ 30ರ ಒಳಗಾಗಿ ಲೆಕ್ಕ ಪರಿಶೋಧಕರಿಗೆ ಹಾಜರುಪಡಿಸಿ ಲೆಕ್ಕ ಪರಿಶೋಧನೆ ಮಾಡಿಸಿ ನಂತರ ಲೆಕ್ಕ ಪರಿಶೋಧಿತ ವರದಿಯನ್ನು ಆಡಳಿತ ಮಂಡಳಿ ಹಾಗೂ ಅವರ ಶಿಫಾರಸಿನೊಂದಿಗೆ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಲಾಭವಿಲೇವಾರಿಗೆ ಹಾಗೂ ಸೌಹಾರ್ದ ಸಹಕಾರಿ ಕಾನೂನು ಹಾಗೂ ಸಹಕಾರಿಯ ಉಪವಿಧಿಗಳಲ್ಲಿ ನಿಗದಿಗೊಳಿಸಿದಂತೆ ವಿಲೆ ಮಾಡುವ ಕ್ರಮವಿಡಬೇಕು. ಲೆಕ್ಕ ಪರಿಶೋಧಕರು ನಮೂದಿಸಿದ ನ್ಯೂನತೆಗಳಿಗೆ ಸರಿಪಡಿಸಲು ಕ್ರಮವಿಡುವುದು ನಂತರದಲ್ಲಿ ವಾರ್ಷಿಕ ಮಹಾಸಭೆಯವರು ಅನುಮೋದಿಸಿದ ಕ್ರೀಯಾಯೋಜನೆಗಳನ್ನು ಜಾರಿಮಾಡುವ ಬಗ್ಗೆ ಕ್ರಮ ಪ್ರಾರಂಭಿಸುವುದು.

ವಾರ್ಷಿಕ ಕ್ರೀಯಾ ಯೋಜನೆಗಳನ್ನು ಅನುಷ್ಠಾನ ಮಾಡುವಾಗ ಆದ್ಯತಾ ವಲಯವನ್ನು ಗುರುತಿಸುವುದು ಅಗತ್ಯ. ಯಾವ ಯೋಜನೆಯನ್ನ ಯಾವಾಗ ಪ್ರಾರಂಭಿಸಬೇಕು. ಅನುಕೂಲಗಳೇನು ಲಭ್ಯವಿರುವ ಸ್ವಾಭಾವಿಕ ಸಂಪನ್ಮೂಲಗಳು, ಮಾನವ ಸಂಪನ್ಮೂಲಗಳು, ಸಂಪನ್ಮೂಲಗಳ ಕ್ರೂಢೀಕರಣ, ಬೇಕಾಗುವ ಯಂತ್ರೋಪಕರಣಗಳ ವ್ಯವಸ್ಥೆ, ಅಗತ್ಯವಿರುವ ಸೌಲಭ್ಯಗಳು, ಲಭ್ಯವಿರುವ ಸೌಲಭ್ಯಗಳು, ಯೋಜನೆಗಳ ಅನುಷ್ಠಾನದ ಹಂತಗಳು, ಆಧುನಿಕ ತಂತ್ರಜಾನದ ಬಳಕೆ ಈ ಎಲ್ಲ ವಿಚಾರಗಳ ಬಗ್ಗೆ ಕೂಲಂಕುಷವಾಗಿ ಚರ್ಚೆಮಾಡಿ ಯೋಜನೆಯ ಯಶಸ್ಸಿನ ಬಗ್ಗೆ ಒಂದು ನೀಲನಕ್ಷೆಯನ್ನು ಸಿದ್ಧಪಡಿಸಿ ಅದರಂತೆ ಕಾರ್ಯನಿರ್ವಹಿಸಿದಾಗ ಸಹಕಾರಿಯ ಯೋಜನೆಗಳು ಯಶಸ್ಸು ಕಾಣುತ್ತವೆ. ಸಹಕಾರಿ ಕ್ಷೇತ್ರ ತನ್ನ ಗುಣಮಟ್ಟ ಉಳಿಸಿಕೊಂಡು ಬೆಳೆಸಿಕೊಂಡು ಮುನ್ನಡೆಯಲು ಸಾಧ್ಯವಾಗುತ್ತದೆ.

ಈ ಹಂತದಲ್ಲಿ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿಯವರ ಜವಾಬ್ದಾರಿ ಮಹತ್ವದ್ದಾಗುತ್ತದೆ. ಕೇವಲ ಸಾಂಪ್ರದಾಯಿಕ ವ್ಯವಹಾರಗಳನ್ನು ಮಾಡುತ್ತ ಆಧುನಿಕತೆಯನ್ನು ಅಳವಡಿಸದೆ ಹೊಸ ತಂತ್ರಜ್ಞಾನವನ್ನು ಅಳವಡಿಸದೆ ಹೊಸ ಹೊಸ ಯೋಜನೆಗಳನ್ನು ಜಾರಿಮಾಡದೆ ಹಾಗೆ ಉಳಿದು ಬಿಟ್ಟರೆ ಸಹಕಾರಿ ಸಂಸ್ಥೆಗಳು ಪ್ರಗತಿಯನ್ನು ಸಾಧಿಸಲು ಸಾಧ್ಯವಾಗುವುದಿಲ್ಲ. ಹೊಸ ಚಿಂತನೆಗಳನ್ನು ರೂಢಿಸಿಕೊಳ್ಳಿ, ನವ ಸಮಾಜ ನಿರ್ಮಾಣದ ಹರಿಕಾರರ ಪಾತ್ರ ನಿರ್ವಹಿಸಿ. ಸಹಕಾರ ಕ್ಷೇತ್ರವನ್ನು ಬೆಳಸಿ, ಸಹಕಾರಿಗಳು ಬೆಳೆಯಿರಿ. ಸಹಕಾರದಿಂದ ಸಮೃದ್ಧಿ ಎಂಬುದನ್ನು ಸಮೂಹಕ್ಕೆ ಮನದಟ್ಟು ಮಾಡುವ ಕಾಲ ಇದಾಗಿದೆ.



# ಜ್ಞಾನ ಜ್ಯೋತಿ

– ಶ್ರೀ ಸಿದ್ದೇಶ್ವರ ಸ್ವಾಮೀಜಿ, ವಿಜಯಪುರ
ಪ್ರವಚನ ಸಂಗ್ರಹ : ಶ್ರೀ ಶಂಕರ ಎಸ್.

## "ಬಾಳಬಟ್ಟೆ"

ನಮ್ಮ ಬದುಕು ಅತ್ಯಂತ ಅಮೂಲ್ಯವಾದ ನಿಸರ್ಗದ ಕಾಣಿಕೆ. ನಾವದನ್ನು ಪಡೆದು ಬಂದಿದ್ದೇವೆ. ನಿಸರ್ಗ ಅದನ್ನು ಕರುಣಿಸಿದೆ. ಅದಕ್ಕಾಗಿ ನಾವೇನನ್ನೂ ಮಾಡಿಲ್ಲ. ಒಳ್ಳೆಯ ಶರೀರ, ಸಮರ್ಥವಾದ ಮನಸ್ಸು ನೂರುವರ್ಷ ಆಯುಷ್ಯ ಎಲ್ಲವೂ ಇದೆ. ಅಷ್ಟು ವರ್ಷಗಳ ಕಾಲ ನಾವು ಜಗತ್ತಿನ ಎಲ್ಲ ವಸ್ತುಗಳನ್ನು ಉಪಯೋಗಿಸುತ್ತ ಬದುಕುವುದು – ಇದೇ ಜೀವನ/ಬಾಳುವೆ ಎಲ್ಲರಿಗೂ ಇದು ದೊರೆತಿದೆ. ಇದನ್ನು ನಾವು ಬಹಳ ಸೂಕ್ಷ್ಮವಾಗಿ ಬಳಸಬೇಕು. ವಸ್ತುಗಳು ಮಹತ್ವದ್ದಲ್ಲ. ಅವು ಹೆಚ್ಚು ಕಡಿಮೆ ಇರಬಹುದು. ಆದರೆ ಬದುಕು ಮಹತ್ವದ್ದು ಸನ್ಯಾಸಿಯಿರಲಿ, ಸಂಸಾರಿಯಿರಲಿ ಅದು ಎಲ್ಲರಿಗೂ ಒಂದೇ.

ಎಲ್ಲರ ಬದುಕೂ ಆರಂಭವಾದಾಗ ಖಾಲಿ ಇರುತ್ತದೆ. ಅದನ್ನು ನಾವು ತುಂಬಬೇಕು. ಫ್ರಾನ್ಸ್ ದೇಶದ ತತ್ವಜ್ಞಾನಿ ಡೆಕಾರ್ಟ್ ಹೇಳುವಂತೆ, "ನಾವು ಜಗತ್ತಿಗೆ ಬಂದಾಗ ನಮ್ಮ ಜೀವನ ಸ್ವಚ್ಛ 'ಪಾಟಿ' (Slate) ಯಂತಿರುತ್ತದೆ. ಆನಂತರ ನಾವು ನಮ್ಮ ಕಣ್ಣು, ಬುದ್ಧಿ ಮನಸ್ಸುಗಳಿಂದ ಬರೆಯುತ್ತ ಹೋಗುತ್ತೇವೆ. ಆಗ ಜೀವನ ಸುಂದರವಾಗುತ್ತದೆ ಇಲ್ಲವೇ ಕುರೂಪಗೊಳ್ಳುತ್ತೇವೆ. ಆಗ ಜೀವನ ಸುಂದರವಾಗುತ್ತದೆ ಇಲ್ಲವೇ ಕುರೂಪಗೊಳ್ಳುತ್ತದೆ. ಏನು ಬರೆಯಬೇಕೆಂಬುದು ನಮಗೆ ಬಿಟ್ಟಿದ್ದು ನಾವು ಬರೆದದ್ದು ಅಳಿಕಿಸಲು ಬರುವಂತಿರಬೇಕು. ಅಂದರೆ ತಲೆ ಯಾವುದೋ ಒಂದರಿಂದ ತುಂಬಿಕೊಳ್ಳಬಾರದು. ಜೀವನ ಬರೆಯುವುದು ನಮ್ಮ ಕೈಯಲ್ಲಿದೆ. ಈ ಪಾಟಿ ಜೀವನಕ್ಕೆ ಒಂದೇ! ಒಂದು ಸಲ ಹೋದರೆ ಹೋಯಿತು. ಸ್ವಲ್ಪ ಮುರಿದರೆ ತಿದ್ದುಕೊಳ್ಳಬಹುದು ಆದರೆ ತಿದ್ದಲಾರದಷ್ಟು ಮುರಿದುಕೊಳ್ಳಬಾರದು. ಆದ್ದರಿಂದ ಎಚ್ಚರಿಕೆಯಿಂದ ಅದನ್ನು ಬಳಸಬೇಕು, ಅದರಲ್ಲಿ ಸುಂದರವಾದದ್ದನ್ನು ಬರೆಯಬೇಕು". ಸಂತರು ಹೇಳುವಂತೆ ಈ ಜೀವನದಲ್ಲಿ ಬಂದ ಮೇಲೆ ನಿನಗೆ ಸಂತೋಷವನ್ನುಂಟುಮಾಡುವ ಕೆಲಸ ಮಾಡು. ಆ ಸಂತಸ ಜೀವನಪೂರ್ತಿ ಇರಬೇಕು. ಸುಂದರ ಭಾವ ಕೃತಿಗಳಿಂದ ಜೀವನದ ಪಾಟಿ ತುಂಬಿರಬೇಕು.

ನಮ್ಮ ಜೀವನದ ಬಟ್ಟೆ ಸ್ವಚ್ಛವಾಗಿರಬೇಕು: ಗಟ್ಟಿಯಾಗಿರಬೇಕು ನಿಸರ್ಗ ನಮಗೆ ಕೊಟ್ಟಿದ್ದನ್ನು ಚೆನ್ನಾಗಿ ಬಳಸುವುದೇ ಪರಮಾರ್ಥ ಈ ಬಟ್ಟೆಯನ್ನು ಸರಿಯಾಗಿ ಬಳಸಿದರೆ ತಾಳಿಕೆ ಬರುತ್ತದೆ. ಜೀವನದ ಬಟ್ಟೆ ಸ್ವಚ್ಛ, ಗಟ್ಟಿ ಹಾಗೂ ಬಾಳಿಕೆ ಬರುವಂತಿರಬೇಕು. ನಮ್ಮ ಕೈ, ಕಾಲು, ಕಣ್ಣು ಮನಸ್ಸುಗಳನ್ನು ಚೆನ್ನಾಗಿ ಬಳಸಬೇಕು.

ನಮ್ಮ ಬಟ್ಟೆಯಲ್ಲಿ ಸುಂದರ ಬಣ್ಣ ಹಾಕಬೇಕು. ಅದು ಸ್ವಚ್ಛ–ಗಟ್ಟಿಯಾಗಿರಬೇಕು. ಹೀಗಿರಲು ನಾವು ಏನು ಮಾಡಬೇಕು? ಕುಂಬಾರ ಒಂದೇ ರೀತಿಯ ಮಣ್ಣು, ಉಷ್ಣತೆ, ಕೊಟ್ಟು ಗಡಿಗೆಗಳನ್ನು ತಯಾ–ರಿಸುತ್ತಾನೆ. ಅದನ್ನು ಖರೀಸಿದಿದವರು ಅದರಲ್ಲಿ ತಮಗೆ ಬೇಕಾದ್ದನ್ನು ತುಂಬಿಸುತ್ತಾರೆ. ಯಾರು ಏನು ಹಾಕುತ್ತಾರೋ ಆದರ ವಾಸನೆ ಆ ಗಡಿಗೆಯಿಂದ ಬರುತ್ತದೆ. ಮೂಲ ಗಡಿಗೆ ಒಂದೇ ಇದ್ದರೂ, ಅದನ್ನು ನಾವು ಯಾವುದಕ್ಕಾಗಿ ಬಳಸುತ್ತೇವೆಯೋ ಅದು ಆ ಹೆಸರನ್ನು ಪಡೆಯುತ್ತದೆ. ಉದಾಹರಣೆಗೆ – ಹಾಲಿನ ಗಡಿಗೆ, ಅನ್ನದ ಗಡಿಗೆ, ಮೊಸರಿನ ಗಡಿಗೆ, ಇದೇ ರೀತಿ ನಮ್ಮ ಜೀವನವೆಂಬ ಗಡಿಗೆ ನಿಸರ್ಗದಿಂದ ಬಂದಿದ್ದು, ಅವೆಲ್ಲವೂ ಮಣ್ಣಿನಿಂದಲೇ ಬಂದಿದ್ದು, ಅದರಲ್ಲಿ ಏನು ಹಾಕಬೇಕು ಎಂಬುದು ನಮಗೆ ಬಿಟ್ಟದ್ದು ಎಂತಹ ವಿಚಾರ, ಭಾವ, ಇಚ್ಛೆಗಳನ್ನು ಗಡಿಗೆಯಲ್ಲಿ ಹಾಕಬೇಕೆಂಬುದನ್ನು ವಿಚಾರಿಸಬೇಕು. ಅದನ್ನು ರಕ್ಷಿಸಬೇಕು. ಉಪಯುಕ್ತವಾದದ್ದನ್ನು ಅದರಲ್ಲಿ ಹಾಕಬೇಕು. ಜೀವನದಲ್ಲಿ ಪರಮಾರ್ಥವೆಂಬ ಜಲವನ್ನು ಗಡಿಗೆಯಲ್ಲಿ ತುಂಬಬೇಕು. ದೇವರು ಕೊಡುತ್ತಾನೆ ಅದನ್ನು ನಾವು ತುಂಬಬೇಕು.

ಈಗ ನಾವೆಲ್ಲರೂ ಒಂದೇ ರೀತಿ ಅದನ್ನು ತುಂಬಿಲ್ಲ ಬೇರೆಬೇರೆ ಪದಾರ್ಥಗಳಿಂದ ತುಂಬಿದ್ದೇವೆ. ಅದನ್ನು ಸ್ವಚ್ಛ ಮಾಡಲು ಬರುತ್ತದೆ ಅದರ ವಾಸನೆಯನ್ನು ಹೋಗಲಾಡಿಸಲು ಬರುತ್ತದೆ. ಇದನ್ನು ಹಿಂದಿನವರು ಮಾಡಿದ್ದಾರೆ. ನಮಗೂ ಬರುತ್ತದೆ. ಮಾಡಬೇಕಾದದ್ದು ಇಷ್ಟೇ ಮೊದಲಿದ್ದದ್ದನ್ನು ಚೆಲ್ಲಬೇಕು. ಅದರಲ್ಲಿರುವ ವಾಸನೆಯನ್ನು ಹೋಗಲಾಡಿಸಲು ಯತ್ನಿಸಬೇಕು. ನಮ್ಮ ಬದುಕಿನ ಊಟದ ತಟ್ಟೆಯಲ್ಲಿ ಬರೀ ಒಗರು, ಹುಳಿ, ಖಾರಗಳನ್ನು ತುಂಬಬಾರದು. ಇದನ್ನು ಹೋಗಲಾಡಿಸಬೇಕಾದರೆ ಮೊದಲು ತಟ್ಟೆಯಲ್ಲಿದ್ದದ್ದನ್ನು ಖಾಲಿ ಮಾಡಬೇಕು. ಈ ಖಾಲಿ ಮಾಡುವುದನ್ನು 'ಯೋಗ' ಎನ್ನುತ್ತಾರೆ. ಯೋಗವೆಂದರೆ ಮನಸ್ಸೆಂಬ ತಟ್ಟೆಯನ್ನು ತೊಳೆಯುವುದು. ನಂತರ ಈ ತಟ್ಟೆಯಲ್ಲಿ ಒಳ್ಳೆಯ ಪದಾರ್ಥಗಳನ್ನು ಹಾಕುವುದು. ಇದೇ ಪರಮಾರ್ಥ, ಇದನ್ನು ಜೀವನದಲ್ಲಿ ತುಂಬುವುದು ಹೇಗೆ?

ಒಬ್ಬ ವಿಜ್ಞಾನಿ ಹೇಳುತ್ತಾನೆ. "ಮೊದಲನೇ ಮಹಾಯುದ್ಧ ಬಂದೂಕಿನಿಂದ, ಎರಡನೇ ಮಹಾಯುದ್ಧ ಅಣು ಬಾಂಬಗಳಿಂದ ಆಯಿತು. ಮೂರನೇ ಮಹಾಯುದ್ಧದಲ್ಲಿ ಏನು ಬಳಸುತ್ತಾರೋ ಗೊತ್ತಿಲ್ಲ, ಆದರೆ ನಾಲ್ಕನೇಯದರಲ್ಲಿ ಬಡಿಗೆ, ಕಲ್ಲುಗಳನ್ನು ಬಳಸುತ್ತಾರೆ. ಇದರರ್ಥ ಮೂರನೇ ಮಹಾಯುದ್ಧ ಸರ್ವನಾಶವನ್ನುಂಟುಮಾಡುತ್ತದೆ. ಆದ್ದರಿಂದ ಹಿಂದೆಂದಿಗಿಂತಲೂ ಇಂದಿನ ಕಾಲಕ್ಕೆ ಯೋಗ, ಅಧ್ಯಾತ್ಮಗಳ ಅವಶ್ಯಕತೆ ಹೆಚ್ಚಿಗಿದೆ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳ ಒಟ್ಟು 34,228 ಆಗಿರುತ್ತದೆ. ಇವುಗಳ ಪೈಕಿ 24,608 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 9,620

**ಮಾರ್ಚ್ ತಿಂಗಳ ಪ್ರಕರಣಗಳು :** ದಾವಾಪ್ರಕರಣ 629 ಇತ್ಯರ್ಥಗೊಂಡ ಪ್ರಕರಣಗಳು 522

**ಅಮಲ್ಜಾರಿ ಪ್ರಕರಣಗಳು :** ಒಟ್ಟು 8,865 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 1,649 ಪ್ರಕರಣಗಳು ಇತ್ಯರ್ಥಗೊಂಡಿದ್ದು. 7,216 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಮಾರ್ಚ್ ತಿಂಗಳಿನಲ್ಲಿ ಒಟ್ಟು 151 ಅಮಲ್ಜಾರಿ ಪ್ರಕರಣಗಳು ದಾಖಲಾಗಿರುತ್ತವೆ.

## ಸೌಹಾರ್ದ ಸಹಕಾರಿಗಳು ಸಂಗ್ರಹಿಸುತ್ತಿರುವ ಠೇವಣಿಗಳಿಗೆ ಮತ್ತು ವಿತರಿಸುವ ಸಾಲಗಳಿಗೆ ಬಡ್ಡಿದರ ನಿಗಧಿಪಡಿಸುವ ಹಾಗೂ ಭಾರತೀಯ ರಿಸರ್ವ್ ಬ್ಯಾಂಕ್ ಕಾಯ್ದೆ 1934, ಬ್ಯಾಂಕಿಂಗ್ ರೆಗ್ಯುಲೇಷನ್ ಕಾಯ್ದೆ 1949 ಮತ್ತು ಉಪನಿಯಮಗಳಿಗೆ ವ್ಯತಿರಿಕ್ತವಾಗಿ ಕಾರ್ಯನಿರ್ವಹಿಸುತ್ತಿರುವುದನ್ನು ತಡೆಗಟ್ಟಲು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಕಲಂ 70ರಡಿ ನಿರ್ದೇಶನ ನೀಡುವ ಕುರಿತು.

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ಸೌಹಾರ್ದ ಸಹಕಾರಿಗಳು ಸಂಗ್ರಹಿಸುತ್ತಿರುವ ಠೇವಣಿಗಳಿಗೆ ಮತ್ತು ವಿತರಿಸುವ ಸಾಲಗಳಿಗೆ ಬಡ್ಡಿದರ ನಿಗಧಿಪಡಿಸುವ ಹಾಗೂ ಭಾರತೀಯ ರಿಸರ್ವ್ ಬ್ಯಾಂಕ್ ಕಾಯ್ದೆ 1934, ಬ್ಯಾಂಕಿಂಗ್ ರೆಗ್ಯುಲೇಷನ್ ಕಾಯ್ದೆ 1949 ಮತ್ತು ಉಪನಿಯಮಗಳಿಗೆ ವ್ಯತಿರಿಕ್ತವಾಗಿ ಕಾರ್ಯನಿರ್ವಹಿಸುತ್ತಿರುವುದನ್ನು ತಡೆಗಟ್ಟಲು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಕಲಂ 70ರಡಿ ನಿರ್ದೇಶನ ನೀಡುವ ಕುರಿತು

**ಉಲ್ಲೇಖ:-** ಸಹಕಾರ ಸಂಘಗಳ ನಿಬಂಧಕರ ಪ್ರಸ್ತಾವನೆ ಸಂಖ್ಯೆ: ಆರ್‌ಸಿಎಸ್/ಆರ್‌ಎಸ್‌ಆರ್/ ಸೌಹಾರ್ದ/ ಬಡ್ಡಿದರ ನಿಗಧಿ/142/2023-24 ದಿನಾಂಕ:14.03.2024

*****

**ಪ್ರಸ್ತಾವನೆ :**

ಮೇಲೆ ಓದಲಾದ ಪ್ರಸ್ತಾವನೆಯಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಕಾಯ್ದೆ 1934, ಬ್ಯಾಂಕಿಂಗ್ ರೆಗ್ಯುಲೇಷನ್ ಕಾಯ್ದೆ 1949 ಹಾಗೂ ಠೇವಣಿದಾರರ ಹಿತಕ್ಕೆ ವ್ಯತಿರಿಕ್ತವಾಗಿ ಕಾರ್ಯನಿರ್ವಹಿಸುತ್ತಿರುವ ಸೌಹಾರ್ದ ಸಹಕಾರಿ ಅಧಿನಿಯಮ 1997 ಕಲಂ 70ರಡಿ ನಿರ್ದೇಶನ ನೀಡುವ ಕುರಿತು ಸೌಹಾರ್ದ ಸಹಕಾರಿಗಳು ಮನಸೋಇಚ್ಛೆ ಠೇವಣಿಗಳ ಮೇಲೆ ಬಡ್ಡಿದರ ನಿಗಧಿ ಮಾಡಿ ಸದಸ್ಯರ ಸಾಲದ ಅವಶ್ಯಕತೆಗೆ ಮೀರಿ ಠೇವಣಿಯನ್ನು ಸಾರ್ವಜನಿಕರಿಂದ ಸಂಗ್ರಹಿಸುತ್ತಿರುವ ಬಗ್ಗೆ ಹಾಗೂ ಸಾಲದ ಮೇಲೆ ಮಿತಿಮೀರಿ ಬಡ್ಡಿದರವನ್ನು ನಿಗಧಿಪಡಿಸುತ್ತಿರುವುದು ಮತ್ತು ಠೇವಣಿ ಹಣವನ್ನು ವೈಯಕ್ತಿಕ ಹಿತಕ್ಕೋಸ್ಕರ ದುರುಪಯೋಗಪಡಿಸಿಕೊಳ್ಳುತ್ತಿರುವ ಕುರಿತು ಹಾಗೂ ಠೇವಣಿ ಹಣವನ್ನು ಠೇವಣಿದಾರರಿಗೆ ಮರುಪಾವತಿಸಲು ವಿಫಲವಾಗುತ್ತಿರುವ ಸಂಬಂಧ ಸರ್ಕಾರಕ್ಕೆ ಹಾಗೂ ಇಲಾಖೆಗೆ ಅನೇಕ ದೂರುಗಳು ಬರುತ್ತಿವೆ ಎಂದು, ಅಲ್ಲದೇ ವಿಷಯ ಸಂಬಂಧ ವಿಧಾನ ಮಂಡಲದ ಉಭಯ ಸದನಗಳಲ್ಲಿ ಹಾಗೂ ಭಾರತೀಯ ರಿಸರ್ವ್ ಬ್ಯಾಂಕ್‌ನ ಟ್ಯಾಫ್‌ಕಾಬ್ (Task force on Urban Co-operative Banks-TAFCUB) ಸಭೆಗಳಲ್ಲಿ ಕೂಡ ಸೌಹಾರ್ದ ಸಹಕಾರಿಗಳು ಠೇವಣಿಗಳ ಹಾಗೂ ಹೆಚ್ಚಿನ ಬಡ್ಡಿದರ ನಿಗಧಿಪಡಿಸುತ್ತಿರುವ ಕುರಿತು ಚರ್ಚೆಯಾಗುತ್ತಿರುವುದಾಗಿ ತಿಳಿಸಿ, ಸೌಹಾರ್ದ ಸಹಕಾರಿಗಳ ಸದಸ್ಯರ ಹಾಗೂ ವಿಶೇಷವಾಗಿ ಠೇವಣಿದಾರರು, ಸಾಲಗಾರರ ಹಾಗೂ ಸಾರ್ವಜನಿಕರ ಹಿತಾಸಕ್ತಿಯನ್ನು ಸಂರಕ್ಷಿಸುವ ಸದುದ್ದೇಶದಿಂದ ಬಡ್ಡಿದರ ನಿಗಧಿ ಬಗ್ಗೆ ಈ ಕೆಳಕಂಡ ನಿರ್ದೇಶನಗಳನ್ನು ನೀಡುವ ಕುರಿತು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಕಲಂ 70ರಡಿ ಸರ್ಕಾರಕ್ಕೆ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ 01ನೇ ಏಪ್ರಿಲ್ 2024 ರಿಂದ ಜಾರಿಗೆ ಬರುವಂತೆ ಆದೇಶ ಹೊರಡಿಸಲು ನಿಬಂಧಕರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪರಿಶೀಲಿಸಲಾಗಿ, ಇತ್ತೀಚಿನ ವಿದ್ಯಮಾನಗಳಲ್ಲಿ ಸೌಹಾರ್ದ ಸಹಕಾರಿಗಳ ಹಣ ದುರುಪಯೋಗ ಹಾಗೂ ಠೇವಣಿದಾರರಿಗೆ ವಂಚನೆ ಮಾಡಿರುವ ಹಲವಾರು ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಮತ್ತು ನಿಯಮ 2004ಗಳನ್ನು ಉಲ್ಲಂಘಿಸಿ ಹಲವಾರು ಸೌಹಾರ್ದ ಸಹಕಾರಿಗಳು ಸಾಲದ ಮೇಲೆ ಮಿತಿಮೀರಿದ ಬಡ್ಡಿ ವಿಧಿಸುತ್ತಿರುವುದು, ಸಹಕಾರಿಯಲ್ಲಿ ಹೂಡಿಕೆ ಮಾಡಲಾದ ಹಣವನ್ನು ಸ್ವಹಿತಾಸಕ್ತಿಗಾಗಿ ಬಳಸಿಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಸೌಹಾರ್ದ ಸಹಕಾರಿ ಸದಸ್ಯ ಠೇವಣಿದಾರರು, ಸಾಲಗಾರರು ಹಾಗೂ ಸಾರ್ವಜನಿಕರ ಹಿತಾಸಕ್ತಿಯನ್ನು ಸಂರಕ್ಷಿಸುವ ಸದುದ್ದೇಶದಿಂದ ಬಡ್ಡಿ ದರ ನಿಗಧಿ ಪಡಿಸುವ ಕುರಿತು ನಿರ್ದೇಶನಗಳನ್ನು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಕಲಂ 70ರಡಿ ಸರ್ಕಾರಕ್ಕೆ ಪ್ರದತ್ತವಾಗಿರುವ ಅಧಿಕಾರದನ್ವಯ ನೀಡಿ ದಿನಾಂಕ:01.04.2024ರಿಂದ ಜಾರಿಗೆ ಬರುವಂತೆ ಆದೇಶ ಹೊರಡಿಸುವುದು ಸೂಕ್ತವೆಂದು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಸಿಇ 38 ಸಿಎಲ್‌ಎಮ್ 2024, ಬೆಂಗಳೂರು</u>**

**<u>ದಿನಾಂಕ:16.03.2024</u>**

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಕಲಂ 70ರಡಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸೌಹಾರ್ದ ಸಹಕಾರಿ ಸದಸ್ಯ ಠೇವಣಿದಾರರ ಮತ್ತು ಸಾಲಗಾರರ ಹಾಗೂ ಸಾರ್ವಜನಿಕರ ಹಿತಾಸಕ್ತಿಯನ್ನು ಸಂರಕ್ಷಿಸುವ ಸಲುವಾಗಿ ಮತ್ತು ಸೌಹಾರ್ದ ಸಹಕಾರಿಗಳ ಗುಣಮಟ್ಟದ ಅಭಿವೃದ್ಧಿಗಾಗಿ ದಿನಾಂಕ:01.04.2024 ರಿಂದ ಜಾರಿಗೆ ಬರುವಂತೆ ಈ ಕೆಳಕಂಡ ನಿರ್ದೇಶನಗಳನ್ನು ನೀಡಿ ಆದೇಶಿಸಿದೆ.

- ಸೌಹಾರ್ದ ಸಹಕಾರಿಗಳು ಸಂಗ್ರಹಿಸುತ್ತಿರುವ ಠೇವಣಿಗಳಿಗೆ ರಾಷ್ಟ್ರದಲ್ಲಿಯೇ ಹೆಚ್ಚು ವಹಿವಾಟನ್ನು ಹೊಂದಿರುವ ಸರ್ಕಾರಿ ಸ್ವಾಮ್ಯದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ವಿವಿಧ ಪ್ರಕಾರದ ಠೇವಣಿಯ ಮೇಲೆ ವಿವಿಧ ಅವಧಿಗೆ ನಿಗಧಿಪಡಿಸುವ ಬಡ್ಡಿದರ ಅಥವಾ ಅದರ ಮೇಲೆ ಶೇಕಡ ಎರಡು (2%) ರಷ್ಟು ಅಧಿಕ ಬಡ್ಡಿಯನ್ನು ಮಾತ್ರ ನಿಗಧಿಪಡಿಸತಕ್ಕದ್ದು.
- ಹಿರಿಯ ನಾಗರೀಕರ ಠೇವಣಿಯ ಮೇಲೆ ಶೇ.0.50 ರಷ್ಟು ಅಧಿಕ ಬಡ್ಡಿಯನ್ನು ನಿಗಧಿಪಡಿಸಬಹುದಾಗಿದೆ.
- ಹೆಚ್ಚುವರಿ ದ್ರವ ಸಂಪನ್ಮೂಲವನ್ನು ಕಡ್ಡಾಯವಾಗಿ ಸಹಕಾರ ಸಂಸ್ಥೆಗಳಾದ ಅಪೆಕ್ಸ್ ಬ್ಯಾಂಕ್ ಮತ್ತು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಲ್ಲಿ ಹೂಡಿಕೆ ಮಾಡತಕ್ಕದ್ದು.
- ಪಿಗ್ಮಿ ಠೇವಣಿಯ ಮೇಲೆ ಕೊಡುವ ಕಮಿಷನ್ ದರವು ಶೇಕಡ ಮೂರನ್ನು ಮೀರತಕ್ಕದ್ದಲ್ಲ.
- ಬೇರೆ ಯಾವುದೇ ಪ್ರಾಥಮಿಕ ಸಹಕಾರ ಸಂಘ ಮತ್ತೊಂದು ಸೌಹಾರ್ದ ಸಹಕಾರಿಯಲ್ಲಿ ಹಾಗೂ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ರಚಿಸಲಾದ ಫರ್ಮ್ ಕಂಪನಿ ಅಥವಾ ಯಾವುದೇ ಇತರೇ ನಿಗಮಿತ ನಿಕಾಯಗಳಲ್ಲಿ ಠೇವಣಾತಿಸುವ ದೃಷ್ಟಿಯಿಂದ ಠೇವಣಿ ಸಂಗ್ರಹಿಸತಕ್ಕದ್ದಲ್ಲ ಹಾಗೂ ಹೂಡಿಕೆ ಮಾಡತಕ್ಕದ್ದಲ್ಲ.
- ಸಂಗ್ರಹಿಸಿದ ಠೇವಣಿ ಹಣವನ್ನು ಷೇರು ಮಾರುಕಟ್ಟೆಯಲ್ಲಿ ತೊಡಗಿಸತಕ್ಕದ್ದಲ್ಲ.

2

Umashankar

- ಸಹಕಾರ ಸಂಸ್ಥೆಗಳು ಸ್ಥಾನಿಕ ಹಣಕಾಸು ಸಂಸ್ಥೆಗಳಾಗಿದ್ದು, ಇಂತಹ ಸಹಕಾರ ಸಂಸ್ಥೆಗಳಲ್ಲಿ ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಮುಖಾಂತರ ಕಮಿಷನ್/ಇನ್‌ಸೆಂಟೀವ್ ಕೊಡುವುದರ ಮೂಲಕ ಠೇವಣಿಗಳನ್ನು ಸ್ವೀಕರಿಸತಕ್ಕದ್ದಲ್ಲ.
- ವಿತರಿಸುವ ಸಾಲಗಳಿಗೆ ಗರಿಷ್ಠ ಶೇಕಡ ಹನ್ನೆರಡು ಬಡ್ಡಿದರ ಮೀರತಕ್ಕದ್ದಲ್ಲ. ಸುಸ್ತಿ ಪ್ರಕರಣಗಳಲ್ಲಿ ಹೆಚ್ಚುವರಿಯಾಗಿ ಗರಿಷ್ಠ ಶೇಕಡ ಎರಡರಷ್ಟು ಬಡ್ಡಿದರ ಮೀರತಕ್ಕದ್ದಲ್ಲ.
- ಪತ್ತಿನ ಸೌಹಾರ್ದ ಸಹಕಾರಿಗಳ ಉಪನಿಯಮಗಳು ಸದಸ್ಯರುಗಳಿಗೆ ವಿವಿಧ ಸ್ವರೂಪದ ಸಾಲ ಸೌಲಭ್ಯ ನೀಡುವುದಕ್ಕೆ ಮಾತ್ರ ಸೀಮಿತವಾಗಿರತಕ್ಕದ್ದು.
- ಸಹಕಾರಿಯ ಹೆಸರಿನ ಚೆಕ್ಕನ್ನು ಮುದ್ರಿಸತಕ್ಕದ್ದಲ್ಲ ಹಾಗೂ ಚೆಕ್ ಡಿಸ್ಕೌಂಟ್ ಮಾಡತಕ್ಕದ್ದಲ್ಲ.
- ಸದಸ್ಯರಿಗೆ ಮಂಜೂರು ಮಾಡುವ ಎಲ್ಲಾ ಸಾಲಗಳನ್ನು ಚೆಕ್/RTGS/NEFT ಮುಖಾಂತರವೇ ವಿತರಿಸತಕ್ಕದ್ದು.
- ಠೇವಣಿ ಮತ್ತು ಸಾಲಗಳ ಕುರಿತಂತೆ ಒಳನಿಯಮಾವಳಿಗಳನ್ನು ರಚಿಸಿಕೊಳ್ಳತಕ್ಕದ್ದು.
- ಓರ್ವ ಸದಸ್ಯನು ಗರಿಷ್ಠ ಎಷ್ಟು ಸಾಲ ಪಡೆಯಬಹುದೆಂಬುದನ್ನು ಉಪನಿಯಮದಲ್ಲಿ ನಿರ್ದಿಷ್ಟವಾಗಿ ನಿಗಧಿಪಡಿಸಿಕೊಳ್ಳತಕ್ಕದ್ದು.
- ಸುಸ್ತಿ ಸಾಲಗಳ ಬಗ್ಗೆ ನಿಗಧಿತ ಕಾಲದೊಳಗೆ ತಪ್ಪದೆ ಕಾನೂನು ಕ್ರಮ ಜರುಗಿಸುವುದು ಹಾಗೂ ಅಮಲ್ಜಾರಿಗಳನ್ನು ಕಟ್ಟು ನಿಟ್ಟಾಗಿ ವಿಳಂಬವಿಲ್ಲದೆ ಜಾರಿಗೊಳಿಸುವುದು.
- ಸಂಘದ ಪ್ರತಿ ನೌಕರನಿಗೂ ಪ್ರತ್ಯೇಕ ಜಾಬ್ ಚಾರ್ಟ್ ಜಾರಿ ಮಾಡಿ ಸ್ವೀಕೃತಿಯನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಲ್ಲಿ ಇಡತಕ್ಕದ್ದು ಹಾಗೂ ನೌಕರರಿಂದ ಸೂಕ್ತ ಭದ್ರತೆ ಹಾಗೂ ಫೆಡಿಲಿಟಿ ಬಾಂಡ್‌ಗಳನ್ನು ಪಡೆದು ಸುರಕ್ಷಿತವಾಗಿಡುವುದು.
- ಸಾಲಗಳನ್ನು ಮಂಜೂರು ಮಾಡುವಾಗ ಮುಖ್ಯವಾಗಿ ಭದ್ರತೆ ಹಾಗೂ ಮರುಪಾವತಿ ಸಾಮರ್ಥ್ಯವನ್ನು ಗಮನದಲ್ಲಿಡತಕ್ಕದ್ದು.
- ಹಣವರ್ಗಾವಣೆ, ಹಣಖಾತಾಂತರ (Money Laundering) ಚಟುವಟಿಕೆಗಳನ್ನು ಹಾಗೂ ವಿದೇಶಿ ವಿನಿಮಯ ಕಾಯ್ದೆ ಸೇರಿದಂತೆ ಇತರೆ ಯಾವುದೇ ಕಾನೂನಿಗೆ ವ್ಯತಿರಿಕ್ತ ಕಾರ್ಯನಡೆಸತಕ್ಕದ್ದಲ್ಲ.
- ಬ್ಯಾಂಕಿಂಗ್ ರೆಗ್ಯುಲೇಷನ್ ಕಾಯ್ದೆ 1949ಕ್ಕೆ ವಿರುದ್ಧವಾದ ಯಾವುದೇ ಉದ್ದೇಶಗಳನ್ನು ಹೊಂದಿರಬಾರದು.
- ಪ್ರತಿ ತ್ರೈಮಾಸಿಕವಾಗಿ ಸಂಘದ ಆಡಳಿತ ಮಂಡಳಿಯು ಠೇವಣಿ ಮತ್ತು ಸಾಲದ ಬಡ್ಡಿ ದರವನ್ನು ಪರಿಷ್ಕರಿಸಿ ಈ ಕುರಿತು ಸಹಕಾರ ಸಂಘಗಳ ಜಿಲ್ಲಾ ಉಪನಿಬಂಧಕರಿಗೆ ಕಡ್ಡಾಯವಾಗಿ ವರದಿಯನ್ನು ಸಲ್ಲಿಸತಕ್ಕದ್ದು.
- ಉಪ ವಿಭಾಗಿಯ ಮಟ್ಟದಲ್ಲಿ ಸಹಕಾರ ಸಂಘಗಳ ನಿಬಂಧಕರ, ಜಿಲ್ಲಾ ಮಟ್ಟದಲ್ಲಿ ಸಹಕಾರ ಸಂಘಗಳ ಉಪನಿಬಂಧಕರ, ಪ್ರಾಂತಿಯ ಮಟ್ಟದಲ್ಲಿ ಸಹಕಾರ ಸಂಘಗಳ ಜಂಟಿ ನಿಬಂಧಕರ ಅಧ್ಯಕ್ಷತೆಯಲ್ಲಿ ತ್ರೈಮಾಸಿಕವಾಗಿ ಸಹಕಾರ ಸಂಘಗಳ ಸಭೆ ಜರುಗಿಸಿ ಈ ಆದೇಶದಲ್ಲಿ ನೀಡಿದ ನಿರ್ದೇಶನದಂತೆ ಬಡ್ಡಿದರ ಪರಿಷ್ಕರಿಸಿ ನಿಗಧಿಪಡಿಸುತ್ತಿರುವ ಕುರಿತು ಪರಾಮರ್ಶಿಸುವುದು ಹಾಗೂ ಉಲ್ಲಂಘನೆ ಮಾಡುವ ಸಹಕಾರ ಸಂಘಗಳ ಆಡಳಿತ ಮಂಡಳಿ ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ವಿರುದ್ಧ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಅವಕಾಶಗಳಂತೆ ಕಟ್ಟು ನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು ಹಾಗೂ ಸಭೆಯ ನಿರ್ಣಯ ಮತ್ತು ತೆಗೆದುಕೊಂಡ ಕ್ರಮದ ಕುರಿತು ಮೇಲಾಧಿಕಾರಿಗಳಿಗೆ ವರದಿಯನ್ನು ಸಲ್ಲಿಸತಕ್ಕದ್ದು.

ಈ ಆದೇಶದ ನಿರ್ದೇಶನಗಳನ್ನು ಅನುಷ್ಠಾನಗೊಳಿಸಲು ವಿಫಲರಾಗುವ ಇಲಾಖಾಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ**
**ಮತ್ತು ಅವರ ಹೆಸರಿನಲ್ಲಿ.**

Diwakar 16/3/24

**(ಎ.ಸಿ.ದಿವಾಕರ್)**
**ವಿಶೇಷ ಕರ್ತವ್ಯಾಧಿಕಾರಿ ಹಾಗೂ**
**ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ**
**ಸಹಕಾರ ಇಲಾಖೆ.**

## "ಸರ್ಕಾರದ ನಿರ್ದೇಶನ ಆದೇಶಕ್ಕೆ ಗೌರವಾನ್ವಿತ ಉಚ್ಛ ನ್ಯಾಯಾಲಯದ ತಡೆಯಾಜ್ಞೆ"

## ಸೌಹಾರ್ದ ಸಹಕಾರಿಗಳ ಮೇಲೆ ನಿಯಂತ್ರಣ ಸಾಧಿಸುವ ಸರಕಾರದ ಆದೇಶದ ಮೇಲೆ ಹೈಕೋರ್ಟ್‌ನಲ್ಲಿ ಸಂಯುಕ್ತ ಸಹಕಾರಿ ಹಾಗೂ ವಿವಿಧ ಸೌಹಾರ್ದ ಸಹಕಾರಿಗಳಿಂದ ರಿಟ್ ಅರ್ಜಿ ಮಾನ್ಯ ಹೈಕೋರ್ಟ್‌ನಲ್ಲಿ ಸರ್ಕಾರದ ಸುತ್ತೋಲೆ ಆದೇಶಕ್ಕೆ ತಡೆ ನೀಡಿದೆ.

ಕರ್ನಾಟಕ ಸರಕಾರ ಸೌಹಾರ್ದ ಸಹಕಾರ ಸಂಘಗಳ ಮೇಲೆ ನಿಯಂತ್ರಣ ಸಾಧಿಸುವ ನಿಟ್ಟಿನಲ್ಲಿ ದಿನಾಂಕ 14-03-2024 ಕ್ರಸಂ : ಆರ್‌ಸಿಎಸ್/ಆರ್‌ಎಸ್‌ಆರ್/ಸೌಹಾರ್ದ/ಬಿಡಿದರ ನಿಗಧಿ/142/2023-24ರ ಆದೇಶ ಹೊರಡಿಸಿದೆ. ಈ ಆದೇಶದಿಂದ ಸೌಹಾರ್ದ ಸಹಕಾರಿಗಳ ಸ್ವಾಯತ್ತತೆಗೆ ಸೌಹಾರ್ದ ಸಹಕಾರಿ ಕಾಯ್ದೆಯ ಆಶಯಕ್ಕೆ ಧಕ್ಕೆ ಬಂದಿದೆ.

ಆದ್ದರಿಂದ ರಾಜ್ಯದ ಹಲವಾರು ಸೌಹಾರ್ದ ಸಹಕಾರ ಸಂಘಗಳು ಹಾಗೂ ಸೌಹಾರ್ದ ಸಹಕಾರಿಗಳ ಒಕ್ಕೂಟಗಳು ಸಂಯುಕ್ತ ಸಹಕಾರಿಯನ್ನು ಸಂಪರ್ಕಿಸಿ ಆಡಳಿತ ಮಂಡಳಿಯವರ ಜೊತೆ ಸಮಾಲೋಚನೆ ಮಾಡಿ ಸಂಯುಕ್ತ ಸಹಕಾರಿ ಈ ಬಗ್ಗೆ ತ್ವರಿತ ಹಾಗೂ ಸೂಕ್ತ ಕ್ರಮವಿಡಬೇಕೆಂದು ಒತ್ತಾಯಿಸಿದರು. ಪರಿಣಾಮವಾಗಿ ದಿನಾಂಕ 22.03.2024 ರಂದು ನಡೆದ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಸಭೆಯಲ್ಲಿ ಈ ಆದೇಶದ ವಿರುದ್ಧ ರಾಜ್ಯ ಉಚ್ಛ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಬೇಕೆಂದು ತೀರ್ಮಾನಿಸಲಾಗಿದೆ. ದಿನಾಂಕ 27.03.2024 ರಂದು ರಾಜ್ಯ ಹೈಕೋರ್ಟಿನಲ್ಲಿ Case FR number 9718/2024 ಅರ್ಜಿ ಸಲ್ಲಿಸಲಾಗಿದೆ. ಸಂಯುಕ್ತ ಸಹಕಾರಿ ಜೊತೆಗೆ ನವ ಕರ್ನಾಟಕ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಹಾಗೂ ಹೊಯ್ಸಳ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಸಹಕಾರಿಗಳು ಸಹ ಅರ್ಜಿ ಸಲ್ಲಿಸಿವೆ. ಬೆಂಗಳೂರು ಸೌಹಾರ್ದ ಸಹಕಾರಿಗಳ ಒಕ್ಕೂಟದ ಜೊತೆಗೆ ಐಸಿರಿ ಸೌಹಾರ್ದ ಸಹಕಾರಿ ನಿ., ಬೆಂಗಳೂರು, ಸಹಕಾರಿ ಅರ್ಜಿ ಸಲ್ಲಿಸಿವೆ. ಈ ಎಲ್ಲಾ ಅರ್ಜಿಗಳು ದಿನಾಂಕ 01.04.2024 ಮತ್ತು ದಿನಾಂಕ 04.04.2024 ರಂದು ಈ ಅರ್ಜಿಗಳು ವಿಚಾರಣೆಯಾಗಿ ಹೈಕೋರ್ಟ್ ತಡೆಆಜ್ಞೆ ನೀಡಿದೆ. ಸರ್ಕಾರಕ್ಕೆ ಆಕ್ಷೇಪಣೆಗಳನ್ನು ಸಲ್ಲಿಸಲು ಹಾಗೂ ತಡೆಆಜ್ಞೆಯನ್ನ ತೆರವುಗೊಳಿಸಲು ಸರ್ಕಾರಕ್ಕೆ ಮೂರುವಾರಗಳ ಅವಧಿಯನ್ನು ನೀಡಲಾಗಿದೆ. ಈ ತಡೆ ಆಜ್ಞೆ ಮೂರು ವಾರಗಳ ವರೆಗೆ ಜಾರಿಯಲ್ಲಿದ್ದು ನಂತರ ಅರ್ಜಿಯ ಸಂಪೂರ್ಣ ವಿಚಾರಣೆಯನ್ನು ತಗೆದುಕೊಳ್ಳುವುದಾಗಿ ತಿಳಿಸಲಾಗಿದೆ.

### ಸೌಹಾರ್ದ ಸಹಕಾರಿಗಳಿಂದ ಅಭಿನಂದನೆಗಳು :

ಸರಕಾರ ಆದೇಶ/ನಿರ್ದೇಶನಕ್ಕೆ ಹೈಕೊರ್ಟ್ ತಡೆಯಾಜ್ಞೆ ನೀಡಿರುವುದಕ್ಕೆ ರಾಜ್ಯದ ಸೌಹಾರ್ದ ಸಹಕಾರಿಗಳು ಸಂತೋಷವನ್ನು ವ್ಯಕ್ತಪಡಿಸಿದ್ದಾರೆ. ಈ ಕಾರ್ಯದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿಯವರನ್ನು ಅಭಿನಂದಿಸಿದ್ದಾರೆ.

ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಇವರು ಅಧ್ಯಕ್ಷತೆಯಲ್ಲಿ ದಿನಾಂಕ 05.04.2024 ರಂದು ನಡೆದ ಆನ್‌ಲೈನ್ ಸಭೆಯಲ್ಲಿ ಕಲಬುರಗಿ ಹಾಗೂ ಬೆಂಗಳೂರು ವಿಭಾಗದ 650ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಹಾಗೂ ಬೆಳಗಾವಿ ಹಾಗೂ ಮೈಸೂರು ವಿಭಾಗದ 700ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದರು.

## ಸರಕಾರದ ಆದೇಶ ವಿರೋಧಿಸಿ ವಿವಿಧ ಜಿಲ್ಲೆಗಳಲ್ಲಿ ಸಭೆಗಳು ಹಾಗೂ ಮನವಿ ಸಲ್ಲಿಕೆ.



ರಾಯಚೂರು ಜಿಲ್ಲಾಧಿಕಾರಿ ಕಛೇರಿ



ಮಾನವಿ ತಹಶೀಲ್ದಾರ್ ಕಛೇರಿ



ಸಿಂಧನೂರು ತಹಶೀಲ್ದಾರ್ ಕಛೇರಿ



ಸಿರವಾರ ತಹಶೀಲ್ದಾರ್ ಕಛೇರಿ

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ವತಿಯಿಂದ ಮಹಿಳಾ ದಿನದ ಅರ್ಥಪೂರ್ಣ ಆಚರಣೆ.

## ಮಹಿಳೆಯರ ಆರ್ಥಿಕ ಸದೃಢತೆಗೆ ಕಾರ್ಯಕ್ರಮ ಪೂರಕ – ಶ್ರೀ ಜಿ. ನಂಜನಗೌಡ, ಸಿಎ ಅಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು



ಉದ್ಘಾಟನೆ



ಸನ್ಮಾನ

**ಬೆಂಗಳೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವತಿಯಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸಲಾಯಿತು.

**ಮಹಿಳೆಯರ ಆರ್ಥಿಕ ಭದ್ರತೆಗೆ ಇಂತಹ ಕಾರ್ಯಕ್ರಮಗಳು ಅಗತ್ಯ : ಜಿ. ನಂಜನಗೌಡ, ಅಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.**

**ಮಹಿಳೆಯರು ಆರೋಗ್ಯದ ಬಗ್ಗೆ ಹೆಚ್ಚು ಗಮನಹರಿಸಬೇಕು : ಡಾ. ಅರುಣ ಮುರುಳೀಧರ್**

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ವಹಿಸಿದ್ದರು. ಕಾರ್ಯಕ್ರಮವನ್ನು ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞ ಡಾ. ಅರುಣ ಮುರಳೀಧರ್ ದೀಪ ಬೆಳಗಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಉದ್ಘಾಟನಾ ಭಾಷಣದಲ್ಲಿ ಅವರು ಹೆಚ್ಚಿನ ಅಪಾಯದ ಗರ್ಭಧಾರಣೆ, ಗರ್ಭಾವಸ್ಥೆಯಲ್ಲಿ ವೈದ್ಯಕೀಯ ಅಸ್ವಸ್ಥತೆಗಳು ಮತ್ತು ಹದಿಹರೆಯದವರ ಆರೋಗ್ಯದ ಬಗ್ಗೆ ಮತ್ತು ಮಹಿಳೆಯರಿಗೆ ಆರೋಗ್ಯದ ಬಗ್ಗೆ ಸಲಹೆ ನೀಡಿದ ಅವರು, ಮಹಿಳೆಯರು ಕುಟುಂಬ ಮತ್ತು ಸಾಮಾಜಿಕ ಚಟುವಟಿಕೆಗಳಲ್ಲಿ ಹೆಚ್ಚು ತೊಡಗಿಸಿಕೊಳ್ಳಬೇಕು ಎಂದು ಹೇಳಿದರು. ಸದರಿ ಕಾರ್ಯಕ್ರಮವು ಮಹಿಳೆಯರ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಬಹಳ ಉಪಯುಕ್ತವಾಗಿತ್ತು.

**ಮಹಿಳಾ ಸಬಲೀಕರಣದತ್ತ ಇದು ಅರ್ಥಪೂರ್ಣ ಕಾರ್ಯಕ್ರಮ – ಶ್ರೀಮತಿ ಗಗನ ಕೆ. ಮಾನ್ಯ ಸಹಕಾರಿ ಸಂಘಗಳ ಉಪನಿಬಂಧಕರು**

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀಮತಿ ಗಗನ ಕೆ. ಮಾನ್ಯ ಸಹಕಾರಿ ಸಂಘಗಳ ಉಪನಿಬಂಧಕರು ಹಾಗೂ ಪೀಠಾಧಿಕಾರಿಗಳು, ಸೌಹಾರ್ದ ಸಹಕಾರಿ ದಾವಾಪಂಚಾಯತ್ ನ್ಯಾಯಾಲಯ, ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ. ಎಸ್. ಗುಂಡುರಾವ್ ಶ್ರೀ ವಿಜಯ ಸಿ. ಪಿ., ಶ್ರೀಮತಿ ಶೈಲಜಾ ತಪಲಿ ಹಾಗೂ ಶ್ರೀಮತಿ ಭಾರತಿ ಜಿ. ಭಟ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು. ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರು ಹಾಗೂ ಮಾನ್ಯ ನಿರ್ದೇಶಕರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ಪ್ರಾಸ್ತಾವಿಕ ಭಾಷಣ ಮಾಡಿದರು. ಶ್ರೀಮತಿ ಆರ್. ಶೋಭಾ ಡಿಜಿಎಂ ಇವರು ಅತಿಥಿಗಳು ಮತ್ತು ಪ್ರತಿನಿಧಿಗಳನ್ನು ಸ್ವಾಗತಿಸಿದರು.

**ಮಹಿಳಾ ಸಾಧಕೀಯರಿಗೆ ಸನ್ಮಾನ**

ಉದ್ಘಾಟನಾ ಕಾರ್ಯಕ್ರಮದ ನಂತರ ಸಂಯುಕ್ತ ಸಹಕಾರಿಯು ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಐದು ಮಹಿಳೆಯರನ್ನು ಸನ್ಮಾನಿಸಿತು. ಶ್ರೀಮತಿ ವೇದಾ ಮನೋಹರ ಮಸ್ಕಿ, ಸಾವಯವ ಕೃಷಿ ಮತ್ತು ಹೈನುಗಾ–ರಿಕೆ ಕ್ಷೇತ್ರ, ಶ್ರೀಮತಿ ಸೌಮ್ಯ ಎಸ್, ಶಿಕ್ಷಣ ಕ್ಷೇತ್ರ, ಶ್ರೀಮತಿ ಆಶಾ ವಿ ಸಾಮಾಜಿಕ ಕ್ಷೇತ್ರ, ಶ್ರೀಮತಿ ಅನುಸೂಯಾ ಟಿ, ಸಹಕಾರಿ ಕ್ಷೇತ್ರ, ಶ್ರೀಮತಿ ರೇಣುಕಾದೇವಿ ಬಿ, ಕೈಗಾರಿಕೆ ಕ್ಷೇತ್ರ. ಇವರನ್ನು ಸಂಯುಕ್ತ ಸಹಕಾರಿಯ ವತಿಯಿಂದ ಸನ್ಮಾನ ಮಾಡಿ ಗೌರವಿಸಲಾಯಿತು. ಸನ್ಮಾನವನ್ನು ಸ್ವೀಕರಿಸಿದ ಸಾಧಕೀಯರ ತಮ್ಮ ಅನುಭವದ ನುಡಿಗಳನ್ನು ಕಾರ್ಯಕ್ರಮದಲ್ಲಿ ಹಂಚಿಕೊಂಡರು. ಕಾರ್ಯಕ್ರಮದಲ್ಲಿ ಉಪನ್ಯಾಸವನ್ನು ಶ್ರೀಮತಿ ಕಲ್ಪನಾ ಶಿವಣ್ಣ ಇವರು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಲ್ಲಿ ಮಹಿಳೆಯರಿಗೆ ನೀಡಿದ ಯೋಜನೆಗಳ ಕುರಿತು ಉಪನ್ಯಾಸ ನೀಡಿದರು.

**ಸಮಾರೋಪ ಸಮಾರಂಭ :**

**ಮಹಿಳೆಯರ ಭಾಗವಹಿಸುವಿಕೆ ಪ್ರಮಾಣ ಹೆಚ್ಚಿದೆ – ಶ್ರೀ ಎ ಆರ್ ಪ್ರಸನ್ನಕುಮಾರ್ ಉಪಾಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು**

ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಎ ಆರ್ ಪ್ರಸನ್ನಕುಮಾರ್ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮ

ತುಂಬಾ ಅರ್ಥಪೂರ್ಣವಾಗಿದೆ ಎಂದರು. ಮಹಿಳೆಯರು ಇಂದು ಪಡೆದ ಮಾಹಿತಿಯನ್ನು ಮುಂದುವರೆಸಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮತ್ತು ಸ್ಥಳೀಯ ಸಂಸ್ಥೆಗಳು ಸೇರಿದಂತೆ ಮಹಿಳೆಯರ ಅಭಿವೃದ್ಧಿಗೆ ಹಲವಾರು ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗುತ್ತಿದೆ. ಮಹಿಳೆಯರು ಇದರ ಸದುಪಯೋಗ ಪಡೆದುಕೊಳ್ಳಬೇಕು. ಮಹಿಳೆಯರು ಬೆಳೆಯಲು ಪ್ರೋತ್ಸಾಹ ಅಗತ್ಯ. ಸಹಕಾರಿ ಸಂಸ್ಥೆಗಳು, ಸ್ಥಳೀಯ ಸಂಸ್ಥೆಗಳು, ಸಮಾಜ ಮತ್ತು ಸರ್ಕಾರಗಳಿಂದ ಅನೇಕ ಕಾರ್ಯಕ್ರಮಗಳು ಮಹಿಳಾ ಸಬಲೀಕರಣದಲ್ಲಿ ತೊಡಗಿಸಿಕೊಂಡಿವೆ. ಪ್ರಸ್ತುತ ಎಲ್ಲಾ ಕ್ಷೇತ್ರಗಳಲ್ಲಿ ಮಹಿಳೆಯರು ಕೆಲಸ ಮಾಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಇದು ಮುಂದುವರೆಯಬೇಕು ಮತ್ತು ಹೆಚ್ಚಾಗಬೇಕು. ಇಂತಹ ಕಾರ್ಯಕ್ರಮಗಳು ರಾಜ್ಯದ ಎಲ್ಲ ಭಾಗಗಳಲ್ಲಿ ನಡೆಯಬೇಕು ಎಂದು ಸಮಾರೋಪ ಭಾಷಣ ಮಾಡಿದರು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಭಾರತಿ ಜಿ ಭಟ್ ವಂದನಾರ್ಪಣೆ ಮಾಡಿದರು.

ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಪಾಟೀಲ ಅವರು ಕಾರ್ಯಕ್ರಮದ ಪರಿಕಲ್ಪನೆ ಮತ್ತು ಪರಿಣಾಮಕಾ–ರಿತ್ವವನ್ನು ವಿವರಿಸಿದರು. ಕಾರ್ಯಕ್ರಮದ ಸಮಗ್ರ ವರದಿಯನ್ನು ಡಿಜಿಎಂ ಶ್ರೀಮತಿ ಶೋಭಾ ಆರ್ ನೀಡಿದರು.

ಸದರಿ ಕಾರ್ಯಕ್ರಮದಲ್ಲಿ 46 ವಿವಿಧ ಸೌಹಾರ್ದ ಸಹಕಾರಿ ಸಂಘಗಳ 105 ಮಹಿಳೆಯರು ಭಾಗವಹಿಸಿ ಕಾರ್ಯಕ್ರಮದ ಪ್ರಯೋಜನ ಪಡೆದರು.



ಗಣ್ಯರೊಂದಿಗೆ ಭಾಗವಹಿಸಿದ ಮಹಿಳಾ ಸಹಕಾರಿಗಳು

---


ಉದ್ಘಾಟನೆ


ಸನ್ಮಾನ

**ಉಡುಪಿ :** ಮೈಸೂರು ಪ್ರಾಂತೀಯ ಕಛೇರಿಯ ವತಿಯಿಂದ ದಿನಾಂಕ 13.3.2024 ರಂದು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಉಡುಪಿ ನಗರದ ಡಯಾನ ಹೋಟೆಲ್ ಇಲ್ಲಿ ಆಯೋಜನೆ ಮಾಡಲಾಗಿತ್ತು. ಸದರಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಭಾರತಿ ಜಿ ಭಟ್ ಹಾಗು ಶ್ರೀಮತಿ ಶೈಲಜಾ ತಪ್ಪಲಿ ಹಾಗೂ ಉಡುಪಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಒಕ್ಕೂಟ ಇದರ ಅಧ್ಯಕ್ಷರಾದ ಶ್ರೀ ಜಗನ್ನಾಥ ಶೆಟ್ಟಿ ಭಾಗವಹಿಸಿದ್ದರು

ಪ್ರಥಮ ಅವಧಿಯಲ್ಲಿ ಶ್ರೀಮತಿ ಅರ್ಪಿತಾ ಶೆಟ್ಟಿ, ಉಪನ್ಯಾಸಕರು, ಮಣಿಪಾಲ ಶಿಕ್ಷಣ ಸಮೂಹ. ಇವರು ಸ್ಪೂರ್ತಿಯ ಸೇರ್ಪಡೆ ಎಂಬ ವಿಷಯದ ಕುರಿತು ವಿಷಯವನ್ನು ಮಂಡಿಸಿದರು. ಎರಡನೇ ಅವಧಿಯನ್ನು ಶ್ರೀಮತಿ ಸಂಧ್ಯಾ ಶೆಣೈ ರವರು ಮಹಿಳಾ ಸಬಲೀಕರಣ ಕುರಿತು ವಿಷಯವನ್ನು ಮಂಡಿಸಿದರು ಕಾರ್ಯಕ್ರಮದ ಪ್ರಸ್ತಾವಿಕ ಮತ್ತು ಸ್ವಾಗತವನ್ನು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶಿವಕುಮಾರ ಬಿರಾದರ ರವರು ನೆರವೇರಿಸಿದರು. ಸದರಿ ಸಭೆಯಲ್ಲಿ ಪ್ರಾಂತದ ವಿವಿಧ ಸೌಹಾರ್ದ ಸಹಕಾರಿಗಳಿಂದ 122 ಜನ ಪ್ರತಿನಿಧಿಗಳು ಭಾಗವಹಿಸಿದ್ದರು

---

**ಚಿಕ್ಕಬಳ್ಳಾಪುರ :** ದಿನಾಂಕ 15.03.2024ರಂದು ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ಶ್ರೀ ಸಿರಿ ವರಮಹಾಲಕ್ಷ್ಮೀ ಸೌಹಾರ್ದ ಪತ್ತಿನ ಸಹಕಾರಿ ನಿ, ಚಿಕ್ಕಬಳ್ಳಾಪುರ ಸಹಕಾರಿಗೆ ಭೇಟಿ ನೀಡಿದರು. ಸಹಕಾರಿಯ ಕುರಿತು ಬಂದಿರುವ ದೂರಿನ ಕುರಿತು ಚರ್ಚಿಸಿ ಸೌಹಾರ್ದ ಕಾಯ್ದೆ ಮತ್ತು ನಿಯಮಾನುಸಾರ ಕಾರ್ಯನಿರ್ವಹಿಸುವಂತೆ ತಿಳಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಮಂಜುನಾಥ್, ಚಿಕ್ಕಬಳ್ಳಾಪುರ ಜಿಲ್ಲಾ ಒಕ್ಕೂಟದ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಕೇಶವಮೂರ್ತಿ ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಉಮೇಶ್ ಎ.ಎಸ್ ಇವರು ಉಪಸ್ಥಿತರಿದ್ದರು.

# ಸೌಹಾರ್ದ ಸಹಕಾರಿ ಸಂಸ್ಥೆಗಳ ಸನ್ನದು ಲೆಕ್ಕಪರಿಶೋಧಕರಿಗೆ ನಮೂನೆ ಹಾಗೂ ಮಾರ್ಗಸೂಚಿಗಳ ಕುರಿತು ಒಂದು ದಿನದ ವಿಶೇಷ ಕಾರ್ಯಾಗಾರ

## ಒಂದು ಸಹಕಾರಿ ಸಂಸ್ಥೆಯನ್ನು ಉತ್ತಮ ದಾರಿಯಲ್ಲಿ ಸಾಗಿಸುವವರು ಸನ್ನದು ಲೆಕ್ಕಪರಿಶೋಧಕರು – ಶ್ರೀ ಜಿ. ನಂಜನಗೌಡ, ಸಿಎ, ಅಧ್ಯಕ್ಷರು ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.



**ಬೆಂಗಳೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಸಹಕಾರಿಯ ಸೌಹಾರ್ದ ಸಹಕಾರಿ ಸಂಘಗಳ ಸನ್ನದು ಲೆಕ್ಕಪರಿಶೋಧಕರುಗಳಿಗೆ ನಮೂನೆ ಮತ್ತು ಮಾರ್ಗಸೂಚಿಗಳ ಕುರಿತು 23ನೇ ಮಾರ್ಚ್ 2024 ರಂದು ಒಂದು ದಿನದ ವಿಶೇಷ ಕಾರ್ಯಾಗಾರವನ್ನು "ಸೌಹಾರ್ದ ಸಹಕಾರಿ ಸೌಧ", ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ಇಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮವನ್ನು ಶ್ರೀ ಸುರೇಶ್ ರಾವ್, ಕೆಎಎಸ್, ಮಾನ್ಯ ಸಹಕಾರ ಸಂಘಗಳ ಲೆಕ್ಕ ಪರಿಶೋಧನೆ ಇಲಾಖೆ, ಬೆಂಗಳೂರು ಇವರು ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಸಿ.ಎ ಶ್ರೀ ನಂಜನಗೌಡ ಜಿ. ವಹಿಸಿದ್ದರು.

ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಎ. ಆರ್. ಪ್ರಸನ್ನ ಕುಮಾರ್, ಮಾನ್ಯ ನಿರ್ದೇಶಕರಾದ ಸಿ.ಪಿ. ವಿಜಯ್ ಹಾಗೂ ಶ್ರೀ ಬಿ ಎಸ್ ಗುಂಡೂರಾವ್ ಮತ್ತು ಚಾರ್ಟರ್ಡ್ ಅಕೌಂಟೆಂಟ್‌ಗಳಾದ ಶ್ರೀ ಮಧುಕರ್ ಹೆಗ್ಡೆ ಮತ್ತು ಶ್ರೀ ಕೆ ಶ್ರೀಧರ್, ಕೆ.ಸಿ.ಎಸ್. ಜಂಟಿ ನಿರ್ದೇಶಕರು, ಸಹಕಾರ ಸಂಘಗಳ ಲೆಕ್ಕ ಪರಿಶೋಧನೆ ಇಲಾಖೆ, ಬೆಂಗಳೂರು ಭಾಗವಹಿಸಿದ್ದರು.

**ಅರ್ಥಪೂರ್ಣ ಪ್ರತಿಕ್ರಿಯೆಯನ್ನು ಹಂಚಿಕೊಳ್ಳಲು ಇದು ಉತ್ತಮ ವೇದಿಕೆ – ಶ್ರೀ ಸುರೇಶ್ ರಾವ್, ಕೆಎಎಸ್, ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆ ನಿರ್ದೇಶಕರು, ಸಹಕಾರಿ ಇಲಾಖೆ, ಬೆಂಗಳೂರು.**

ಉದ್ಘಾಟನಾ ಸಮಾರಂಭದಲ್ಲಿ ಉಪಸ್ಥಿತರಿದ್ದ ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆಯ ನಿರ್ದೇಶಕರಾದ ಶ್ರೀ ಸುರೇಶರಾವ್, ಕೆ.ಎ.ಎಸ್. ಬೆಂಗಳೂರು ಇವರು ಮಾತನಾಡಿ, ಸೌಹಾರ್ದ ಸಹಕಾರಿ ಸಂಘಗಳ ಲೆಕ್ಕ ಪರಿಶೋಧಕರಿಗೆ ನಮೂನೆ ಮತ್ತು ಮಾರ್ಗಸೂಚಿಗಳ ಕುರಿತು ಒಂದು ದಿನದ ತರಬೇತಿ ಕಾರ್ಯಕ್ರಮ ಉತ್ತಮವಾಗಿದೆ ಮತ್ತು ಭಾಗವಹಿಸಿದ ಎಲ್ಲಾ ಪ್ರತಿನಿಧಿಗಳು ಈ ತರಬೇತಿ ಕಾರ್ಯಕ್ರಮದ ಪ್ರಯೋಜನ ಪಡೆಯಬೇಕು ಎಂದು ತಿಳಿಸಿದರು

ಕಾರ್ಯಾಗಾರದಲ್ಲಿ ಶ್ರೀ ಮಧುಕರ ಹೆಗ್ಡೆ ಮತ್ತು ಶ್ರೀ ಕೆ.ಶ್ರೀಧರ್, ಜಂಟಿ ನಿರ್ದೇಶಕರು, ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆ, ಬೆಂಗಳೂರು, ಲೆಕ್ಕಪರಿಶೋಧಕರ ದೃಷ್ಟಿಯಲ್ಲಿ ಸಹಕಾರಿ ಸಂಸ್ಥೆಗಳು ಅಳವಡಿಸಿಕೊಳ್ಳಬೇಕಾದ ಆರ್ಥಿಕ ಶಿಸ್ತುಗಳು, ಲೆಕ್ಕಪರಿಶೋಧನೆಯ ಸಮಯದಲ್ಲಿ ಸಹಕಾರಿಗಳ ಸಮಸ್ಯೆಗಳು, ಲೆಕ್ಕಪರಿಶೋಧಕರ ಜವಾಬ್ದಾರಿಗಳು, ಲೆಕ್ಕಪರಿಶೋಧನಾ ಇಲಾಖೆ ಸುತ್ತೋಲೆ ಕುರಿತು ಉಪನ್ಯಾಸ ನೀಡಿದರು. ಸದರಿ ಕಾರ್ಯಕ್ರಮದಲ್ಲಿ ಒಟ್ಟು 70 ಸನ್ನದು ಲೆಕ್ಕಪರಿಶೋಧಕರು ಭಾಗವಹಿಸಿದ್ದರು.



ಕಾರ್ಯಕ್ರಮದಲ್ಲಿ ಭಾಗವಹಿಸಿದ ಸನ್ನದು ಲೆಕ್ಕಪರಿಶೋಧಕರು

---

**ಕಲಬುರಗಿ :** ಕಲಬುರಗಿ ಪ್ರಾಂತೀಯ ಕಛೇರಿಯ ತರಬೇತಿ ಸಭಾಂಗಣದಲ್ಲಿ ಕಲಬುರಗಿ ಮತ್ತು ಯಾದಗಿರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಸಮಾಲೋಚನೆ ಸಭೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತೀಕರ್ ಹಾಗೂ ಶ್ರೀಮತಿ ಶೈಲಜಾ ತಪಲಿ ಇವರುಗಳ ಉಪಸ್ಥಿತಿಯಲ್ಲಿ ಜರುಗಿಸಲಾಯಿತ್ತು. ಸಭೆಯಲ್ಲಿ ರಾಜ್ಯ ಸರ್ಕಾರವು ದಿನಾಂಕ 16–03–2024ರಂದು ಹೊರಡಿಸಿರುವ ಆದೇಶದ ಮಾರಕ ಅಂಶಗಳ ಕುರಿತು ಚರ್ಚಿಸಲಾಯಿತ್ತು ಸಹಕಾರಿಗಳ ಅಭಿಪ್ರಾಯ ಸಲಹೆಗಳನ್ನು ಪಡೆದುಕೊಂಡು ಮುಂದಿನ ಕ್ರಮಗಳ ಕುರಿತು ನಿರ್ಣಯ ಕೈಗೊಳ್ಳಲಾಯಿತ್ತು. ಸಭೆಯಲ್ಲಿ ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ ಕಲಬುರಗಿ ಜಿಲ್ಲಾ ಒಕ್ಕೂಟದ ಅಧ್ಯಕ್ಷರಾದ ಎಸ್ ಎಸ್ ಪಾಟೀಲ್ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರಾಕಲೇ ಒಕ್ಕೂಟದ ನಿರ್ದೇಶಕರು ಸಹಕಾರಿಯ ಪ್ರತಿನಿಧಿಗಳು ಉಪಸ್ಥಿತರಿದ್ದರು.

# ಸಮಾಲೋಚನಾ ಸಭೆ



**ಬೆಳಗಾವಿ :** ದಿನಾಂಕ 28 ಮಾರ್ಚ್ 2024ರಂದು ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ, ಸಹಕಾರಿಯ ಸಭಾಂಗಣದಲ್ಲಿ ಚಿಕ್ಕೋಡಿ, ಅಥಣಿ, ನಿಪ್ಪಾಣಿ, ರಾಯಭಾಗ ಮತ್ತು ಕಾಗವಾಡ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಸಮಾಲೋಚನೆ ಸಭೆಯನ್ನು ಜರುಗಿಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠ ಇವರು ವಹಿಸಿದ್ದರು. ಸಭೆಯಲ್ಲಿ ವಕೀಲರು ಹಾಗೂ ಸಹಕಾರಿಗಳಾದ ಶ್ರೀ ಬಾಬುರಾವ ಯಾದವರವರು ಸೇರಿದಂತೆ ವಿವಿಧ ಸಹಕಾರಿಯ ಪ್ರತಿನಿಧಿಗಳು ಭಾಗವಹಿಸಿದ್ದರು. ಒಟ್ಟು 22 ಸೌಹಾರ್ದ ಸಹಕಾರಿಗಳಿಂದ 26 ಪ್ರತಿನಿಧಿಗಳು ಹಾಗೂ ಬೆಳಗಾವಿ ಪ್ರಾಂತದ ಪ್ರಾಂತೀಯ ವ್ಯವಸ್ಥಾಪಕರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ 'ಇತ್ತೀಚೆಗೆ ರಾಜ್ಯ ಸರ್ಕಾರವು ದಿನಾಂಕ 16 ಮಾರ್ಚ್ 2024ರಂದು ಹೊರಡಿಸಿರುವ ಆದೇಶದ ಪ್ರಕಾರ ಸೌಹಾರ್ದ ಸಹಕಾರಿಗಳು ಸಂಗ್ರಹಿಸುತ್ತಿರುವ ಠೇವಣಿಗಳಿಗೆ ಮತ್ತು ವಿತರಿಸುವ ಸಾಲಗಳಿಗೆ ಬಡ್ಡಿದರ ನಿಗದಿಪಡಿಸುವುದು ಸೇರಿದಂತೆ ಇನ್ನಿತರ ಅಂಶಗಳನ್ನು ಸೇರಿಸಿ ಹೊರಡಿಸಿದ ನಿರ್ದೇಶನದ ಕುರಿತು ಸಹಕಾರಿಗಳ ಮೇಲೆ ಜರಗುವ ಸಾಧಕ ಬಾಧಕಗಳ ಬಗ್ಗೆ ಚರ್ಚಿಸಲಾಯಿತು. ಈ ವಿಷಯದ ಕುರಿತು ಸಹಕಾರಿಗಳಿಂದ ಅಭಿಪ್ರಾಯ, ಸಲಹೆಗಳನ್ನು ಪಡೆದುಕೊಂಡು ಮುಂದಿನ ಕ್ರಮ ಜರುಗಿಸುವ ಕುರಿತು ನಿರ್ಣಯ ಕೈಗೊಳ್ಳಲಾಯಿತು.



**ಬೆಳಗಾವಿ :** ದಿನಾಂಕ 29 ಮಾರ್ಚ 2024ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ನಿ, ಬೆಳಗಾವಿ. ಬೆಳಗಾವಿಯ ಪ್ರಾಂತೀಯ ಕಛೇರಿಯ ತರಬೇತಿ ಸಭಾಂಗಣದಲ್ಲಿ ಬೆಳಗಾವಿ ಜಿಲ್ಲೆಯ ಬೆಳಗಾವಿ, ಖಾನಾಪುರ, ಹುಕ್ಕೇರಿ, ಯರಗಟ್ಟಿ, ಗೋಕಾಕ, ಚೆನ್ನಮ್ಮನ ಕಿತ್ತೂರು ಮತ್ತು ಮೂಡಲಗಿ ತಾಲ್ಲೂಕುಗಳ ಸೌಹಾರ್ದ ಸಹಕಾರಿಗಳ ಸಮಾಲೋಚನೆ ಸಭೆಯನ್ನು ಜರುಗಿಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠ ಇವರು ವಹಿಸಿದ್ದರು. ಸಭೆಯಲ್ಲಿ ವಕೀಲರು ಶ್ರೀ ಬಸವರಾಜ್ ಸುಲ್ತಾನಪುರೆ ವಕೀಲರು ಹಾಗೂ ಅಧ್ಯಕ್ಷರು, ಶಿವಾ ಪತ್ತಿನ ಸೌಹಾರ್ದ ಸಹಕಾರಿ ನಿ ಬೆಳಗಾವಿ, ಶ್ರೀ ಸಿ. ಟಿ. ಮಜ್ಜಿಗೆ ವಕೀಲರು, ಅಧ್ಯಕ್ಷರು ಶ್ರೀ ಸಾಯಿ ಶ್ಯಾಮ ಸೌಹಾರ್ದ ಸಹಕಾರಿ ನಿ ಬೆಳಗಾವಿ, ಶ್ರೀ ನಿಂಗನಗೌಡ ದೊಡಗೌಡರ, ನಿರ್ದೇಶಕರು, ವಿಜಯಲಕ್ಷ್ಮಿ ಸೌಹಾರ್ದ ಸಹಕಾರಿ ನಿ., ಬೈಲಹೊಂಗಲ ಹಾಗೂ ಶ್ರೀ ಅನೀಲ ಪಾಟೀಲ, ಅಧ್ಯಕ್ಷರು ಪ್ಯಾಟ್ಸನ್ ಸೌಹಾರ್ದ ಸಹಕಾರಿ ನಿ, ಬೆಳಗಾವಿ ಇವರುಗಳು ಉಪಸ್ಥಿತರಿದ್ದರು. ಸಭೆಯಲ್ಲಿ ಒಟ್ಟು 73 ಸೌಹಾರ್ದ ಸಹಕಾರಿಗಳಿಂದ 89 ಪ್ರತಿನಿಧಿಗಳು ಸೇರಿದಂತೆ ಬೆಳಗಾವಿ ಪ್ರಾಂತದ ಪ್ರಾಂತೀಯ ವ್ಯವಸ್ಥಾಪಕರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ 'ಇತ್ತೀಚೆಗೆ ರಾಜ್ಯ ಸರ್ಕಾರವು ದಿನಾಂಕ 16 ಮಾರ್ಚ 2024ರಂದು ಹೊರಡಿಸಿರುವ ಆದೇಶದ ಪ್ರಕಾರ ಸೌಹಾರ್ದ ಸಹಕಾರಿಗಳು ಸಂಗ್ರಹಿಸುತ್ತಿರುವ ಠೇವಣಿಗಳಿಗೆ ಮತ್ತು ವಿತರಿಸುವ ಸಾಲಗಳಿಗೆ ಬಡ್ಡಿದರ ನಿಗದಿಪಡಿಸುವುದು ಸೇರಿದಂತೆ ಇನ್ನಿತರ ಅಂಶಗಳನ್ನು ಸೇರಿಸಿ ಹೊರಡಿಸಿದ ನಿರ್ದೇಶನದ ಕುರಿತು ಸಹಕಾರಿಗಳ ಮೇಲೆ ಜರಗುವ ಸಾಧಕ ಬಾಧಕಗಳ ಬಗ್ಗೆ ಚರ್ಚಿಸಲಾಯಿತು.

**ಕಲಬುರಗಿ :** ದಿನಾಂಕ 23.03.2024 ರಂದು ಕಲಬುರಗಿ ನಗರದ ಪತ್ರಕರ್ತರ ಭವನದಲ್ಲಿ ರಾಜ್ಯ ಸರ್ಕಾರವು ಸೌಹಾರ್ದ ಸಹಕಾರಿಗಳಿಗೆ ಹೊರಡಿಸಿದ ಆದೇಶದ ಕೆಲವು ಮಾರಕ ಅಂಶಗಳನ್ನು ಖಂಡಿಸಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ್ ಹಾಗೂ ಶ್ರೀಮತಿ ಶೈಲಜಾ ತಪಲಿ ಜಂಟಿಯಾಗಿ ಪತ್ರಿಕಾ ಗೋಷ್ಠಿ ನಡೆಸಿದರು. ಸದರಿ ಗೋಷ್ಠಿಯಲ್ಲಿ ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಸಂಜೀವ ಮಹಾಜನ ಒಕ್ಕೂಟದ ನಿರ್ದೇಶಕರು ಸಹಕಾರಿಗಳು ಉಪಸ್ಥಿತರಿದ್ದರು.

**ಚಿಕ್ಕಬಳ್ಳಾಪುರ :** ದಿನಾಂಕ 15.03.2024ರಂದು ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ಮಂಚೇನಹಳ್ಳಿ ಸ್ನೇಹ ಸೌಹಾರ್ದ ಸಹಕಾರಿ ನಿ, ಮಂಚೇನಹಳ್ಳಿ, ಗೌರಿಬಿದನೂರು ತಾಲೂಕು ಈ ಸಹಕಾರಿಗೆ ಭೇಟಿ ನೀಡಿದರು. ಸಹಕಾರಿಯು ಸಂಯುಕ್ತ ಸಹಕಾರಿಗೆ ನೀಡಿರುವ ಪತ್ರದ ಕುರಿತು ಚರ್ಚಿಸಿ ಅಗತ್ಯ ಸಲಹೆ ಮಾರ್ಗದರ್ಶನ ಹಾಗೂ ಕಾನೂನು ಸಲಹೆಗಳನ್ನು ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಮಲ್ಲೇಶ್ವರಯ್ಯ, ಉಪಾಧ್ಯಕ್ಷರಾದ ಶ್ರೀ ಮೃತ್ಯುಂಜಯ, ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಉಮೇಶ್ ಎ.ಎಸ್ ಇವರು ಉಪಸ್ಥಿತರಿದ್ದರು.

**ದಾವಣಗೆರೆ :** ದಿನಾಂಕ 01.04.2024ರ ಸೋಮವಾರದಂದು ದಾವಣಗೆರೆ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ವತಿಯಿಂದ ದಾವಣಗೆರೆ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಕಛೇರಿಯಲ್ಲಿ ಬೆಳಗ್ಗೆ 11.00 ಗಂಟೆಗೆ ಸಮಾಲೋಚನಾ ಸಭೆಯನ್ನು ನಡೆಸಲಾಯಿತು.

ರಾಜ್ಯ ಸರ್ಕಾರವು ದಿನಾಂಕ 16–03–2024ರಂದು ಹೊರಡಿಸಿರುವ ಆದೇಶದ ಕುರಿತು, ಆದೇಶದಲ್ಲಿರುವ ಅಂಶಗಳ ಕುರಿತು ಚರ್ಚಿಸಲಾಯಿತು, ಸಹಕಾರಿಗಳ ಅಭಿಪ್ರಾಯ ಸಲಹೆಗಳನ್ನು ಪಡೆದುಕೊಂಡು ಮುಂದಿನ ಕ್ರಮಗಳ ಬಗ್ಗೆ ಸಮಾಲೋಚನ ಸಭೆ ಚರ್ಚಿಸಲಾಯಿತು.

ಸದರಿ ಸಭೆಯು ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಂ ನಾಗರಾಜ್, ರವರ ಅಧ್ಯಕ್ಷತೆಯ ಜರುಗಿತು. ಈ ಸಮಯದಲ್ಲಿ ಸಂಯುಕ್ತ ಸಹಕಾ–ರಿಯ ನಿರ್ದೇಶಕರಾದ ಶ್ರೀ ಎಂ ಆರ್ ಪ್ರಭುದೇವ್ ರವರು ಸಂಯುಕ್ತ ಸಹಕಾರಿಯು ಕೈಗೊಂಡಿರುವ ಕ್ರಮದ ಬಗ್ಗೆ ಮಾಹಿತಿಯನ್ನು ನೀಡಿದರು. ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಉಮೇಶ್ ಶೆಟ್ಟಿ ಯವರು, ಒಕ್ಕೂಟದ ನಿರ್ದೇಶಕರುಗಳು ಹಾಗೂ ದಾವಣಗೆರೆ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖಾನಿಗಳು, ಆಡಳಿತ ಮಂಡಳಿ ಸದಸ್ಯರುಗಳು ಭಾಗವಹಿಸಿದ್ದರು.

---

**ಚಿತ್ರದುರ್ಗ :** ದಿನಾಂಕ 02.04.2024ರ ಮಂಗಳವಾರದಂದು ಚಿತ್ರದುರ್ಗ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ವತಿಯಿಂದ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್ ಲಿ., ಜೆ.ಸಿ.ಆರ್ ಶಾಖೆ, ಚಿತ್ರದುರ್ಗ ಇಲ್ಲಿ ಬೆಳಗ್ಗೆ 11.00 ಗಂಟೆಗೆ ಸಮಾಲೋಚನಾ ಸಭೆಯನ್ನು ನಡೆಸಲಾಯಿತು.

ರಾಜ್ಯ ಸರ್ಕಾರವು ದಿನಾಂಕ 16–03–2024ರಂದು ಹೊರಡಿಸಿರುವ ಆದೇಶದ ಕುರಿತು, ಆದೇಶದಲ್ಲಿರುವ ಅಂಶಗಳ ಕುರಿತು ಚರ್ಚಿಸಲಾಯಿತು, ಸಹಕಾರಿಗಳ ಅಭಿಪ್ರಾಯ ಸಲಹೆಗಳಂತೆ ಸರ್ಕಾರದ ಆದೇಶಕ್ಕೆ ಸಂಬಂಧಿಸಿದಂತೆ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ಪ್ರಕರಣದ ಮಧ್ಯಾಂತರ ಆದೇಶ ಬಂದ ನಂತರ ಮುಂದಿನ ಕ್ರಮದ ಬಗ್ಗೆ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ಕೈಗೊಳ್ಳುವ ನಿರ್ಧಾರಕ್ಕೆ ಚಿತ್ರದುರ್ಗ ಜಿಲ್ಲಾ ಸೌಹಾರ್ದ ಸಹಕಾರಿಗಳೆಲ್ಲರೂ ಸಹಕಾರವನ್ನು ನೀಡಲು ತೀರ್ಮಾನಿಸಲಾಯಿತು.

ಸದರಿ ಸಭೆಯು ಒಕ್ಕೂಟದ ಅಧ್ಯಕ್ಷರಾದ ಶ್ರೀ ವೀರಭದ್ರಬಾಬು, ರವರ ಅಧ್ಯಕ್ಷತೆಯಲ್ಲಿ ಜರುಗಿತು. ಈ ಸಮಯದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ರಘುರಾಮ ರೆಡ್ಡಿಯವರು ಸಂಯುಕ್ತ ಸಹಕಾರಿಯು ಕೈಗೊಂಡಿರುವ ಕ್ರಮಗಳ ಬಗ್ಗೆ ವಿವರವಾಗಿ ತಿಳಿಸಿದರು ಮತ್ತು ಮುಂದಿನ ನಡೆಗಳ ಬಗ್ಗೆ ಮಾಹಿತಿಯನ್ನು ನೀಡಿದರು. ಒಕ್ಕೂಟದ ಉಪಾಧ್ಯಕ್ಷರಾದ

ಶ್ರೀ ತಿಪ್ಪೇಸ್ವಾಮಿ ಯವರು, ಒಕ್ಕೂಟದ ನಿರ್ದೇಶಕರುಗಳು ಹಾಗೂ ಚಿತ್ರದುರ್ಗ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖಾನಿಗಳು, ಆಡಳಿತ ಮಂಡಳಿ ಸದಸ್ಯರುಗಳು ಭಾಗವಹಿಸಿದ್ದರು.

---

**ಮಂಡ್ಯ :** ಉದ್ದೇಶಿತ ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟದ ಷೇರು ಸಂಗ್ರಹಣೆಗೆ ಅನುಮತಿ ದೊರೆತ ಹಿನ್ನೆಲೆಯಲ್ಲಿ ಈ ಕುರಿತು ದಿನಾಂಕ 23.03.2024 ರಂದು ಸಹಕಾರಿಯ ಕಾರ್ಯಲಯದಲ್ಲಿ ಒಕ್ಕೂಟದ ರಚನೆ, ಬೆಳವಣಿಗೆಯ ಬಗ್ಗೆ ಮೈಸೂರು ಪ್ರಾಂತೀಯ ಅಧಿಕಾರಿಯಾದ ಶ್ರೀ ಗುರುಪ್ರಸಾದ ಬಂಗೇರಾ ಇವರು ಮಾಹಿತಿಯನ್ನು ನೀಡಿದರು. ಈ ಸಭೆಯಲ್ಲಿ ಮಂಡ್ಯ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಬಲರಾಮ್ ಎನ್ ಮತ್ತು ಶ್ರೀ ಬಿ.ಟಿ ಗುರುರಾಜಶೆಟ್ಟಿ, ಮುಖ್ಯ ಪ್ರವರ್ತಕರು, ಉದ್ದೇಶಿತ ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ನಿ., ಹಾಗೂ ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾ–ರಿಗಳ ಅಧ್ಯಕ್ಷರು/ಉಪಾಧ್ಯಕ್ಷರು, ನಿರ್ದೇಶಕರುಗಳು ಹಾಜರಿದ್ದರು. ಈ ಸಭೆಯಲ್ಲಿ ಒಟ್ಟು 16 ಸೌಹಾರ್ದ ಸಹಕಾರಿಗಳಿಂದ 73 ಜನ ಭಾಗವಹಿಸಿದ್ದರು.

---

**ಮೈಸೂರು :** ಗ್ರಾಮೀಣ ನಿಧಿ ಸೌಹಾರ್ದ ಕೋ ಆಪರೇಟಿವ್ ಸೊಸೈಟಿ ಲಿ., ಸಾಲಿಗ್ರಾಮ ಇದರ ಕೆ.ಆರ್. ನಗರದಲ್ಲಿ ನೂತನ ಶಾಖೆಯ ಉದ್ಘಾಟನಾ ಸಮಾರಂಭ ಜರುಗಿತು. ಕಾರ್ಯಕ್ರಮದ ಉದ್ಘಾಟಕರಾಗಿ ಸಂಯುಕ್ತ ಸಹಕಾರಿಯ ಮೈಸೂರು ಪ್ರಾಂತದ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಗುರುಪ್ರಸಾದ ಬಂಗೇರಾ ರವರು ಸೌಹಾರ್ದ ಸಹಕಾರಿ ಕಾಯ್ದೆಯ ಆಶಯ ಮತ್ತು ಸದಸ್ಯರ ಜವಾಬ್ದಾರಿಗಳ ಕುರಿತು ಮಾತನಾಡಿದರು. ಕಾರ್ಯಕ್ರಮದಲ್ಲಿ ಮೈಸೂರು ಮಂಡ್ಯ ಮತ್ತು ಕೊಡಗು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್ ಆರ್ ನಾರಾಯಣರಾವ್, ನವನಗರ ಕೋಆಪರೇಟಿವ್ ಬ್ಯಾಂಕ್‌ನ ಅಧ್ಯಕ್ಷರಾದ ಕೆ.ಎನ್. ಬಸಂತ ನಂಜಪ್ಪ, ಆಂದೋಲನ ದಿನಪತ್ರಿಕೆ ವರದಿಗಾರರಾದ ಶ್ರೀ ಕೆ.ಟಿ. ಮೋಹನಕುಮಾರ್, ಸೌಹಾರ್ದ ಅಭಿವೃದ್ಧಿ ಅಧಿಕಾರಿ ಶ್ರೀ ಜವಾಹರ ಮುಗ್ಗನವರ, ಸಹಕಾರಿಯ ಅಧ್ಯಕ್ಷರಾದ ಶ್ರೀ ಕೆ.ಆರ್. ಶ್ಯಾಮಸುಂದರ್, ಮುಖ್ಯ ಕಾರ್ಯನಿರ್ವಾಹಕರಾದ ಶ್ರೀಮತಿ ಮಮತಾ ಹಾಗೂ ಸಹಕಾರಿಯ ಸದಸ್ಯರು ಉಪಸ್ಥಿತರಿದ್ದರು.



**ದಕ್ಷಿಣ ಕನ್ನಡ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಮೈಸೂರು ಪ್ರಾಂತೀಯ ಕಚೇರಿ ವತಿಯಿಂದ ಮೈಸೂರು ಪ್ರಾಂತದ ಸನ್ನದು ಲೆಕ್ಕಪರಿಶೋಧಕರಿಗಾಗಿ ಲೆಕ್ಕಪರಿಶೋಧನೆಯ ನಮೂನೆ & ಮಾರ್ಗಸೂಚಿಗಳ ಮಾಹಿತಿ ಕಾರ್ಯಾಗಾರವನ್ನು ದಕ್ಷಿಣ ಕನ್ನಡ ಜಿಲ್ಲೆಯ ಹೋಟೆಲ್, ಶ್ರೀನಿವಾಸ್ ಇಲ್ಲಿ ಆಯೋಜನೆ ಮಾಡಲಾಗಿತ್ತು. ಸದರಿ ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡ ರವರು ಉದ್ಘಾಟಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ದಕ್ಷಿಣ ಕನ್ನಡ ಜಿಲ್ಲಾ ಸೌಹಾರ್ದ ಒಕ್ಕೂಟದ ಅಧ್ಯಕ್ಷರಾದ ಶ್ರೀ ಲಯನ್ಸ್ ಸುರೇಶ್ ರೈ ಮತ್ತು ಸಹಕಾರಿ ಸಂಘಗಳ ಲೆಕ್ಕಪರಿಶೋಧನ ಇಲಾಖೆಯ ಉಪನಿರ್ದೇಶಕರಾದ ಶ್ರೀ ಆನಂದ್ ರವರು ಭಾಗವಹಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಭಾರತಿ ಜಿ ಭಟ್ ರವರು ವಹಿಸಿದ್ದರು.



**ಪಾವಗಡ :** ದಿನಾಂಕ 29.03.2024ರಂದು ಶ್ರೀ ಪತಂಜಲಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ, ಪಾವಗಡ ಸಹಕಾರಿಯ ನೂತನ ಕಟ್ಟಡದ ಶುಭಾರಂಭ ಕಾರ್ಯಕ್ರಮ ನೆರವೇರಿತು. ಕಾರ್ಯಕ್ರಮದ ದಿವ್ಯಸಾನಿಧ್ಯವನ್ನು ಶ್ರೀಮತ್‌ಸ್ವಾಮಿ ಜಪಾನಂದಜೀ ಮಾಹಾರಾಜ್, ಶ್ರೀ ರಾಮಕೃಷ್ಣಾಶ್ರಮ ಪಾವಗಡ ಇವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ಪಾವಗಡ ತಾಲೂಕಿನ ಶಾಸಕರಾದ ಶ್ರೀ ಹೆಚ್.ವಿ. ವೆಂಕಟೇಶ್ ರವರು, ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು, ಶ್ರೀ ಸಿ.ಪಿ. ವಿಜಯ್ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಪಾವಗಡ ತಾಲೂಕಿನ ಮಾಜಿ ಶಾಸಕರಾದ ಶ್ರೀ ವೆಂಕಟರಮಣಪ್ಪ ರವರು, ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಉಮೇಶ್ ಎ.ಎಸ್. ರವರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಸದರಿ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ವಿಷಯಾಧಾರಿತ ತರಬೇತಿ ಕಾರ್ಯಕ್ರಮಗಳು



**ಕೊಪ್ಪಳ :** ದಿನಾಂಕ 15.03.2024 ರಂದು ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ಕೊಪ್ಪಳ ಜಿಲ್ಲೆಯ ಕೊಪ್ಪಳ, ಯಲಬುರ್ಗಾ, ಕುಕನೂರು ಮತ್ತು ಕುಷ್ಟಗಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿ ಪ್ರಕ್ರೀಯೆ ಹಾಗೂ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ಕಲರ್ಸ್ ರೆಸ್ಟೋರೆಂಟ್ ಕೊಪ್ಪಳದಲ್ಲಿ ಆಯೋಜಿಸಲಾಗಿತ್ತು.

ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರರವರು ನೆರವೆರಿಸಿದರು. ಮುಖ್ಯ ಅತಿಥಿಗಳಾಗಿ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರಾದ ಶ್ರೀ ಚನ್ನಬಸಪ್ಪ ಕಡ್ಡಿಮುಡಿ, ನಿರ್ದೇಶಕರಾದ ಶ್ರೀ ಮುದ್ದಪ್ಪ ಉಪಸ್ಥಿತರಿದ್ದರು.

ಮೊದಲನೆಯ ಅವಧಿಯಲ್ಲಿ ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿ ಕುರಿತು ಶ್ರೀ ಲಿಯಾಕತ್ ಅಲಿಯವರು ನಿವೃತ್ತ ಸಹಾಯಕ ನಿಬಂಧಕರು ರವರು ಉಪನ್ಯಾಸ ನೀಡಿದರು. ಎರಡನೇಯ ಅವಧಿಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಓಂಕಾರರವರು ಆರ್ಥಿಕ ಸಬಲತೆಯ ಮಾನದಂಡಗಳು ಸಂಯುಕ್ತ ಸಹಕಾರಿಗೆ & ಪ್ರಾಧಿಕಾರಕ್ಕೆ ಸಲ್ಲಿಸಬೇಕಾದ ಮಾಹಿತಿಯ ಕುರಿತು ಉಪನ್ಯಾಸ ನೀಡಿದರು. ಮೂರನೆಯ ಅವಧಿಯಲ್ಲಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಲೆಕ್ಕಪರಿಶೋಧನಾ ಪೂರ್ವ ತಯಾರಿ ಮತ್ತು ಸೌಹಾರ್ದ ಸಹಕಾರಿ ಕಾಯ್ದೆಯ ಕುರಿತು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ 109 ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳು ಭಾಗವಹಿಸಿದ್ದರು.



**ಕೊಪ್ಪಳ :** ದಿನಾಂಕ 16.03.2024 ರಂದು ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ಕೊಪ್ಪಳ ಜಿಲ್ಲೆಯ ಗಂಗಾವತಿ, ಕಾರಟಗಿ, ಕನಕಗಿರಿ, ಮತ್ತು ಕುಷ್ಟಗಿ ತಾಲೂಕಿನ ಮತ್ತು ತಾವರಗೇರಾ ಪಟ್ಟಣದ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿ ಪ್ರಕ್ರೀಯೆ ಹಾಗೂ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ಹೊಟೆಲ್ ಲಲಿತ ಮಹಲ್ ಆನೆಗುಂದಿ ರಸ್ತೆ, ಗಂಗಾವತಿಯಲ್ಲಿ ಆಯೋಜಿಸಲಾಗಿತ್ತು.

ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರರವರು ನೆರವೆರಿಸಿದರು. ಮುಖ್ಯ ಅತಿಥಿಗಳಾಗಿ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ನಿಕಟಪೂರ್ವ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಪತ್ತಾರವರು, ಶ್ರೀ ರಾಜಶೇಖರ ಹೆಚ್ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಸ್ವಾಗತ ಮತ್ತು ನಿರೂಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಓಂಕಾರ ರವರು ನೆರವೆರಿಸಿದರು. ಪ್ರಾಸ್ತವಿಕ ನುಡಿಯನ್ನು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ನುಡಿದರು.

ಮೊದಲನೆಯ ಅವಧಿಯಲ್ಲಿ ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿ ಕುರಿತು ಶ್ರೀ ಲಿಯಾಕತ್ ಅಲಿಯವರು ನಿವೃತ್ತ ಸಹಾಯಕ ನಿಬಂಧಕರು ರವರು ಉಪನ್ಯಾಸ ನೀಡಿದರು. ಎರಡನೇಯ ಅವಧಿಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಓಂಕಾರರವರು ಆರ್ಥಿಕ ಸಬಲತೆಯ ಮಾನದಂಡಗಳು ಮತ್ತು ಸಂಯುಕ್ತ ಸಹಕಾರಿಗೆ & ಪ್ರಾಧಿಕಾರಕ್ಕೆ ಸಲ್ಲಿಸಬೇಕಾದ ಮಾಹಿತಿಯ ಕುರಿತು ಉಪನ್ಯಾಸ ನೀಡಿದರು.

ಮೂರನೆಯ ಅವಧಿಯಲ್ಲಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಲೆಕ್ಕಪರಿಶೋಧನಾ ಪೂರ್ವ ತಯಾರಿ ಮತ್ತು ಸೌಹಾರ್ದ ಸಹಕಾರಿ ಕಾಯ್ದೆಯ ಕುರಿತು ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ 105 ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳು ಭಾಗವಹಿಸಿದ್ದರು.

## ಬೀದರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., (ಡಿಸಿಸಿ) ಅಧ್ಯಕ್ಷರೊಂದಿಗೆ ಸೌಹಾರ್ದ ಸಹಕಾರಿಗಳ ಅಧ್ಯಕ್ಷರ ಸಭೆ.



**ಬೀದರ :** ದಿನಾಂಕ 26-02-2024 ರಂದು ಡಿಸಿಸಿ ಬ್ಯಾಂಕ್ ಕೇಂದ್ರ ಕಛೇರಿಯ ಸಭಾಂಗಣದಲ್ಲಿ ಡಿಸಿಸಿ ಬ್ಯಾಂಕ್ ಅಧ್ಯಕ್ಷರಾದ ಶ್ರೀ ಅಮರಕುಮಾರ ಬಿ. ಖಂಡ್ರೆ ಅವರ ಅಧ್ಯಕ್ಷತೆಯಲ್ಲಿ ಬೀದರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರ ಹಾಗೂ ಆಡಳಿತ ಮಂಡಳಿಯ ನಿರ್ದೇಶಕರುಗಳ ಸಭೆಯನ್ನು ಆಯೋಜಿಸಲಾಗಿತ್ತು. ಸದರಿ ಸಭೆಯಲ್ಲಿ ಬೀದರ ಜಿಲ್ಲೆಯಲ್ಲಿ ಸೌಹಾರ್ದ ಸಹಕಾರಿಗಳ ವ್ಯವಹಾರ ಕುರಿತು ಮಾನ್ಯ ಅಧ್ಯಕ್ಷರು ಮಾಹಿತಿ ಪಡೆದುಕೊಂಡರು. ಜಿಲ್ಲೆಯ ಸೌಹಾರ್ದ ಸಹಕಾರಿಗಳ ಬಹುದಿನಗಳ ಬೇಡಿಕೆಯಾದ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಸದಸ್ಯತ್ವ ನೀಡಲು ತೀರ್ಮಾನಿಸಲಾಗಿದೆ. ಆದರಿಂದ ಜಿಲ್ಲೆಯ ಎಲ್ಲಾ ಸೌಹಾರ್ದ ಸಹಕಾರಿಗಳು ಸದಸ್ಯತ್ವ ಪಡೆದುಕೊಳ್ಳುವಂತೆ ಮನವಿ ಮಾಡಿದರು. ಸದಸ್ಯತ್ವ ನೀಡಲು ಒಪ್ಪಿಗೆ ನೀಡಿರುವ ಡಿಸಿಸಿ ಬ್ಯಾಂಕ್ ಅಧ್ಯಕ್ಷರಿಗೆ ಹಾಗೂ ಆಡಳಿತ ಮಂಡಳಿಗೆ ಸಭೆಯಲ್ಲಿ ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಬೀದರ ಇದರ ನಿರ್ದೇಶಕರಾದ ಶ್ರೀ ಜಗನಾಥ ಕರಂಜೆ ಸಹಕಾರಿಗಳ ಪರವಾಗಿ ಧನ್ಯವಾದಗಳನ್ನು ಸಲ್ಲಿಸಿದರು. ಜಿಲ್ಲಾ ಕೇಂದ್ರ ಬ್ಯಾಂಕ್ ನಿಂದ ಸಹಕಾರಿಗಳಿಗೆ ಆಡಳಿತ ಮಂಡಳಿಯಲ್ಲಿ ಒಂದು ನಿರ್ದೇಶಕ ಸ್ಥಾನವನ್ನು ಮೀಸಲಿಡಲು ಒಕ್ಕೂಟ ಉಪಾಧ್ಯಕ್ಷರಾದ ಶ್ರೀ ಸಂಜೀವಕುಮಾರ ಪಾಟೀಲ್ ಮನವಿ ಮಾಡಿದರು. ಮಾನ್ಯ ಡಿಸಿಸಿ ಬ್ಯಾಂಕ್ ಅಧ್ಯಕ್ಷರು ಎಲ್ಲಾ ಸೌಹಾರ್ದ ಸಹಕಾರಿಗಳು ಡಿಸಿಸಿ ಬ್ಯಾಂಕ್ ನೊಂದಿಗೆ ವ್ಯವಹರಿಸುವಂತೆ ಮನವಿ ಮಾಡಿದರು. ಸಭೆಯಲ್ಲಿ ಉಪಸ್ಥಿತರಿದ ಸಹಕಾರ ಸಂಘಗಳ ಉಪನಿಬಂಧಕರು ಹಾಗೂ ಡಿಸಿಸಿ ಬ್ಯಾಂಕ್ ಸಿ.ಇ.ಓ. ಆದ ಶ್ರೀಮತಿ ಮಂಜುಳಾ ಇವರು ಮಾತನಾಡಿ ಸದಸ್ಯತ್ವ ಎಲ್ಲಾ ಸಹಕಾರಿಗಳಿಗೆ ಮುಕ್ತವಾಗಿರುವುದರಿಂದ ಎಲ್ಲಾ ವ್ಯವಹಾರಗಳು ಸರಳವಾಗಿ ನಮ್ಮ ಬ್ಯಾಂಕ್ ನೊಂದಿಗೆ ಕೈಗೊಳ್ಳುವಂತೆ ಮನವಿ ಮಾಡಿದರು. ಬೀದರ ಜಿಲ್ಲೆಯಲ್ಲಿ ಸಹಕಾರಿಗಳು ಒಟ್ಟಾಗಿ ಮುನ್ನಡೆಯುವಂತೆ ಎಲ್ಲರೂ ಒಗ್ಗಟಾಗಿ ಸಹಕಾರದಿಂದ ಮುನ್ನಡೆಯಲು ಸಭೆಯಲ್ಲಿ ತೀರ್ಮಾನಿಸಲಾಯಿತ್ತು. ಸಭೆಯ ಸ್ವಾಗತ ಮತ್ತು ನಿರೂಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿ

ಸಭೆಯ ನಂತರ ಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗಿ ಆಯ್ಕೆಯಾದ ಶ್ರೀ ಅಮರಕುಮಾರ ಬಿ ಖಂಡ್ರೆ ಅವರನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೇ ಸನ್ಮಾನಿಸಿದರು.

**ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಜಂಟಿಯಾಗಿ ನಡೆಸುತ್ತಿರುವ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್ ಮೆಂಟ್ ಡಿಪ್ಲೋಮಾ ಕೋರ್ಸಿನ 2ನೇ ಸೆಮಿಸ್ಟರ್ ನ ಪರೀಕ್ಷೆ ಫಲಿತಾಂಶವನ್ನು ದಿನಾಂಕ 02.04.2024ರಂದು ಪ್ರಕಟಿಸಲಾಗಿದೆ. ಕೇಂದ್ರವಾರು ಫಲಿತಾಂಶ ಈ ಕೆಳಕಂಡಂತ್ತಿರುತ್ತದೆ. ಪೂರ್ಣ ವಿವರಗಳನ್ನು ಸಂಯುಕ್ತ ಸಹಕಾರಿಯ ವೆಬ್‌ಸೈಟ್‌ನಲ್ಲಿ ಪಡೆಯಬಹುದು.**

**DIPLOMA IN CO-OPERATIONS AND BANKING MANAGEMENT**
**SECOND SEMESTER EXAMINATION JANUARY, 2024**
**STATUS OF SECOND SEMESTER RESULT**

**CENTRE CODE: 001 CENTRE: BENGALURU**

| No. of Students Appeared | No. of Students Passed | No. of Students to be reappeared | % of Result |
|---|---|---|---|
| 77 | 71 | 06 | 92.2 % |

**CENTRE CODE: 002 CENTRE: UDUPI**

| No. of Students Appeared | No. of Students Passed | No. of Students to be reappeared | % of Result |
|---|---|---|---|
| 68 | 66 | 02 | 97.1 % |

**CODE: 003 CENTRE: SIRSI**

| No. of Students Appeared | No. of Students Passed | No. of Students to be reappeared | % of Result |
|---|---|---|---|
| 25 | 22 | 03 | 88 % |

**CODE: 004 CENTRE: SINDHANUR**

| No. of Students Appeared | No. of Students Passed | No. of Students to be reappeared | % of Result |
|---|---|---|---|
| 49 | 35 | 14 | 71.4 % |

**CENTRE CODE: 005 CENTRE: JAMAKHANDI**

| No. of Students Appeared | No. of Students Passed | No. of Students to be reappeared | % of Result |
|---|---|---|---|
| 60 | 47 | 13 | 78.3 % |

**CENTRE CODE: 006 CENTRE: SHIVAMOGA**

| No. of Students Appeared | No. of Students Passed | No. of Students to be reappeared | % of Result |
|---|---|---|---|
| 59 | 52 | 07 | 88.1 % |

**CENTRE CODE: 007 CENTRE: HUBBALLI**

| No. of Students Appeared | No. of Students Passed | No. of Students to be reappeared | % of Result |
|---|---|---|---|
| 48 | 41 | 07 | 85.4 % |

**CENTRE CODE: 008 CENTRE: BAGALKOTE**

| No. of Students Appeared | No. of Students Passed | No. of Students to be reappeared | % of Result |
|---|---|---|---|
| 49 | 47 | 02 | 95.9 % |

**CENTRE CODE: 009 CENTRE: BELLARY**

| No. of Students Appeared | No. of Students Passed | No. of Students to be reappeared | % of Result |
|---|---|---|---|
| 30 | 25 | 05 | 83.3 % |

**CENTRE CODE: 010 CENTRE: HOSAPETE**

| No. of Students Appeared | No. of Students Passed | No. of Students to be reappeared | % of Result |
|---|---|---|---|
| 43 | 37 | 06 | 86.0 % |

**CENTRE CODE: 011 CENTRE: BELLAD BAGEWADI**

| No. of Students Appeared | No. of Students Passed | No. of Students to be reappeared | % of Result |
|---|---|---|---|
| 59 | 39 | 20 | 66.1 % |

ಪರೀಕ್ಷೆಗೆ ಹಾಜರಾದವರು 567 , ಪರೀಕ್ಷೆಯಲ್ಲಿ ಉತ್ತೀರ್ಣರಾದವರು 482 , ಮತ್ತೊಮ್ಮೆ ಪರೀಕ್ಷೆ ಬರೆಯಬೇಕಿರುವವರು 85.

## ಮಾರ್ಚ್ – 2024 : ಶಾಸನತ್ಮಾಕ ವಿಭಾಗದ ಕಾರ್ಯಚಟುವಟಿಕೆಗಳು

**1. ವಿಶೇಷಾಧಿಕಾರಿಯನ್ನು ನೇಮಕದ ಕುರಿತು.**

ಸಂಯುಕ್ತ ಸಹಕಾರಿಯ ಸದಸ್ಯ ಸಹಕಾರಿಯ ಆಡಳಿತ ಮಂಡಲಿಯ ಪದಾವಧಿಯು ಮುಕ್ತಾಯವಾದ ಸೌಹಾರ್ದ ಸಹಕಾರಿಗಳಿಗೆ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ–1997 ಕಲಂ 38ಎ ರನ್ವಯ ಮಾರ್ಚ್ ತಿಂಗಳಲ್ಲಿ ಒಟ್ಟು 04 ಸೌಹಾರ್ದ ಸಹಕಾರಿಗೆ ವಿಶೇಷಾಧಿಕಾರಿಗಳನ್ನು ನೇಮಕ ಮಾಡಿ ಆದೇಶವನ್ನು ಹೊರಡಿಸಲಾಗಿರುತ್ತದೆ.

**2. ಬಿ.ಎಸ್.ಎನ್.ಎಲ್. ನೌಕರರ ಸೌಹಾರ್ದ ಪತ್ತಿನ ಸಹಕಾರಿ ನಿ., ತುಮಕೂರು ಸಹಕಾರಿಗೆ ಸಮಾಪನಾಧಿಕಾರಿಯ ನೇಮಕವಾಗಿರುವ ಕುರಿತು.**

ಮಾನ್ಯ ಸಹಕಾರಿ ಸಂಘಗಳ ನಿಬಂಧಕರು ಕರ್ನಾಟಕ ರಾಜ್ಯ ಇವರು ಬಿ.ಎಸ್.ಎನ್.ಎಲ್. ನೌಕರರ ಸೌಹಾರ್ದ ಪತ್ತಿನ ಸಹಕಾರಿ ನಿ., ತುಮಕೂರು ಸಹಕಾರಿಗೆ ಸಮಾಪನಾಧಿಕಾರಿಯಾಗಿ ಶ್ರೀ ಉಮೇಶ್ ಎ.ಎಸ್., ಜಿಲ್ಲಾ ಸೌಹಾರ್ದ ಅಭಿವೃದ್ಧಿ, ಪ್ರಾಂತೀಯ ಕಛೇರಿ, ಕ.ರಾ.ಸೌ.ಸಂ.ಸ.ನಿ, ಬೆಂಗಳೂರು ಇವರನ್ನು ನೇಮಕ ಮಾಡಿ ಆದೇಶ ಹೊರಡಿಸಿರುತ್ತಾರೆ.

# ಸಾರ್ವತ್ರಿಕ ಲೋಕಸಭಾ ಚುನಾವಣೆ - 2024 ಹಿನ್ನಲೆಯಲ್ಲಿ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿ ಚುನಾವಣೆಗಳನ್ನು ಮುಂದೂಡುವ ಕುರಿತು

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸಾರ್ವತ್ರಿಕ ಲೋಕಸಭಾ ಚುನಾವಣೆ-2024 ಹಿನ್ನೆಲೆಯಲ್ಲಿ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿ ಚುನಾವಣೆಗಳನ್ನು ಮುಂದೂಡುವ ಕುರಿತು.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ:ಸಿಒ 33 ಸಿಎಲ್ಎಂ 2024 (ಇ), ದಿನಾಂಕ:13.03.2024.
2. ಸರ್ಕಾರದ ಆದೇಶ ಸಂಖ್ಯೆ:ಸಿಒ 33 ಸಿಎಲ್ಎಂ 2024 (ಇ), ದಿನಾಂಕ:16.03.2024.
3. ಕೇಂದ್ರ ಚುನಾವಣಾ ಆಯೋಗದ ಪ್ರಕಟಣೆ ಸಂಖ್ಯೆ: ECI/PN/23/2024, ದಿನಾಂಕ: 16-03-2024.
4. ಸಹಕಾರ ಚುನಾವಣಾ ಪ್ರಾಧಿಕಾರದ ಪತ್ರ ಸಂಖ್ಯೆ ಸಚುಪ್ರ/ಆಡಳಿತ/83/ಸ.ಸ & ಸೌ.ಸ.ಕಾ/2023-24, ದಿನಾಂಕ:19.03.2024.

*****

**ಪ್ರಸ್ತಾವನೆ:**

ಮೇಲೆ ಓದಲಾದ (1)ರ ಆದೇಶದಲ್ಲಿ, ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿ ಮುಕ್ತಾಯಗೊಳ್ಳಲಿರುವ ಸೌಹಾರ್ದ ಸಹಕಾರಿಗಳ ಚುನಾವಣೆಗಳನ್ನು ಮುಂದೂಡಿ ಹಾಗೂ ಸಹಕಾರಿ ಆಡಳಿತ ಮಂಡಳಿಯ ಹಾಗೂ ಪದಾಧಿಕಾರಿಗಳ ಅವಧಿಯನ್ನು ಮುಂದುವರೆಸಿ ಆದೇಶಿಸಲಾಗಿತ್ತು. ದಿನಾಂಕ:13.03.2024 ರಂದು ನೀತಿ ಸಂಹಿತೆ ಜಾರಿಯಲ್ಲಿರದ ಕಾರಣ (1)ರಲ್ಲಿ ಓದಲಾದ ಆದೇಶವನ್ನು ಮೇಲೆ ಓದಲಾದ (2)ರ ಆದೇಶದಂತೆ ಹಿಂಪಡೆಯಲಾಗಿತ್ತು.

ಮೇಲೆ ಓದಲಾದ (3)ರ ಪ್ರಕಟಣೆಯಲ್ಲಿ ಕೇಂದ್ರ ಚುನಾವಣಾ ಆಯೋಗವು 2024ರ ಲೋಕಸಭಾ ಚುನಾವಣೆಗೆ ಅಧಿಸೂಚನೆ ಹೊರಡಿಸಿದ್ದು, ಚುನಾವಣಾ ನೀತಿ ಸಂಹಿತೆ ದಿನಾಂಕ:16-03-2024 ರಿಂದ 06-06-2024ರವರೆಗೆ ಜಾರಿಗೊಳಿಸಿರುತ್ತದೆ.

ಮೇಲೆ ಓದಲಾದ (4)ರ ಸಹಕಾರ ಚುನಾವಣಾ ಪ್ರಾಧಿಕಾರದ ಪತ್ರದಲ್ಲಿ ಕೇಂದ್ರ ಚುನಾವಣಾ ಆಯೋಗವು ಅಧಿಸೂಚನೆ ಹೊರಡಿಸಿದ್ದು ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುತ್ತದೆ. ರಾಜ್ಯದಲ್ಲಿನ ಫೆಡರಲ್, ಮಾಧ್ಯಮಿಕ ಹಾಗೂ ಪ್ರಾಥಮಿಕ ಸಹಕಾರ ಸಂಘ/ಬ್ಯಾಂಕುಗಳು, ಸೌಹಾರ್ದ ಸಹಕಾರಿಗಳನ್ನು ಒಳಗೊಂಡಂತೆ ಸುಮಾರು 1200 ಕ್ಕೂ ಹೆಚ್ಚು ಸಹಕಾರ ಸಂಸ್ಥೆಗಳ ಚುನಾವಣೆಯು ಮಾರ್ಚ್-2024 ರಿಂದ ಜೂನ್-2024 ಅವಧಿಯಲ್ಲಿ ನಡೆಸಬೇಕಾಗಿದ್ದು, ಸದರಿ ಚುನಾವಣೆಗಳನ್ನು ನಡೆಸಲು ಅಗತ್ಯ ಸಂಖ್ಯೆಯ ಸಿಬ್ಬಂದಿಗಳ ಅವಶ್ಯಕತೆ ಇರುತ್ತದೆ.

ಸಾರ್ವತ್ರಿಕ ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಆಯಾಯ ವಿಭಾಗದ ಪ್ರಾದೇಶಿಕ ಆಯುಕ್ತರು, ಜಿಲ್ಲಾಧಿಕಾರಿಗಳು ಸಹಕಾರ ಇಲಾಖೆಯು ಸೇರಿದಂತೆ ಸರ್ಕಾರದ ಎಲ್ಲಾ ಇಲಾಖೆಗಳ ಅಧಿಕಾರಿ/ಸಿಬ್ಬಂದಿಗಳು ಹಾಗೂ ಪೊಲೀಸ್ ಇಲಾಖೆಯು ಲೋಕಸಭಾ ಚುನಾವಣೆ ಕರ್ತವ್ಯಕ್ಕೆ ನಿಯೋಜನೆಯಾಗುವ ಹಿನ್ನೆಲೆಯಲ್ಲಿ ಸೌಹಾರ್ದ ಸಹಕಾರಿಗಳ ಚುನಾವಣೆಗಳನ್ನು ಮುಕ್ತ ಹಾಗೂ ಪಾರದರ್ಶಕವಾಗಿ ನಡೆಸಲು ಕಷ್ಟ ಸಾಧ್ಯವಾಗುತ್ತದೆ ಎಂದು ಸಹಕಾರ ಚುನಾವಣಾ ಪ್ರಾಧಿಕಾರ ತಿಳಿಸಿರುತ್ತದೆ.

1

ಈ ಹಿನ್ನೆಲೆಯಲ್ಲಿ ಮಾರ್ಚ್ ಮಾಹೆ 2024 ರಿಂದ ದಿನಾಂಕ:06-06-2024ರ ಈ ಅವಧಿಯಲ್ಲಿ ಆಡಳಿತ ಮಂಡಳಿಯ ಪದಾವಧಿ ಮುಕ್ತಾಯಗೊಳ್ಳುವ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿಯ ಚುನಾವಣೆಗಳನ್ನು ಮುಂದೂಡುವ ಅವಶ್ಯಕತೆ ಇರುತ್ತದೆ. ಪದಾವಧಿ ಮುಕ್ತಾಯಗೊಳ್ಳಲಿರುವ ಸಹಕಾರಿ/ಬ್ಯಾಂಕುಗಳ ಆಡಳಿತ ಮಂಡಳಿಗಳಿಗ ವಿಶೇಷಾಧಿಕಾರಿಗಳನ್ನು ನೇಮಿಸಬೇಕಾಗುತ್ತದೆ.

ಕರ್ನಾಟಕ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಕಲಂ 70ರ ಅವಕಾಶದಂತೆ ರಾಜ್ಯ ಸರ್ಕಾರವು ಮಾರ್ಚ್-2024 ರಿಂದ 06-06-2024ರ ನಿರ್ದಿಷ್ಟ ಅವಧಿಯಲ್ಲಿ ಚುನಾವಣೆ ನಡೆಸಲು ಬಾಕಿ ಇರುವ ವರ್ಗಗಳ ಸುಮಾರು 1200 ಸಹಕಾರಿ ಸಂಸ್ಥೆಗಳಿಗೆ ಸಾರ್ವತ್ರಿಕ ಲೋಕಸಭಾ ಚುನಾವಣೆ-2024ರ ವಿಶೇಷ ಸಂದರ್ಭದಲ್ಲಿ ಈ ಸಂಸ್ಥೆಗಳ ಚುನಾವಣೆ ಮುಂದೂಡುವುದು ಅನಿವಾರ್ಯವಾಗಿರುತ್ತದೆ.

ಆದರೆ ಇಲಾಖಾ ಅಧಿಕಾರಿ/ಸಿಬ್ಬಂದಿಗಳು ಚುನಾವಣಾ ಕರ್ತವ್ಯಕ್ಕೆ ನಿಯೋಜನೆಗೊಳ್ಳಲಿರುವ ಹಿನ್ನೆಲೆಯಲ್ಲಿ ವಿಶೇಷಾಧಿಕಾರಿಗಳಾಗಿ ನೇಮಿಸಲು ಸಿಬ್ಬಂದಿ ಕೊರತೆಯಾಗುವ ಕಾರಣ ಇದೊಂದು ವಿಶೇಷ ಸನ್ನಿವೇಶ ಎಂದು ಪರಿಗಣಿಸಿ, ಮಾರ್ಚ್ ಮಾಹೆ 2024 ರಿಂದ ದಿನಾಂಕ: 06-06-2024ರ ಅವಧಿಯಲ್ಲಿ ಆಡಳಿತ ಮಂಡಳಿಗಳ ಪದಾವಧಿಯು ಮುಕ್ತಾಯಗೊಳ್ಳಲಿರುವ ಸೌಹಾರ್ದ ಸಹಕಾರಿ ಆಡಳಿತ ಮಂಡಳಿಯ ಚುನಾವಣೆಗಳನ್ನು ದಿನಾಂಕ: 06-06-2024ರವರೆಗೆ ಮುಂದೂಡಿ ಹಾಲಿ ಇರುವ ಆಡಳಿತ ಮಂಡಳಿ ಹಾಗೂ ವಿಶೇಷಾಧಿಕಾರಿಗಳ ಅವಧಿಯನ್ನು ಮುಂದುವರಿಸುವುದು ಅವಶ್ಯವೆಂದು ಪರಿಗಣಿಸಿ ಈ ಕೆಳಗಿನಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಸಿಒ 33 ಸಿಎಲ್ಎಮ್ 2024</u>**
**<u>ಬೆಂಗಳೂರು, ದಿನಾಂಕ: 21-03-2024</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಕಲಂ 70ರ ಅವಕಾಶದಂತೆ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ ತಕ್ಷಣದಿಂದ ಜಾರಿಗೆ ಬರುವಂತೆ ಈ ಕೆಳಕಂಡಂತೆ ಆದೇಶಿಸಿದೆ.

1. ಮಾರ್ಚ್ ಮಾಹೆ 2024 ರಿಂದ ದಿನಾಂಕ:06-06-2024ರ ಅವಧಿಯಲ್ಲಿ ಆಡಳಿತ ಮಂಡಳಿಗಳ ಪದಾವಧಿಯು ಮುಕ್ತಾಯಗೊಳ್ಳಲಿರುವ ಸಹಕಾರಿ/ಬ್ಯಾಂಕುಗಳ ಚುನಾವಣೆಗಳನ್ನು ಕರ್ನಾಟಕ ಸೌಹಾರ್ದ ಸಹಕಾರಿಗಳ ಅಧಿನಿಯಮ 1997ರ ಪ್ರಕರಣ 24 (2), 26 (1), 28 (3) ಮತ್ತು 38 (ಎ)ಗಳಿಗೆ ವಿನಾಯಿತಿ ನೀಡಿ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿಯ ಚುನಾವಣೆಗಳನ್ನು ದಿನಾಂಕ: 06-06-2024ರ ವರೆಗೆ ಮುಂದೂಡಿ ಹಾಲಿ ಇರುವ ಆಡಳಿತ ಮಂಡಳಿ ಹಾಗೂ ಪದಾಧಿಕಾರಿಗಳ ಅವಧಿಯನ್ನು ಮುಂದುವರಿಸಿದೆ. ಅಧಿಕಾರವಧಿ ಮುಂದುವರೆಸಿರುವ ಅವಧಿಯಲ್ಲಿ ಆಡಳಿತ ಮಂಡಳಿಗಳು ಯಾವುದೇ ಪ್ರಮುಖ ನಿರ್ಣಯಗಳನ್ನು ತೆಗೆದುಕೊಳ್ಳತಕ್ಕದ್ದಲ್ಲ ಹಾಗೂ ದೈನಂದಿನ ಕಾರ್ಯಚಟುವಟಿಕೆಗಳಿಗೆ ಸೀಮಿತಗೊಳಿಸಿ ಕಾರ್ಯನಿರ್ವಹಿಸತಕ್ಕದ್ದು.
2. ಈಗಾಗಲೇ ಆಡಳಿತ ಮಂಡಳಿ ಚುನಾವಣೆ ನಡೆದು ಪದಾಧಿಕಾರಿಗಳ ಚುನಾವಣೆ ಬಾಕಿ ಇದ್ದಲ್ಲಿ, ಅಂತಹ ಪ್ರಕರಣಗಳಿಗೆ ಈ ಆದೇಶ ಅನ್ವಯವಾಗತಕ್ಕದ್ದಲ್ಲ.

2

3. ಈಗಾಗಲೇ, ಚುನಾವಣೆ ವೇಳಾಪಟ್ಟಿ ಪ್ರಕಟಿಸಿದ್ದಲ್ಲಿ ಅಂತಹ ಸೌಹಾರ್ದ ಸಹಕಾರಿಗಳ ಚುನಾವಣೆ ಪ್ರಕ್ರಿಯೆಯು ಯಥಾಸ್ಥಿತಿಯಲ್ಲಿ ನಿಂತು ಹೋಗತಕ್ಕದ್ದು ಮತ್ತು ದಿನಾಂಕ:06-06-2024ರ ನಂತರ ನಿಂತು ಹೋದ ಹಂತದಿಂದಲೇ ಚುನಾವಣಾ ಪ್ರಕ್ರಿಯೆ ಮುಂದುವರಿಸತಕ್ಕದ್ದು.
4. ಕರ್ನಾಟಕ ಸೌಹಾರ್ದ ಸಹಕಾರಿಗಳ ಅಧಿನಿಯಮ 1997ರ ಪ್ರಕರಣ 38 (ಎ) ರಡಿಯಲ್ಲಿ ಸಂದರ್ಭಾನುಸಾರ ವಿಶೇಷಾಧಿಕಾರಿ ನೇಮಿಸಿರುವ ಪ್ರಕರಣಗಳಲ್ಲಿ ವಿಶೇಷಾಧಿಕಾರಿಗಳೇ ಮುಂದುವರೆಯತಕ್ಕದ್ದು.
5. ಈಗಾಗಲೇ ಘನ ನ್ಯಾಯಾಲಯಗಳ ಆದೇಶದಂತೆ ಚುನಾವಣಾ ಪ್ರಕ್ರಿಯೆ ಪ್ರಾರಂಭಗೊಂಡಿದ್ದಲ್ಲಿ/ಪ್ರಾರಂಭಗೊಳ್ಳಬೇಕಿದ್ದಲ್ಲಿ ಈ ಆದೇಶವನ್ನು ಘನ ನ್ಯಾಯಾಲಯದ ಗಮನಕ್ಕೆ ತಂದು ಘನ ನ್ಯಾಯಾಲಯದ ಆದೇಶದಂತೆ ಕ್ರಮವಿಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

2/3/24

**(ಎ.ಸಿ.ದಿವಾಕರ್)**
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ

| ಮಿತ್ರಬಂಧು ಸೌಹಾರ್ದ ಪತ್ತಿನ ಸಹಕಾರಿ ನಿ., ಲಿಂಗಸೂಗೂರು. | |
|---|---|
| **ಆರ್ಥಿಕ ಅಂಶಗಳು** | **31.03.2024ಕ್ಕೆ ಇದ್ದಂತೆ (ಲಕ್ಷಗಳಲ್ಲಿ)** |
| ಒಟ್ಟು ಠೇವಣಿಗಳು | 902.96 |
| ಒಟ್ಟು ಸಾಲಗಳು | 754.63 |
| ಒಟ್ಟು ವ್ಯವಹಾರ | 1657.59 |
| ದುಡಿಯುವ ಬಂಡವಾಳ | 989.90 |
| ಹೂಡಿಕೆಗಳು | 269.31 |
| ಶೇರು ಬಂಡವಾಳ | 56.07 |
| ನಿವ್ವಳ ಲಾಭ | 38.55 |

| ಸಂಡೂರು ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., | |
|---|---|
| **ಆರ್ಥಿಕ ಅಂಶಗಳು** | **31.03.2024ಕ್ಕೆ ಇದ್ದಂತೆ (ಕೋಟಿಗಳಲ್ಲಿ)** |
| ಒಟ್ಟು ಠೇವಣಿಗಳು | 111.15 |
| ಒಟ್ಟು ಸಾಲಗಳು | 30.32 |
| ಸ್ವಂತ ನಿಧಿಗಳು | 16.11 |
| ನಿವ್ವಳ ಲಾಭ | 2.06 |
| ನೆಟ್ ಎನ್.ಪಿ.ಎ | 0.00 |
| ಒಟ್ಟು ವ್ಯವಹಾರ | 141.47 |

## ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಆಯ್ಕೆ

### ಶ್ರೀ ಶಿವಾಜಿ ಸೌಹಾರ್ದ ಸಹಕಾರಿ ನಿ., ತುಮಕೂರು



ಶ್ರೀ ಸುರೇಶ್ ರಾವ್ ಟಿ.ಎಲ್
ಅಧ್ಯಕ್ಷರು



ಶ್ರೀ ಸುರೇಶ್ ಕೆ.ಜಿ
ಉಪಾಧ್ಯಕ್ಷರು

| ಆಕ್ಸ್‌ಫರ್ಡ್ ಸೌಹಾರ್ದ ಸಹಕಾರಿ ಸಂಘ ನಿ., ಸಿಂಧನೂರು | |
|---|---|
| **ಆರ್ಥಿಕ ಅಂಶಗಳು** | **31.03.2024ಕ್ಕೆ ಇದ್ದಂತೆ (ಕೋಟಿಗಳಲ್ಲಿ)** |
| ಒಟ್ಟು ಠೇವಣಿಗಳು | 9.99 |
| ಒಟ್ಟು ಸಾಲಗಳು | 9.06 |
| ಶೇರು ಬಂಡವಾಳ | 61.54 ಲಕ್ಷ |
| ನಿವ್ವಳ ಲಾಭ | 45 ಲಕ್ಷ |
| ದುಡಿಯುವ ಬಂಡವಾಳ | 10.63 |
| ಒಟ್ಟು ವ್ಯವಹಾರ | 19.06 |

# ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳು ಹಾಗೂ ಸೌಹಾರ್ದ ಸಹಕಾರಿ ಬ್ಯಾಂಕುಗಳು ಸಾಧಿಸಿದ 2023-24ನೇ (ಮಾರ್ಚ್ 2024ಕ್ಕೆ ಇದ್ದಂತೆ) ವರ್ಷಾಂತ್ಯಕ್ಕೆ ಆರ್ಥಿಕ ಅಂಕಿ ಸಂಖ್ಯೆಗಳು

**ಆದರ್ಶ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಹರಪನಹಳ್ಳಿ, ವಿಜಯನಗರ.**

| ಆರ್ಥಿಕ ಅಂಶಗಳು | 31.03.2024ಕ್ಕೆ ಇದ್ದಂತೆ (ಲಕ್ಷಗಳಲ್ಲಿ) |
|---|---|
| ಶೇರು ಹಾಗೂ ನಿಧಿಗಳು | 225.19 |
| ಹೂಡಿಕೆಗಳು | 845.25 |
| ಠೇವಣಿಗಳು | 1262.18 |
| ಸಾಲ ಮತ್ತು ಮುಂಗಡಗಳು | 610.18 |
| ನಿವ್ವಳ ಲಾಭ | 35.27 |
| ಒಟ್ಟು ಎನ್.ಪಿ.ಎ ಅನುಪಾತ | 2.68% |
| ನೆಟ್ ಎನ್.ಪಿ.ಎ ಅನುಪಾತ | 0.00% |

**ವಿಕಾಸ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬಳ್ಳಾರಿ**

| ಆರ್ಥಿಕ ಅಂಶಗಳು | 31.03.2024ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
|---|---|
| ಒಟ್ಟು ಠೇವಣಿ | 811.45 |
| ಸಾಲ ಹಾಗು ಮುಂಗಡಗಳು | 544.49 |
| ಒಟ್ಟು ವ್ಯವಹಾರ | 1355.94 |
| ತೆರಿಗೆ ಮೊದಲ ಲಾಭ | 22.83 |
| ತೆರಿಗೆ ನಂತರದ ಲಾಭ | 9.20 |
| ಒಟ್ಟು ಎನ್.ಪಿ.ಎ ಅನುಪಾತ | 4.17 |
| ನೆಟ್ ಎನ್.ಪಿ.ಎ ಅನುಪಾತ | 0.75 |
| ನೆಟ್ ಸ್ವಂತ ನಿಧಿ | 76 |

**ಒಡಿಯೂರು ಶ್ರೀ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., ಬಂಟ್ವಾಳ**

| ಆರ್ಥಿಕ ಅಂಶಗಳು | 31.03.2024ಕ್ಕೆ ಇದ್ದಂತೆ |
|---|---|
| ಸದಸ್ಯರು | 36,700 |
| ಒಟ್ಟು ಸಾಲಗಳು | 244 ಕೋಟಿ |
| ಸ್ವಸಹಾಯ ಗುಂಪುಗಳು | 7,214 |
| ಪಾಲು ಬಂಡವಾಳ | 2 ಕೋಟಿ |
| ಒಟ್ಟು ಠೇವಣಿ | 302 ಕೋಟಿ |
| ಒಟ್ಟು ವ್ಯವಹಾರ | 546 ಕೋಟಿ |
| ನಿವ್ವಳ ಲಾಭ | 4.5 ಕೋಟಿ |
| ದುಡಿಯುವ ಬಂಡವಾಳ | 320 ಕೋಟಿ |
| ಶಾಖೆಗಳು | 19 |

**ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಚಿತ್ರದುರ್ಗ**

| ಆರ್ಥಿಕ ಅಂಶಗಳು | 31.03.2024ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
|---|---|
| ನಿವ್ವಳ ಲಾಭ | 6.24 |
| ಒಟ್ಟು ಠೇವಣಿ | 189 |
| ಒಟ್ಟು ಸಾಲಗಳು | 122 |
| ಒಟ್ಟು ಎನ್‌ಪಿಎ ಅನುಪಾತ | 0.70 |
| ನೆಟ್ ಎನ್‌ಪಿಎ ಅನುಪಾತ | 0.00 |
| ಸ್ವಂತ ಬಂಡವಾಳ | 40 |
| ಒಟ್ಟು ವ್ಯವಹಾರ | 311 |
| ಸಿ.ಆರ್.ಎ.ಆರ್ | 22.18 |
| ಒಟ್ಟು ಹೂಡಿಕೆಗಳು | 71 |

**ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಪುತ್ತೂರು**

| ಆರ್ಥಿಕ ಅಂಶಗಳು | 31.03.2024ಕ್ಕೆ ಇದ್ದಂತೆ |
|---|---|
| ಸದಸ್ಯರು | 45,077 |
| ಒಟ್ಟು ಠೇವಣಿ | 316 ಕೋಟಿ |
| ಒಟ್ಟು ಸಾಲಗಳು | 287 ಕೋಟಿ |
| ಶೇರು ಬಂಡವಾಳ | 9,75 ಕೋಟಿ |
| ಒಟ್ಟು ವ್ಯವಹಾರ | 603 ಕೋಟಿ |
| ನಿವ್ವಳ ಲಾಭ | 5.18 ಕೋಟಿ |
| ನೆಟ್ ಎನ್.ಪಿ.ಎ ಅನುಪಾತ | 1.51 |

**ಶ್ರೀ ಕನ್ಯಕಾಪರಮೇಶ್ವರಿ ಸೌಹಾರ್ದ ಸಹಕಾರಿ ಸಂಘ ನಿ., ಚಿತ್ರದುರ್ಗ**

| ಆರ್ಥಿಕ ಅಂಶಗಳು | 31.03.2024ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
|---|---|
| ಒಟ್ಟು ವ್ಯವಹಾರ | 79 |
| ಸಾಲ ಮತ್ತು ಮುಂಗಡಗಳು | 36 |
| ನಿವ್ವಳ ಲಾಭ | 1.42 |
| ಒಟ್ಟು ನಿಧಿಗಳು | 11 |
| ಒಟ್ಟು ಠೇವಣಿಗಳು | 43 |

| ಗಂಗೊಳ್ಳಿ ಟೌನ್ ಸೌಹಾರ್ದ ಕೋ-ಆಪರೇಟಿವ್ ಲಿ., ಗಂಗೊಳ್ಳಿ | |
|---|---|
| ಆರ್ಥಿಕ ಅಂಶಗಳು | 31.03.2024ಕ್ಕೆ ಇದ್ದಂತೆ |
| ನಿವ್ವಳ ಲಾಭ | 1,03,20,242/– |
| ಠೇವಣಿಗಳು | 77,59,00,000/– |
| ಸದಸ್ಯರ ಸಾಲಗಳು | 62,13,63,000/– |
| ನಿಧಿಗಳು | 5,40,00,000/– |
| ಹೂಡಿಕೆಗಳು | 27,00,00,000/– |
| ಪಾಲು ಬಂಡವಾಳ | 2,27,76,000/– |

| ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿ ಸಂಘ ನಿ., ಚಾಮರಾಜನಗರ | |
|---|---|
| ಆರ್ಥಿಕ ಅಂಶಗಳು | 31.03.2024ಕ್ಕೆ ಇದ್ದಂತೆ |
| ಶೇರು ಬಂಡವಾಳ | 1,35,19,400 |
| ಠೇವಣಿಗಳು | 3,14,01,211 |
| ನಿಧಿಗಳು | 67,71,018 |
| ಹೂಡಿಕೆಗಳು | 1,21,94,752 |
| ಸಾಲಗಳು | 3,75,40,178 |
| ನಿವ್ವಳ ಲಾಭ | 28,54,484 |
| 2023–24 ವಹಿವಾಟು | 25 ಕೋಟಿ |

| ಶ್ರೀ ಬಸವೇಶ್ವರ ಸೌಹಾರ್ದ ಸಹಕಾರಿ ಸಂಘ ನಿ., ಕಲ್ಲೋಳಿ ಬೆಳಗಾವಿ | |
|---|---|
| ಆರ್ಥಿಕ ಅಂಶಗಳು | 31.03.2024ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
| ಶೇರು ಹಣ | 78.76 ಲಕ್ಷ |
| ನಿಧಿಗಳು | 19.63 |
| ಠೇವಣಿಗಳು | 57.88 |
| ಸಾಲಗಳು | 65.39 |
| ದುಡಿಯುವ ಬಂಡವಾಳ | 78.31 |
| ಗುಂತಾವಣಿಗಳು | 11.56 |
| ಸಾಲ ವಸೂಲಾತಿ | 100% |
| ನಿವ್ವಳ ಲಾಭ | 3.89 |
| ಒಟ್ಟು ವಹಿವಾಟು | 205 |

| ಶ್ರೀ ಸೀತಾರಾಘವ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಹೊಸದುರ್ಗ. | |
|---|---|
| ಆರ್ಥಿಕ ಅಂಶಗಳು | 31.03.2024ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
| Networth | 21.77 |
| ನಿವ್ವಳ ಲಾಭ | 2.15 |
| ಒಟ್ಟು ಠೇವಣಿಗಳು | 167.18 |
| ಒಟ್ಟು ಹೂಡಿಕೆಗಳು | 41.87 |
| ಸಿ.ಆರ್.ಎ.ಆರ್ | 13.46% |
| ನೆಟ್ ಎನ್.ಪಿ.ಎ | 2.76% |
| ಒಟ್ಟು ವ್ಯವಹಾರ | 286.25 |
| ಒಟ್ಟು ಸಾಲಗಳು | 119.20 |

| ಶ್ರೀ ಭ್ರಮರಾಂಭ ಪತ್ತಿನ ಸೌಹಾರ್ದ ಸಹಕಾರಿ ನಿ., ಮಸ್ಕಿ | |
|---|---|
| ಆರ್ಥಿಕ ಅಂಶಗಳು | 31.03.2024ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
| ಒಟ್ಟು ಠೇವಣಿ | 392.01 |
| ಒಟ್ಟು ಸಾಲ | 308.40 |
| ಒಟ್ಟು ವ್ಯವಹಾರ | 700.41 |
| ದುಡಿಯುವ ಬಂಡವಾಳ | 448.57 |
| ನಿವ್ವಳ ಲಾಭ | 5.25 |
| ಒಟ್ಟು ಎನ್.ಪಿ.ಎ ಅನುಪಾತ | 4.63 |

| ಸುಣಧೋಳಿ ಮಹಿಳಾ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ., ಸುಣಧೋಳಿ | |
|---|---|
| ಆರ್ಥಿಕ ಅಂಶಗಳು | 31.03.2024ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
| ಶೇರು ಬಂಡವಾಳ | 41.06 |
| ಒಟ್ಟು ಸಾಲಗಳು | 34.41 |
| ಒಟ್ಟು ಠೇವಣಿಗಳು | 44.06 |
| ಹೂಡಿಕೆಗಳು | 12.52 |
| ನಿವ್ವಳ ಲಾಭ | 01.01 |
| ನಿಧಿಗಳು | 6.14 |
| ದುಡಿಯುವ ಬಂಡವಾಳ | 53.14 |

| ಹೊಯ್ಸಳ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಚೆಳ್ಳಕೆರೆ, ಚಿತ್ರದುರ್ಗ. | |
|---|---|
| ಆರ್ಥಿಕ ಅಂಶಗಳು | 31.03.2024ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
| ಶೇರು ಬಂಡವಾಳ | 2.28 |
| ಒಟ್ಟು ಠೇವಣಿಗಳು | 46.01 |
| ಒಟ್ಟು ಮುಂಗಡಗಳು | 62.29 |
| ಒಟ್ಟು ನಿಧಿಗಳು | 24.84 |
| ನಿವ್ವಳ ಲಾಭ | 5.52 |
| ಹೂಡಿಕೆಗಳು | 29.60 |
| ಒಟ್ಟು ವ್ಯವಹಾರ | 108.30 |
| ಒಟ್ಟು ಸಾಲಗಳು | 27.00 |
| ದುಡಿಯುವ ಬಂಡವಾಳ | 100.13 |

| ಶ್ರೀ ಉದಯರವಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ತಿಪಟೂರು | |
|---|---|
| ಆರ್ಥಿಕ ಅಂಶಗಳು | 31.03.2024ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
| ಒಟ್ಟು ಠೇವಣಿಗಳು | 288.02 |
| ಒಟ್ಟು ಸಾಲ ಮತ್ತು ಮುಂಗಡಗಳು | 243.45 |
| ಆಪದ್ಧನ ಮತ್ತು ಇತರೆ ನಿಧಿಗಳು | 14.44 |
| ನಿವ್ವಳ ಲಾಭ | 8.83 |
| ಒಟ್ಟು ವ್ಯವಹಾರ | 1364 |
| ಉದ್ದೇಶಿತ ಡಿವಿಡೆಂಡ್ | ಶೇ.19 |
| ಸಾಲ ವಸೂಲಾತಿ | ಶೇ.93 |

| ಸುಕೋ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬಳ್ಳಾರಿ | |
|---|---|
| ಆರ್ಥಿಕ ಅಂಶಗಳು | 31.03.2024ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
| ಒಟ್ಟು ಠೇವಣಿ | 1114 |
| ಸಾಲ ಮತ್ತು ಮುಂಗಡಗಳು | 713.50 |
| ಒಟ್ಟು ವ್ಯವಹಾರ | 1827.50 |
| ನೆಟ್ ಎನ್.ಪಿ.ಎ ಅನುಪಾತ | 4.84% |
| ಒಟ್ಟು ಲಾಭ | 10.23 |
| ನಿವ್ವಳ ಲಾಭ | 6.23 |

| ನ್ಯೂ ಶ್ರೀ ವೈಷ್ಣವಿ ಸೌಹಾರ್ದ ಸಹಕಾರಿ ಸಂಘ ನಿ., ಸಿಂಧನೂರು, ರಾಯಚೂರು. | |
|---|---|
| ಆರ್ಥಿಕ ಅಂಶಗಳು | 31.03.2024ಕ್ಕೆ ಇದ್ದಂತೆ |
| ಶೇರು ಬಂಡವಾಳ | 15,25,300.00 |
| ಒಟ್ಟು ಠೇವಣಿಗಳು | 3,30,48,611.00 |
| ಒಟ್ಟು ಸಾಲ ಮತ್ತು ಮುಂಗಡಗಳು | 2,03,39,668.00 |
| ಒಟ್ಟು ವ್ಯವಹಾರ | 5,33,88,279.00 |
| ದುಡಿಯುವ ಬಂಡವಾಳ | 3,52,05,538.00 |
| ಹೂಡಿಕೆಗಳು | 85,00,000.00 |
| ಸಾಲ ವಸೂಲಾತಿ | 98% |

| ಮಾನ್ವಿ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ನಿ, ಮಾನ್ವಿ | |
|---|---|
| ಆರ್ಥಿಕ ಅಂಶಗಳು | 31.03.2024ಕ್ಕೆ ಇದ್ದಂತೆ (ಲಕ್ಷಗಳಲ್ಲಿ) |
| ಶೇರು ಮತ್ತು ನಿಧಿಗಳು | 3,668.75 |
| ಹೂಡಿಕೆಗಳು | 7,574.91 |
| ಠೇವಣಿಗಳು | 26,063.10 |
| ಒಟ್ಟು ಸಾಲ ಮತ್ತು ಮುಂಗಡಗಳು | 19,217.90 |
| ಒಟ್ಟು ವ್ಯವಹಾರ | 45,281.00 |
| ಸಿ.ಆರ್.ಎ.ಆರ್ | 11.15% |
| ನಿವ್ವಳ ಲಾಭ | 380.32 |
| ನೆಟ್ ಎನ್.ಪಿ.ಎ | 2.80 |

| ಅಳಣಾವರ ಪತ್ತಿನ ಸೌಹಾರ್ದ ಸಹಕಾರಿ ನಿ., ಅಳಣಾವರ | |
|---|---|
| ಆರ್ಥಿಕ ಅಂಶಗಳು | 31.03.2024ಕ್ಕೆ ಇದ್ದಂತೆ (ಲಕ್ಷಗಳಲ್ಲಿ) |
| ನಿವ್ವಳ ಲಾಭ | 83.52 |
| ಒಟ್ಟು ಠೇವಣಿ | 1592.65 |
| ಒಟ್ಟು ಸಾಲ | 1639.14 |
| ಆದಾಯ | 207.75 |
| ಶೇರು ಬಂಡವಾಳ | 150.21 |
| ಸ್ವಂತ ಬಂಡವಾಳ | 411.73 |

| ಸುಣಧೋಲಿ ಮಹಿಳಾ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ., ಸುಣಧೋಳಿ | |
|---|---|
| ಆರ್ಥಿಕ ಅಂಶಗಳು | 31.03.2024ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
| ನಿಧಿಗಳು | 6.14 |
| ಸಾಲಗಳು | 34.41 |
| ಹೂಡಿಕೆಗಳು | 12.52 |
| ದುಡಿಯುವ ಬಂಡವಾಳ | 53.14 |
| ಠೇವಣಿಗಳು | 44.06 |
| ಶೇರು ಬಂಡವಾಳ | 41.06 |
| ನಿವ್ವಳ ಲಾಭ | 01.01 |

| ಜನತಾ ಸೌಹಾರ್ದ ಸಹಕಾರಿ ಸಂಘ ನಿ., ರಾಯಚೂರು | |
|---|---|
| ಆರ್ಥಿಕ ಅಂಶಗಳು | 31.03.2024ಕ್ಕೆ ಇದ್ದಂತೆ (ಲಕ್ಷಗಳಲ್ಲಿ) |
| ಸಾಲಗಳು | 7686 |
| ಹೂಡಿಕೆಗಳು | 1856 |
| ದುಡಿಯುವ ಬಂಡವಾಳ | 9139 |
| ಠೇವಣಿಗಳು | 6629 |
| ಒಟ್ಟು ವ್ಯವಹಾರ | 14316 |
| ನಿವ್ವಳ ಲಾಭ | 255 |

| ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ-ಆಪರೇಟಿವ್ ಸೊಸೈಟಿ ಲಿ., ಕೋಲಾರ | |
|---|---|
| ಆರ್ಥಿಕ ಅಂಶಗಳು | 31.03.2024ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
| ನಿಧಿಗಳು | 44.45 |
| ಸಾಲಗಳು | 188.15 |
| ಶೇರು ಬಂಡವಾಳ | 3.50 |
| ಠೇವಣಿಗಳು | 233.07 |
| ಒಟ್ಟು ವ್ಯವಹಾರ | 421.22 |
| ನಿವ್ವಳ ಲಾಭ | 15.17 |
| ನೆಟ್ ಎನ್.ಪಿ.ಎ | 2.62 (1.39%) |

| ಶ್ರೀ ವಿಷ್ಣು ವಿಲಾಸ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ಸಿಂಧನೂರು | |
|---|---|
| ಆರ್ಥಿಕ ಅಂಶಗಳು | 31.03.2024ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
| ನಿಧಿಗಳು | 7.00 |
| ಸಾಲಗಳು | 61.75 |
| ಶೇರು ಬಂಡವಾಳ | 2.72 |
| ಠೇವಣಿಗಳು | 68.31 |
| ಒಟ್ಟು ವ್ಯವಹಾರ | 130.06 |
| ನಿವ್ವಳ ಲಾಭ | 2.12 |

| ನವಕಲ್ಯಾಣ ಕರ್ನಾಟಕ ಸೌಹಾರ್ದ ಪತ್ತಿನ ಸಹಕಾರಿ ನಿ., ಬೆಂಗಳೂರು. | |
|---|---|
| ಆರ್ಥಿಕ ಅಂಶಗಳು | 31.03.2024ಕ್ಕೆ ಇದ್ದಂತೆ (ಲಕ್ಷಗಳಲ್ಲಿ) |
| ಸದಸ್ಯರು | 2669 |
| ಶೇರು ಬಂಡವಾಳ | 408.15 |
| ನಿಧಿಗಳು | 698.37 |
| ಠೇವಣಿಗಳು | 7036.64 |
| ಹೂಡಿಕೆಗಳು | 2412.93 |
| ಸಾಲಗಳು | 5434.88 |
| ದುಡಿಯುವ ಬಂಡವಾಳ | 8482.56 |
| ಒಟ್ಟು ವ್ಯವಹಾರ | 12471.52 |
| ನಿವ್ವಳ ಲಾಭ | 110.00 |
| Credit Deposit Ratio | 77.24% |
| Overdues | 176.55 |
| Provision made for Overdues/NPA | 189.19 |
| GROSS NPA | 3.25% |
| NET NPA | 0.00% |

| ಕೆಂಪೇಗೌಡ ಪತ್ತಿನ ಸೌಹಾರ್ದ ಸಹಕಾರಿ ನಿ., ತುಮಕೂರು | |
|---|---|
| ಆರ್ಥಿಕ ಅಂಶಗಳು | 31.03.2024ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
| ತೆರಿಗೆ ಮೊದಲ ಲಾಭ | 2,18,00,000 |
| ತೆರಿಗೆ ನಂತರದ ಲಾಭ | 53,02,000 |
| ಒಟ್ಟು ಎನ್.ಪಿ.ಎ ಅನುಪಾತ | 0.40 |
| ನೆಟ್ ಎನ್.ಪಿ.ಎ ಅನುಪಾತ | 0.00 |

# ಸಹಕಾರ ಸಂಘಗಳ ಮಂಡಳಿ ಚುನಾವಣೆ ಮುಂದೂಡುವ ಮತ್ತು ಪದಾಧಿಕಾರಿ ಅವಧಿಯನ್ನು ಹೆಚ್ಚಿಸಿ, ಸರ್ಕಾರದ ಆದೇಶ - ಒಂದು ವಿಮರ್ಶೆ.



– ಶ್ರೀ ಸಿ.ಎನ್ ಪರಶಿವಮೂರ್ತಿ, ಸಹಕಾರ ಸಂಘಗಳ ನಿವೃತ್ತ ಅಪರ ನಿಬಂಧಕರು.

ರಾಜ್ಯ ಸರ್ಕಾರದ ಸಹಕಾರ ಇಲಾಖೆ ಒಂದು ಆದೇಶ ಈ ಕೆಳಕಂಡಂತೆ ಕಾಯಿದೆ ಕಲಂ.121ನ್ನು ಉಪಯೋಗಿಸಿ ಆದೇಶಿಸಿದೆ.

“ರಾಜ್ಯದಲ್ಲಿರುವ ಆಡಳಿತ ಮಂಡಳಿ ಅವಧಿ ಮುಕ್ತಾಯಗೊಂಡಿರುವ ಸಹಕಾರ ಬ್ಯಾಂಕ್‌ಗಳ ಪ್ರಾಥಮಿಕ, ಮಾಧ್ಯಮಿಕ, ಒಕ್ಕೂಟಗಳ, ಫೆಡರಲ್ ಸಂಸ್ಥೆ ಮತ್ತು ಅಪೆಕ್ಸ್ ಸಹಕಾರ ಸಂಘಗಳ ಚುನಾವಣೆಗಳನ್ನು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 28(ಎ)(5), 29ಎಫ್(4) ಮತ್ತು 39(ಎ)ಗೆ ವಿನಾಯತಿ ನೀಡಿ ಮುಂದಿನ ಆದೇಶದವರೆಗೆ ಚುನಾವಣೆಗಳನ್ನು ಮುಂದೂಡಿ ಹಾಲಿ ಇರುವ ಆಡಳಿತ ಮಂಡಳಿ ಹಾಗೂ ಪದಾಧಿಕಾರಿಗಳ ಅವಧಿಯನ್ನು ಮುಂದೂವರಿಸಿದೆ.

ಈಗಾಗಲೇ ಚುನಾವಣೆ ವೇಳಾ ಪಟ್ಟಿ () ಹೊರಡಿಸಿ, ಚುನಾವಣೆ ಪ್ರಕ್ರಿಯೆ ಜಾರಿಯಲ್ಲಿದ್ದು. ಅದನ್ನು ಸಹ ತಕ್ಷಣದಿಂದ ಜಾರಿಗೆ ಬರುವಂತೆ ರದ್ದು ಪಡಿಸಿದೆ.”

(ಸಿಓ 34 ಸಿಎಲ್‌ಎಮ್ 2024 (ಇ) ದಿನಾಂಕ 13.03.2024)

ಈ ಆದೇಶದ ಉಲ್ಲೇಖದಲ್ಲಿ ಸಹಕಾರ ಸಂಘಗಳ ನಿಬಂಧಕರು 02.03.2024 ರಂದು (ಆರ್‌ಸಿಎಸ್/ಆರ್‌ಎಸ್‌ಆರ್/ಸಹಕಾರ ಚುನಾವಣೆ/139/2023–24 ರಂದು ಬರೆದ ಪತ್ರದಲ್ಲಿನ ಮನವಿಯಂತೆ ಈ ಆದೇಶ ಹೊರಡಿಸಲಾಗಿದೆ. (ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆಯಡಿ ಕಲಂ.72 ರಡಿ ಇದೇ ರೀತಿ ಆದೇಶ ಮಾಡಿ ಸೌಹಾರ್ದ ಸಹಕಾರಿಗಳ ಬಗ್ಗೆಯೂ ಆದೇಶಿಸಲಾಗಿದೆ.)

ಸಹಕಾರ ಸಂಘಗಳ ಮಂಡಳಿ ಚುನಾವಣೆಯು 1984ರ ಪೂರ್ವದಲ್ಲಿ ಒಂದು ವರ್ಷದ ಅವಧಿಗೆ ಇತ್ತು, ಆ ನಂತರ ಮೂರು ವರ್ಷ ಮತ್ತು 1998 ರಲ್ಲಿ 5 ವರ್ಷಗಳೆಂದು ನಿಗದಿ ಪಡಿಸಿತು. ಇದರ ಉದ್ದೇಶ ಆಯ್ಕೆಯಾದ ಮಂಡಳಿ ಸದಸ್ಯರ ಅಗತ್ಯಗಳನ್ನು ಪೂರೈಸಲು ಹೆಚ್ಚು ಸಮಯ ತನ್ನ ಮಂಡಳಿಗೆ ನೀಡುವ ಉದ್ದೇಶದಿಂದ. ಸಹಕಾರ ಕಾಯಿದೆಯನ್ನು 1998ರಲ್ಲಿ ತಿದ್ದುಪಡಿ ಮಾಡಿದ ನಂತರ, ಭಾರತದ ಸಂವಿಧಾನಕ್ಕೂ ತಿದ್ದುಪಡಿ (97ನೇ ತಿದ್ದುಪಡಿ) ಮಾಡಿ ಆಡಳಿತ ಮಂಡಳಿ ಅವಧಿಯನ್ನು ಐದು ವರ್ಷಗಳೆಂದು ನಿಗದಿ ಪಡಿಸಿತು. ಆ ನಂತರ ಗುಜರಾಜ್ ಉಚ್ಚನ್ಯಾಯಾಲಯದ ತೀರ್ಪಿಗನುಗುಣವಾಗಿ, 97ನೇ ಸಂವಿಧಾನ ತಿದ್ದುಪಡಿ ಅಸಿಂಧು ಎಂದು ಶ್ರೇಷ್ಠ ನ್ಯಾಯಾಲಯವೂ ಸಮರ್ಥಿಸಿತು. ಆದರೆ ಕರ್ನಾಟಕ ಸರ್ಕಾರ ಸಂವಿಧಾನ ತಿದ್ದುಪಡಿ ಆಧರಿಸಿ 2013 ರಲ್ಲಿ 1959ರ ಕಾಯಿದೆಗೆ ತಿದ್ದುಪಡಿ ತಂದು ಮಂಡಳಿ ಅವಧಿಯನ್ನು 5 ವರ್ಷ ಎಂದು ಸ್ಪಷ್ಟ ಪಡಿಸಿತು.

ಇದೇ ರೀತಿ ಕರ್ನಾಟಕ ರಾಜ್ಯ ಎ.ಪಿ.ಎಂ.ಸಿ ಕಾಯಿದೆ, ಪಂಚಾಯತ್ ಕಾಯಿದೆ, ಪಟ್ಟಣ ಪಂಚಾಯತ್ ಕಾಯಿದೆಗೂ 73 ಮತ್ತು 74ನೇ ಸಂವಿಧಾನ ತಿದ್ದುಪಡಿ ಪೂರಕವಾಗಿ ಕಾಯಿದೆ ರೂಪಿಸಿತು. ಈ ಕಾಯಿದೆಗಳಲ್ಲಿ ನಿಗದಿ ಪಡಿಸಿದ ಅವಧಿಯೂ ಐದು ವರ್ಷ ಈಗಲೂ ಈ ಕಾಯಿದೆಗಳಲ್ಲಿ ಜಾರಿಯಲ್ಲಿರುವ ನೀತಿ ಎಂದರೆ ಮಂಡಳಿ ಅವಧಿ ಮುಗಿದ ದಿನಾಂಕದಂದು, ಮಂಡಳಿ ಸದಸ್ಯರು ತಮ್ಮ ಅಧಿಕಾರ ಕಳೆದು ಕೊಳ್ಳುತ್ತಾರೆ ಮತ್ತು ಆ ದಿನದಂದು ಸರ್ಕಾರ ಆಡಳಿತಾಧಿಕಾರಿಗಳ ನೇಮಕ ಮಾಡಲೇಬೇಕು ಮತ್ತು ಅದನ್ನು ಮಾಡುತ್ತಿದೆ.

ಭಾರತದ ಶ್ರೇಷ್ಠ ನ್ಯಾಯಾಲಯ ಕರ್ನಾಟಕ ಸಹಕಾರ ಸಂಘಗಳ ಕಾಯಿದೆಯಲ್ಲಿ ಅವಿಶ್ವಾಸ ಮಂಡನೆಗೆ ಅವಕಾಶ ಇಲ್ಲದೇ ಇದ್ದಾಗ ಗುಜರಾತ್ ಪ್ರಕರಣ ಉಲ್ಲೇಖಿಸಿ, ಸಹಕಾರ ಸಂಘಗಳ ಪದಾಧಿಕಾರಿಗಳ ಮೇಲೆ, ಅವಿಶ್ವಾಸ ಮಂಡನೆ ಮಾಡಲು ಎತ್ತಿ ಹಿಡಿದು, ಕಾಯಿದೆಯಲ್ಲಿ ಅಳವಡಿಸಿಕೊಳ್ಳಲು ಅನುವುಮಾಡಿತು. ಹಾಗಯೇ ಎ.ಪಿ.ಎಂ.ಸಿ ಕಾಯಿದೆ ಮತ್ತು ಪಂಚಾಯತ್ ಕಾಯಿದೆಯಲ್ಲಿನ ಮಂಡಳಿ ಸಮಿತಿ ಅವಧಿಯಲ್ಲಿ ಇರುವ ಐದು ವರ್ಷದ ಅವಧಿಯನ್ನು ಉಲ್ಲೇಖಿಸಿ, ಯಾವುದೇ ಮಂಡಳಿ ಅವಧಿಯನ್ನು ಕಾಯಿದೆಯಲ್ಲಿ ನಿಗದಿ ಪಡಿಸಿದಾಗ, ಆ ಅವಧಿ ಮುಗಿದ ದಿನಾಂಕದ ನಂತರದ ಒಂದು ದಿನವೂ ಹೆಚ್ಚುವರಿಯಾಗಿ ಅಧಿಕಾರದಲ್ಲಿ ಮುಂದುವರಿಯಲಾಗದು ಎಂದು ತೀರ್ಪಿತ್ತು ಆಡಳಿತಾಧಿಕಾರಿ ನೇಮಕ ಅನಿವಾರ್ಯ ಎಂದು ಸೂಚಿಸಿತು.

ಇದಕ್ಕೆ ಪೂರಕವಾಗಿ ಶ್ರೇಷ್ಠ ನ್ಯಾಯಾಲಯ ಬೊಮ್ಮಾಯಿ ಪ್ರಕರಣದಲ್ಲಿ ಮುಖ್ಯಮಂತ್ರಿ ಸ್ಥಾನದಿಂದ ಕಿತ್ತಿ ಹಾಕಿದ್ದು ಅಸಂವಿದಾನಿಕ ಮತ್ತು ವಿಧಾನ ಮಂಡಳದಲ್ಲಿ ಮಾತ್ರ, ಅದರ ಸದಸ್ಯರ ಸಂಖ್ಯೆ ಇಲ್ಲದಿದ್ದರೆ ಮಾತ್ರ ಅವರು ಅವರ ಸ್ಥಾನ ಕೊನೆಗೊಳ್ಳುತ್ತದೆ ಎಂದು ಉಲ್ಲೇಖಿಸಿದೆ. ಅವರನ್ನು ಮರು ಸ್ಥಾಪಿಸಲು ವಿಧಾನ ಮಂಡಳದ ಅವಧಿ ಮುಕ್ತಾಯವಾಗಿದ್ದುದರಿಂದ ಅವರನ್ನು ಮುಖ್ಯಮಂತ್ರಿಯಾಗಿ ಮರು ಸ್ಥಾಪಿಸಲಾಗಲಿಲ್ಲ ಎಂದು ಉಲ್ಲೇಖಿಸಿ, ಆ ನಂತರ ರಾಜ್ಯ ಪಾಲರು ಕೇಂದ್ರ ಸರ್ಕಾರ, ರಾಜ್ಯಪಾಲರ ಪ್ರಸ್ತಾವನೆಯಂತೆ ರದ್ದುಪಡಿಸಿದ್ದು ಮುಖ್ಯಮಂತ್ರಿಗಳನ್ನು ಮರು ಸ್ಥಾಪಿಸಿ ಅವರನ್ನು ಬಹುಮತ ಕಳೆದುಕೊಂಡಿದ್ದಾರೆ ಎಂಬ ತೀರ್ಮಾನಕ್ಕೆ ಬರಲು, ವಿಧಾನ ಸಭೆಯಲ್ಲಿ ಮಾತ್ರ ತೀರ್ಮಾನವಾಗಬೇಕೆಂದು ತೀರ್ಪನ್ನು ಈಗಲೂ ಪಾಲಿಸಲಾಗುತ್ತಿದೆ.

ಈಗಲೂ ಸಹಕಾರ ಕಾಯಿದೆಯಲ್ಲಿ ಇರುವ ಅವಕಾಶವೆಂದರೆ, ಮಂಡಳಿ ಅವಧಿ ಐದು ವರ್ಷ. ಆ ಅವಧಿಯೊಳಗೆ ಹೊರಹೊಗುವ ಮಂಡಳಿ ಹೊಸ ಮಂಡಳಿ ಚುನಾವಣೆ ನಡೆಸಲು ಸಾಧ್ಯವಾಗದಿದ್ದರೆ, ಅಂತಹ ಮಂಡಳಿ ಅವಧಿ ಮುಕ್ತಾಯವಾದ ದಿನಾಂಕದ ನಂತರ ಮುಂದುವರಿಯಲು ಅವಕಾಶವಿಲ್ಲ ಮತ್ತು ಸಂಬಂಧಪಟ್ಟ ನಿಬಂಧಕರು ಒಬ್ಬ ಆಡಳಿತಾಧಿಕಾರಿ ಹೆಸರಿಸಬೇಕು ಮತ್ತು ಹೊರ ಹೋಗುವ ಮಂಡಳಿ ತನ್ನ ಸ್ಥಾನದಲ್ಲಿ ಮುಂದುವರಿಯಲು ಅವಕಾಶವಿಲ್ಲ. ಇದರ ಜೊತೆಗೆ, ಅಂತಹ ಮಂಡಳಿ ಪ್ರತಿಯೊಬ್ಬ ಸದಸ್ಯನ್ನು ಐದು ವರ್ಷದ ಅವಧಿವರೆವಿಗೆ, ಸ್ಪರ್ಧಿಸಲು, ಮುಂದುವರಿಯಲು ಪುನರ್ ಆಯ್ಕೆಯಾಗಲು ನಿರ್ಬಂಧವಿದೆ. ಇಂತಹ ಸೃಷ್ಟಿ ಅವಕಾಶಗಳು ಇದ್ದರೂ ಮೇಲ್ಕಂಡ ಸರ್ಕಾರದ ಆದೇಶ ಸೂಕ್ತವೇ? ಇದಕ್ಕೆ ಈ ಹಿಂದೆ ತಮಿಳುನಾಡು ಸಹಕಾರ ಕಾಯಿದೆ ಕಲಂ.60 ರಡಿ ಅವಕಾಶವಿರುವುದನ್ನು ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿದಾಗ, ಕಲಂ.60ರ ಅವಶ್ಯಕತೆ ಇದೆ ಎಂದು ತೀರ್ಪಿತ್ತಿದೆ. ಆದರೆ ಅದನ್ನು ಉಪಯೋಗಿಸುವಾಗ, ಕಾಯಿದೆ ಜಾರಿ ಮಾಡುವ ಸಂದರ್ಭದಲ್ಲಿ ಬರಬಹುದಾದ ತೊಡಕನ್ನು ಊಹಿಸಲು ಸಾಧ್ಯವಿಲ್ಲದ ಸಂದರ್ಭದಲ್ಲಿ ಮಾತ್ರ ಪಲಾಯಿಸಬೇಕು. ಎಲ್ಲಿ ಕಾನೂನಿನಲ್ಲಿ ಸೃಷ್ಟಿ ಅವಕಾಶಗಳು ನೀಡಲಾಗಿದೆಯೋ, ಅದನ್ನು ಸದುದೇಶವಲ್ಲದ ಉದ್ದೇಶಕ್ಕಾಗಿ ಉಪಯೋಗಿಸಲಾಗದು.

ಈ ಬಗ್ಗೆ ಎರಡು ಲೇಖನಗಳನ್ನು ಕರ್ನಾಟಕ ಸೌಹಾರ್ದ ಕಾಯಿದೆ 1997 ರಡಿ ರಚನೆಯಾದ "ಸಂಯುಕ್ತ ಸಹಕಾರಿ" ಎಂಬ ಕಾನೂನಡಿ ರಚನೆಯಾದ ಮಂಡಳಿ ಚುನಾವಣೆ ಬಗ್ಗೆ ನವೆಂಬರ್ 21 ಮತ್ತು ಮೇ 2023ರ ಸ್ವಾಭಿಮಾನ ಸಹಕಾರ ಪತ್ರಿಕೆಯಲ್ಲಿ ಪ್ರಕಟಿಸಿದೆ. ಈ ಎರಡೂ ಲೇಖನಗಳ ಐದು ವರ್ಷದ ಅವಧಿ ಬಗ್ಗೆ ವಿಮರ್ಷಿಸಿದೆ ಮತ್ತು ಸಂಯುಕ್ತ ಸಹಕಾರಿ ತನ್ನ 5 ವರ್ಷದ ಅವಧಿ ಮುಕ್ತಾಯವಾದ ನಂತರವೂ ಸುಮಾರು 1 1/2 ವರ್ಷಗಳ ಹೆಚ್ಚುವರಿ ಅವಧಿಯನ್ನು ಅನುಭವಿಸಿದೆ ಮತ್ತು ಆ ಅವಧಿಯಲ್ಲಿ ಮಂಡಳಿ ಸದಸ್ಯರು ತೆಗೆದುಕೊಂಡ ಆರ್ಥಿಕ ಸೌಲತ್ತುಗಳ ಸಿಂಧುತ್ವದ ಬಗ್ಗೆ ಉಚ್ಚನ್ಯಾಯಾಲಯ ಈ ಪ್ರಕರಣದಲ್ಲಿ ಕಕ್ಷಿದಾರರು ಹಾಜರಾತಿಗಿಲ್ಲ ಮತ್ತು ಈಗಾಗಲೇ ಚುನಾವಣೆ ನಡೆದಿರುವುದರಿಂದ, ರಿಟ್ ನಿರರ್ಥಕ ಎಂದು ವಜಾ ಮಾಡಿದೆ. ಆದರೆ ಮೂಲ ತತ್ವದಲ್ಲಿ 5 ವರ್ಷದ ಮಂಡಳದ ಅವಧಿ ಬಗ್ಗೆ ಶ್ರೇಷ್ಠ ನ್ಯಾಯಾಲಯದ ನೀತಿಯನ್ನು ಕರ್ನಾಟಕ ಉಚ್ಚನ್ಯಾಯಾಲಯ ಪರಿಗಣಿಸಿ ಆದೇಶಿಸಬೇಕಾಗಿತ್ತು. ಇದರ ಜೊತೆಗೆ "ಸಂಯುಕ್ತ ಸಹಕಾರಿ" ಎಂಬ ಸಂಸ್ಥೆಯನ್ನು ಕಾಯಿದೆಯಲ್ಲಿವೇ ಹುಟ್ಟಿ ಹಾಕಿದ ಒಂದು ಪ್ರಜಾ ಪ್ರಭುತ್ವದಡಿ ರಚನೆಯಾದ ಸಂಸ್ಥೆ ಮತ್ತು ಇದಕ್ಕೆ ಶಾಸನ ನಿಯಂತ್ರಿಸುವ ಅಧಿಕಾರವಿದ್ದು, ಈ ಸಂಸ್ಥೆಯೇ ರಿಟ್ ಅರ್ಜಿ ದಾಖಲಿಸಿದ ಬಗ್ಗೆ ಉಚ್ಚನ್ಯಾಯಾಲಯ ತನ್ನ ಅಭಿಪ್ರಾಯೂ, ರಿಟ್ ವಜಾ ಮಾಡುವಾಗ ಪರಿಗಣಿಸಲೇ ಇಲ್ಲ.

ಅಂದರೆ ನ್ಯಾಯಾಲಯದಲ್ಲಿ ತೀರ್ಮಾನಿಸಿ ಪಡೆದ ಆದೇಶ ಆಡಳಿತಾಧಿಕಾರಿ ನೇಮಿಸಬಾರದೆಂದು ಪಡೆದ ಆದೇಶದ ಸಿಂಧುತ್ವದ ಬಗ್ಗೆ ಉಚ್ಚನ್ಯಾಯಾಲಯ ತನ್ನ ತೀರ್ಪಿನ್ನು ಪ್ರಕಟಿಸಲೇ ಇಲ್ಲ. ಈ ಸಂಯುಕ್ತ ಸಹಕಾರಿ ಸದಸ್ಯರಾಗಿ ಸುಮಾರು 6500 ಸದಸ್ಯ ಸಹಕಾರಿಗಳಿಗೆ ಮಾದರಿಯಾಗಬೇಕಾದ ಸಂಯುಕ್ತ ಸಹಕಾರಿಯು ರಿಟ್ ಮೂಲಕ ಅನಧಿಕೃತವಾಗಿ ಅನುಭವಿಸಿದ 1 1/2 ಹೆಚ್ಚು ವರ್ಷದ ಅವಧಿಯಲ್ಲಿ ಮಾಡಿದ ಖರ್ಚು ವೆಚ್ಚಗಳು, ಪಡೆದ ಸೌಲತ್ತುಗಳ ವಸೂಲಾತಿ ಬಗ್ಗೆ ವಿಮರ್ಷೆ ಮಾಡಲೇ ಇಲ್ಲ.

**ಉಪಸಂಹಾರ :**

ಸಹಕಾರಿ ಕಾಯಿದೆಯಲ್ಲಿ ಚುನಾಯಿತ ಮಂಡಳಿ ಅವಧಿಯನ್ನು ಐದು ವರ್ಷಗಳೆಂದು ಸ್ಪಷ್ಟ ಪಡಿಸಿದೆ. ಶ್ರೇಷ್ಠ ನ್ಯಾಯಾಲಯ ನಿಗದಿ ಪಡಿಸಿದ ಅವಧಿಯೊಳಗೆ ಚುನಾವಣೆ ನಡೆಸದಿದ್ದರೆ ಆಡಳಿತಾಧಿಕಾರಿ ಅಧಿಕಾರ ವಹಿಸಿಕೊಳುಬೇಕು. ಆಯ್ಕೆಯಾದ ಅವಧಿಗಿಂತ ಒಂದು ದಿನ ಹೆಚ್ಚುವರಿಯಾಗಿ ಮುಂದುವರಿಯಲಾಗದು. ಈ ಸರ್ಕಾರದ ಆದೇಶದ ಉದ್ದೇಶ ಬಹಳಷ್ಟು ಸಹಕಾರಿ ಮುಖಂಡರು ಪ್ರತಿನಿಧಿಸುವ ಮಂಡಳಿ ಚುನಾವಣೆ ಬಾಕಿ ಇದ್ದು, ಆ ಮಂಡಳಿಗೆ ಆಡಳಿತಾಧಿಕಾರಿ ಬಂದರೆ, ಆ ಸಹಕಾರಿ ಸಂಸ್ಥೆ ಮಂಡಳಿ ಸದಸ್ಯತ್ವ ನಿಂತು ಹೊಗುತ್ತಿರುವ ಕಾರಣದಿಂದ ಇರಬಹುದು. ಅಥವಾ ಪ್ರಭಾವಿ ವ್ಯಕ್ತಿಗಳು ಹಾಲಿ ಹುದ್ದೆಯಲ್ಲಿ ಮುಂದುವರಿಯಲೂ ಪ್ರಭಾವಬೀರುತ್ತಿರಬೇಕು. ಇದು ಸಹಕಾರ ಕಾಯಿದೆ ನಿಗದಿ ಪಡಿಸಿದ ನೀತಿಗೆ ವಿರುದ್ಧ. ಆದ್ದರಿಂದ ಅವಧಿ ಮುಗಿದ ಮಂಡಳಿಗೆ ಆಡಳಿತಾಧಿಕಾರಿ ನೇಮಿಸುವುದು (ಹೆಸರಿಸುವುದು) ನಿಬಂಧಕರ ಕರ್ತವ್ಯ ಮತ್ತು ಜವಾಬ್ದಾರಿ. ಚುನಾವಣೆ ನೀತಿ ಸಂಹಿತೆ ಹೆಸರಿನಲ್ಲಿ, ಕಾಯಿದೆಯಲ್ಲಿ ನಿಗದಿ ಪಡಿಸಿದ ಜವಾಬ್ದಾರಿಗಳು ನಿರ್ವಹಿಸಲು ತಪ್ಪಿದರೆ, ಮುಂದೆ ಇಂತಹ ಪ್ರಸಂಗಳಿಗೆ ಕಲಂ.121 ನ್ನು ಉಪಯೋಗಿಸಬಾರದು. ಈ ಹಿಂದೆ ರಾಜ್ಯ ಮಟ್ಟದ ಒಬ್ಬ ಅಧ್ಯಕ್ಷನನ್ನು ಅದೇ ಸ್ಥಾನದಲ್ಲಿ ಮುಂದುವರಿಸಲು ಕಲಂ.121 ನ್ನು ಉಪಯೋಗಿಸಿ, ಕಲಂ.29ಡಿ ಅಡಿ ನಿರ್ಭಂದಗಳನ್ನು ಸರ್ಕಾರ ಒಬ್ಬ ವ್ಯಕ್ತಿಗಾಗಿ ಉಪಯೋಗಿಸಿತ್ತು. ಕಾಯಿದೆ ಸಹಕಾರಿ ಸಂಸ್ಥೆಗಳ ಉಳಿವಿಗಾಗಿ, ವ್ಯಕ್ತಿಗಳ ಉಳಿವಿಗಾಗಿ ಅಲ್ಲ ಎಂಬುದನ್ನು ಗಮನಿಸಬೇಕು.

**ವಿಶೇಷ ಸೂಚನೆ :–**

ಸರ್ಕಾರ ಈ ಮೇಲ್ಕಂಡ ಆದೇಶವನ್ನು 2 ದಿನಗಳ ನಂತರ ವಾಪಸ್ ಪಡೆದು ಮತ್ತು ಒಂದು ದಿವಸದಲ್ಲಿ ಮತ್ತೊಂದು ಆದೇಶ ಮಾಡಿ, ಮಂಡಳಿ ಅವಧಿ ಮುಗಿಯುತ್ತಿರುವ ಸಂದರ್ಭದಲ್ಲಿ, ಅದೇ ಮಂಡಳಿ ಮುಂದುವರಿಯಲು ಅವಕಾಶ ಕಲ್ಪಿಸಿದೆ. ಆದರೆ ಪದಾಧಿಕಾರಿಗಳು ಎಂಬ ಪದವನ್ನು ಕೈಬಿಟ್ಟಿದೆ.

ಶ್ರೇಷ್ಠ ನ್ಯಾಯಾಲಯದಲ್ಲಿ ನಿಗದಿ ಪಡಿಸಿದ ನೀತಿಯಂತೆ ಯಾವುದೇ ಮಂಡಳಿ ಕಾಯಿದೆಯಲ್ಲಿ ನಿಗದಿ ಪಡಿಸಿದ ಅವಧಿ ಮುಕ್ತಾಯವಾದ ದಿನಾಂಕದಂದು, ತನ್ನ ಮಂಡಳಿ ಸದಸ್ಯತ್ವವನ್ನು ತೆರವುಗೊಳಿಸಿದೆ ಎಂಬ ನೀತಿಗೆ ವಿರುದ್ಧ.

# ಅವಮಾನಗಳ ನಡುವೇಯೆ ಭಾರತದ ಮಹಾಚೇತನವಾಗಿ ಬೇಳೆದ ಭಾರತರತ್ನ ಡಾ॥ ಬಿ. ಆರ್. ಅಂಬೇಡ್ಕರ

– ಶ್ರೀ ಸೂರ್ಯಕಾಂತ ರ್‍ಯಾಕಲೆ, ಪ್ರಾಂತೀಯ ಅಧಿಕಾರಿ, ಕರಾಸೌಸಂಸನಿ., ಕಲಬುರಗಿ.



ಸ್ವಾತಂತ್ರ ಪೂರ್ವದ ಪ್ರತಿಷ್ಠಿತ ಸಂಸ್ಥಾನಗಳಲ್ಲಿ ಒಂದಾದ ಬರೊಡ ಸಂಸ್ಥಾನವು ಆಗತಾನೆ ವಿದೇಶದಲ್ಲಿ ಉನ್ನತ ವಿದ್ಯಾಭ್ಯಾಸ ಮಾಡಿ ಆಗಮಿಸಿದ 35 ಹರಯದ ಯುವಕನಿಗೆ ಸಂಸ್ಥಾನದ ರಾಜಕೀಯ ಕಾರ್ಯದರ್ಶಿ ನೇಮಕಮಾಡಿದರಿಂದ ಬರೋಡ ಸಂಸ್ಥಾನದಲ್ಲಿ ಕರ್ತವ್ಯಕ್ಕೆ ಹಾಜರಾಗಿ ತಾನು ವಾಸಿಸಲು ಬಾಡಿಗೆ ಮನೆಗಾಗಿ ಬರೋಡದ ಪಟ್ಟಣದಲ್ಲಿ ಅಲೆದಾಡಿದರು ಮನೆಗಳು ಖಾಲಿ ಇದ್ದರು ಸಹ ಸಂಸ್ಥಾನದ ಉನ್ನತ ಹುದ್ದೆಯಲ್ಲಿ ಇದ್ದ ಯುವಕನಿಗೆ ಕೆಳಜಾತಿಯವನು ಎಂಬ ಕಾರಣಕ್ಕೆ ಒಂದು ಮನೆ ಬಾಡಿಗೆಗೆ ಸಿಗಲಿಲ್ಲ ಇಂಹಹ ಅವಮಾನಗಳನ್ನು ಸಹಿಸಿ ಬೆಳೆದ ಮಹಾಚೇತನ ಡಾ॥ ಬಿ. ಆರ್. ಅಂಬೇಡ್ಕರ್

## ಜೀವನ ಚರಿತ್ರೆ

ಡಾ ಬಿ. ಆರ್ ಅಂಬೇಡ್ಕರ್ ರವರು 14ನೇ ಏಪ್ರಿಲ್, 1891 ರಂದು ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯ ಅಂಬೆವಾಡ ಗ್ರಾಮದ ಮಹಾರ ಜಾತಿಯ ಸುಬೇದಾರರಾಗಿದ್ದ ರಾಮಜಿ ಮತ್ತು ಭೀಮಬಾಯಿ ದಂಪತಿಗಳ 14ನೇ ಮಗನಾಗಿ ಭೀಮರಾವ ಜನನ. ರಾಮಜಿ ಸಕ್ಪಾಲ್ ಮತ್ತು ಭಿಮಬಾಯಿ ದಂಪತಿಗಳ 14 ಮಕ್ಕಳಲ್ಲಿ ಬದುಕುಳಿದ್ದಿದ್ದು 5 ಜನ ಮಕ್ಕಳು, ಮಂಜುಳಾ, ತುಳಸಿ, ಬಲರಾಮ, ಆನಂದರಾವ್ ಮತ್ತು ಭೀಮರಾವ್. ಭೀಮರಾವ್ 2 ರ್ಷದ ಬಾಲಕನಿದ್ದಾಗ ತಂದೆ ನೌಕರಿಯಿಂದ ನಿವೃತ್ತಿ ಹೊಂದಿದರು. ಇವರು 14 ವರ್ಷಗಳವರೆಗೆ ಮಿಲಿಟರಿ ಶಾಲೆಯಲ್ಲಿ ಮುಖ್ಯೋಪಾಧ್ಯಯರಾಗಿ ಸೇವೆ ಸಲ್ಲಿಸಿದ್ದರು. ಇವರು ಮರಾಠಿ, ಹಿಂದಿ ಭಾಷೆಯಲ್ಲಿ ಪ್ರಬುದ್ಧ ಜ್ಞಾನ ಹೊಂದಿದ್ದರು. ಜೊತೆಗೆ ಆಂಗ್ಲ ಭಾಷೆಯನ್ನು ಬಲ್ಲವರಾಗಿದ್ದರು. ಮಕ್ಕಳಲ್ಲಿ ದೇಶಭಕ್ತಿ, ಜ್ಞಾನ, ಹಾಗೂ ಧರ್ಮದ ಬಗ್ಗೆ ತಿಳಿಹೇಳಿಕೊಡುವಲ್ಲಿ ಸಫಲರಾದರು. ಮುಂದೆ ಭೀಮರಾವ್‌ರವರು ಉತ್ತಮ ಸಂಸ್ಕೃತಿ ಹೊಂದಲು ತಂದೆಯವರು ಹೇಳಿಕೊಟ್ಟ ನೀತಿ ಪಾಠ ಸಹಾಯಕವಾಯಿತು. ಇವರು ಕಬೀರ ಪಂಥದವರು, ಕಬೀರರ ಧೋಹೆಗಳು, ರಾಮಾಯಣ, ಮಹಾಭಾರತದ ಕತೆಗಳನ್ನು ಮಕ್ಕಳಿಗೆ ಮುಂಜಾನೆ ಮತ್ತು ಸಾಯಂಕಾಲ ಹೇಳಿಕೊಡುತ್ತಿದ್ದರು. ಭೀಮರಾವ್ ಪ್ರಾಥಮಿಕ ಶಿಕ್ಷಣ ಸಾತಾರದಲ್ಲಿ ಪ್ರಾರಂಭವಾಯಿತು. ಭೀಮರಾವ್ ಆರು ವರ್ಷದ ಬಾಲಕನಿದ್ದಾಗ ಅವರ ತಾಯಿ ಮರಣ ಹೊಂದುತ್ತಾರೆ. ಭೀಮರಾವ್‌ರವರಿಗೆ ಪ್ರಾಥಮಿಕ ಶಾಲೆಯಲ್ಲಿಯೇ ಅಸ್ಪೃಶ್ಯತೆಯ ಅನುಭವವಾಗುತ್ತದೆ. ಶಿಕ್ಷಕರು ಮತ್ತು ಸಹಪಾಠಿಗಳು ಇವರು ದಲಿತ ಜಾತಿಗೆ ಸೇರಿದವರೆಂಬ ಕಾರಣಕ್ಕಾಗಿ ಸೇರುತ್ತಿರಲ್ಲಿಲ್ಲ. ಅದಕ್ಕಾಗಿ ತರಗತಿಯ ಹೊರಗಡೆ ಕುಳಿತುಕೊಂಡು ಕಲಿಯಬೇಕಾಯಿತು. ಪ್ರಾಥಮಿಕ ಶಾಲೆಯಲ್ಲಿ ಎಲ್ಲರ ಅಸಹ್ಯದಿಂದಾಗಿ ಶಿಕ್ಷಣದಲ್ಲಿ ಅವರಿಗೆ ಹೆಚ್ಚು ಒಲವೇ ಇರಲಿಲ್ಲ. ಧ್ಯಾನ ಮಾಡುವುದು, ಮೇಕೆಯೊಡನೆ ಆಟವಾಡುವುದು ಅವರ ಹವ್ಯಾಸಗಳಾಗಿದ್ದವು. ತನ್ನ ರೊಟ್ಟಿ ತಾನೆ ಸಂಪಾದಿಸಿಕೊಳ್ಳಬೇಕೆಂದು ದುಡಿಯಲಕ್ಕೆ ಬಾಂಬೆಗೆ ಹೊಗಬೇಕೆಂದು ನಿರ್ಧರಿಸಿ ತನ್ನ ಬಳಿ ಇದ್ದ ಮೂರು ಆಣೆಯಿಂದ ಬಾಂಬೆಗೆ ಹೊಗಲು ಸರಿಹೊಗುವುದಿಲ್ಲ ಎಂದು ಬೇಸರ ಪಟ್ಟು ತನ್ನ ನಿರ್ಧಾರ ಬದಲಿಸಿ ಹೆಚ್ಚಿಗೆ ಓದಬೇಕೆಂದು ನಿರ್ಧರಿಸಿ ಓದುವ ಆಸೆ ಹೆಚ್ಚಿಸಿಕೊಳ್ಳುತ್ತಾರೆ.

ಸತಾರ ಸರಕಾರಿ ಶಾಲೆಯಲ್ಲಿ ಪ್ರಾಥಮಿಕ ತರಗತಿಯಲ್ಲಿ ಓದುತ್ತಿರುವಾಗ ಮಹಾರ ಎಂಬ ಅಸ್ಪೃಶ್ಯರದವರೆಂಬ ಕಾರಣಕ್ಕಾಗಿ ಹೆಚ್ಚು ಕಡಿಮೆ ಎಲ್ಲಾ ಶಿಕ್ಷಕರು ಇವರನ್ನು ಅಸಹ್ಯವಾಗಿ ನೋಡುತ್ತಿದ್ದರು. ಯಾರೂ ಇವರ ಪ್ರತಿಭೆ ಗುರುತಿಸಲಿಲ್ಲ. ಆದರೆ ಅಲ್ಲಿನ ಶಿಕ್ಷಕರಲ್ಲಿ ಒಬ್ಬರಾದ ಅಂಬೇಡ್ಕರ್ ಎಂಬ ಶಿಕ್ಷಕರು ಈ ಬಾಲಕನ ಪ್ರತಿಭೆ, ಕಲಿಯುವ ಹಂಬಲ, ಸೂಕ್ಷ್ಮಬುದ್ಧಿಶಕ್ತಿಯನ್ನು ಗುರುತಿಸಿ ಇವರಿಗೆ ಪ್ರೋತ್ಸಾಹಿಸಿದರು. ಜಾತಿಯಲ್ಲಿ ಆ ಶಿಕ್ಷಕರು ಬ್ರಾಹ್ಮಣರಾಗಿದ್ದರೂ ಕೂಡ ತಾವು ಊಟಕ್ಕೆ ತಂದಿದ್ದ ಬುತ್ತಿಯಲ್ಲಿ ಭೀಮರವರಿಗೆ ಒಂದಿಷ್ಟು ಕೊಟ್ಟು ಪ್ರೀತಿಯಿಂದ ಊಟ ಮಾಡಿಸುತ್ತಿದ್ದರು. ಇದೇ ಅಂಬೇಡ್ಕರ್ ಭೀಮರಾವರವರ ಹೆಸರನ್ನು ತಮ್ಮ ಅಡ್ಡ ಹೆಸರಾದ ಅಂಬೇಡ್ಕರ್ ಎಂಬ ಹೆಸರನ್ನು ಅವರ ಅಡ್ಡ ಹೆಸರಿಗೆ ಬದಲಿಸಿ ಕೊಟ್ಟರು ಅಂದರೆ ಹಾಜರಿಯಲ್ಲಿ ಅವರ ಹೆಸರು ಭೀಮರಾವ್ ರಾಮಜಿ ಅಂಬೆವಾಡ್ಕರ್ ಎಂದು ಇದ್ದು, ಶಿಕ್ಷಕರು ಅದನ್ನು ಭೀಮರಾವ್ ರಾಮಜಿ ಅಂಬೇಡ್ಕರ್ ಎಂದು ತಿದ್ದಿದರು ಅಂದಿನಿಂದ ಭೀಮರಾವ್ ಅಂಬೇಡ್ಕರ್ ಆದರು. ಪ್ರಾಥಮಿಕ ಶಿಕ್ಷಣ ಹಲವಾರು ನೋವು ಮತ್ತು ಅವಮಾನಗಳಿಂದ ಸಾತಾರದಲ್ಲಿ ಮುಗಿಸಿ, ಮಾಧ್ಯಮಿಕ ಶಿಕ್ಷಣಕ್ಕಾಗಿ ಬಾಂಬೆಯ ಸರಕಾರಿ

ಪ್ರೌಢ ಶಾಲೆಯಾದ ಎಲಿಫಿನ್ ಸ್ಟನ್ ಹೈಸ್ಕೂಲಿಗೆ ಸೇರಲು ನಿರ್ಧರಿಸುತ್ತಾರೆ. ಸಾತರದಂತೆ, ಇವರಿಗೆ ಹೆಚ್ಚು ಶೋಷಣೆ ಅನ್ಯಾಯ ಚುಚ್ಚು ಮಾತು ಅಪರ್ಯಾದೆ ಇರಕ್ಕಿಲ್ಲ ಎಂಬ ಭಾವನೆಯೊಂದಿಗೆ ಬಾಂಬೆಗೆ ಹೋಗಿ ಕಾರ್ಮಿಕರ ಬಡಾವಣೆ ಪರೇಲ ಎಂಬಲ್ಲಿ ಒಂದು ಕೋಣೆಯನ್ನು ಬಾಡಿಗೆಗೆ ಹಿಡಿದು ಶಾಲೆಗೆ ಸೇರಿಸುತ್ತಾರೆ. ಆದರು ಇಲ್ಲಿ ಸಹ ಅವಮಾನಗಳು ಜರುಗಿದವು. ಶಾಲೆಯಲ್ಲಿ ಜರುಗಿದ ಕಹಿ ಅನುಭವಗಳ ಮಧ್ಯಯೇ ಡಾ. ಅಂಬೇಡ್ಕರ್ 1907ರಲ್ಲಿ 10ನೆ ತರಗತಿಯಲ್ಲಿ ಪಾಸಾಗುತ್ತಾರೆ.

ಅಂಬೇಡ್ಕರ್ ಅವರು 10 ನೇ ತರಗತಿ ಪಾಸಾದ ನಂತರ ಇವರ ಮನೆಯವರು ರಮಾಬಾಯಿಯವರೊಂದಿಗೆ ಮದುವೆ ಮಾಡುತ್ತಾರೆ. ಆಗ ಅವರಿಗೆ 17 ವರ್ಷ ರಮಾಬಾಯಿಯವರಿಗೆ 9 ವರ್ಷ ವಯಸ್ಸಾಗಿತ್ತು. ಮುಂದಿನ ಅಭ್ಯಾಸಕ್ಕಾಗಿ ಎಲಿಫಿನ್ ಸ್ಟನ್ ಸೇರಿದ ಅಂಬೇಡ್ಕರ್ 1912 ರಲ್ಲಿ ಎಲಿಫಿನಸ್ಟನ್ ಕಾಲೇಜಿನಿಂದ ಬಿಎ ಮುಗಿಸುತ್ತಾರೆ. ಉಪನ್ಯಾಸಕರಾದ ಕೆ.ಎ ಕೆಲಸ್ಕರ ಪಿಯುಸಿ ಮತ್ತು ಬಿ ಎ ವ್ಯಾಸಂಗಕ್ಕಾಗಿ ಬರೊಡದ ಮಹಾರಾಜರಿಂದ ತಿಂಗಳಿಗೆ 25 ರೂಪಾಯಿಗಳ ಶಿಕ್ಷಣ ವೇತನವನ್ನು ಕೊಡಿಸುತ್ತಾರೆ. ಬರೋಡದ ಮಹಾರಾಜರು ನೀಡಿದ ಶಿಷ್ಯವೇತನ ಪಡೆದು ಅಮೆರಿಕಾದ ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಓದಲು 1913ಕ್ಕೆ ಹೋಗುತ್ತಾರೆ. ಅಲ್ಲಿ ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಅತಿಹಾಸ, ತತ್ವಜ್ಞಾನ, ತರ್ಕಶಾಸ್ತ್ರ, ರಾಜ್ಯಶಾಸ್ತ್ರದಲ್ಲಿ ಅಧ್ಯಯನ ಮಾಡುತ್ತಾರೆ. 1915ರಲ್ಲಿ ಪ್ರಾಚೀನ ಭಾರತದ ವಾಣಿಜ್ಯ ಪ್ರಬಂದ ಮಂಡಿಸಿ ಎಂ ಎ ಪದವಿ ಪಡೆದರು. ಅದೇ ರ್ಷ ಅಂತಾರಾಷ್ಟ್ರೀಯ ಸಮಾಜ ಶಾಸ್ತ್ರೀಯ ವಿಚಾರ ಸಂಕಿರಣದಲ್ಲಿ ಭಾರತೀಯ ಜಾತಿಗಳು ಎಂಬ ಪ್ರಬಂಧ ಮಂಡಿಸುತ್ತಾರೆ. ಅಮೆರಿಕಾದಲ್ಲಿ ಎಂ ಎ ,ಪಿಎಚ್ ಡಿ,ಪಡೆದ ನಂತರ ಉನ್ನತ ವ್ಯಾಸಂಗ ಇಂಗ್ಲೆಂಡಿನಲ್ಲಿ ಮುಂದುವರೆಸಲು ಅಂಬೇಡ್ಕರರು ಅಮೆರಿಕಾದಿಂದ ಇಂಗ್ಲೆಂಡಿಗೆ ಹೋಗುತ್ತಾರೆ. ಅಲ್ಲಿ ಲಂಡನ್ನಿನ ರ್ಥಶಾಸ್ತ್ರ ರಾಜಕೀಯಶಸ್ತ್ರ ವಿಶ್ವವಿದ್ಯಾಲಯದಲ್ಲಿ ಡಿಎಸ್‌ಸಿ ಪದವಿಗಾಗಿ ನೋಂದಾಯಿಸಿಕೊಳ್ಳುತ್ತಾರೆ, ಅಲ್ಲದೆ ಗ್ರೇಸ್ ಇನ್ ಕಾಲೇಜಿನಲ್ಲಿ ಕಾನೂನು ಪದವಿಗೆ ಹೆಚ್ಚುವರಿಯಾಗಿ ಸೇರುತ್ತಾರೆ.

### ವೃತಿ ಜೀವನ

ಬರೊಡದ ಮಹಾರಾಜರ ಆಸ್ಥಾನದಲ್ಲಿ ಸೈನ್ಯದ ಕಾರ್ಯದರ್ಶಿಗಳಾಗಿ ಕೆಲಸಕ್ಕೆ ಸೇರಿದರು. ಮಹಾರಾಜರಿಗೆ ತಿಳಿಯದಂತೆ ಅಲ್ಲಿಯೇ ಆಸ್ಥಾನಿಕ ಹಿರಿಯ ಮಂತ್ರಿಗಳು ಇವರೊಂದಿಗೆ ಅಸ್ಪೃಶ್ಯ ಆಚರಣೆ ಮಾಡುತ್ತಿದ್ದರು.ಸಾಮಾನ್ಯ ಸಿಪಾಯಿ ಕೂಡ ಇವರ ಫೈಲುಗಳನ್ನು ಮುಟ್ಟಿಸಿಕೊಳ್ಳುತ್ತಿರಲಿಲ್ಲ, ಉಳಿಯಲು ಆಸ್ಥಾನದಲ್ಲಿ ನಿವೇಶನ ನೀಡಲಿಲ್ಲ ಮತ್ತು ಉಳಿದಿದ್ದ ಪರ್ಸಿ ಹೊಟೇಲ್ ನಿಂದ ಇವರನ್ನು ದಬ್ಬಿ ಹೊರಹಾಕಿದರು. ಅನಿವರ್ಯವಾಗಿ ಅಲ್ಲಿ ಕೆಲಸ ಮಾಡಲಾಗದೆ ಬಾಂಬೆಗೆ ಬಂದರು. ಬಂದು ಕೆಲವು ದಿನಗಳಲ್ಲಿ ಅವರ ಮಲತಾಯಿ ಮರಣಹೊಂದುತ್ತಾರೆ. ಅಂಬೇಡ್ಕರರು ಸಿಡ್ಯಾಮ್ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇವೆಗೆ ಸೇರುತ್ತಾರೆ. ಈ ಸರಕಾರಿ ಕಾಲೇಜಿನಲ್ಲಿಯೂ ಕೂಡ ಇವರ ಜೊತೆಗೆ ಅಸ್ಪೃಶ್ಯರ ಆಚರಣೆ ಮಾಡುತಿದ್ದರು. ಇಂತಹ ವ್ಯವಸ್ಥೆಯಲ್ಲಿ ಅಂಬೇಡ್ಕರ್ ರವರು ಕಾಲೇಜಿನಲ್ಲಿ ಉಪನ್ಯಾಸ ಮಾಡಿ ಕೂಡಿಟ್ಟ ಸ್ವಲ್ಪ ಹಣ, ಸಾಹು ಮಹಾರಾಜರಿಂದ ಶಿಷ್ಯವೇತನ ಹಾಗೂ ಆತ್ಮೀಯ ಪರ್ಸಿ ಗೆಳೆಯನಿಂದ ಸ್ವಲ್ಪ ಹಣ ಸಾಲ ಪಡೆದು ಅಂಬೇಡ್ಕರರವರು ಉನ್ನತ ವ್ಯಾಸಂಗಕ್ಕೆ ಲಂಡನ್ನಿಗೆ ಹೋದರು. ಅಲ್ಲಿ 1920ರಲ್ಲಿ ಲಂಡನ್ ಸ್ಕೂಲ್ ಆಫ್ ಏಕನಿಮಿಕ್ಸ್ ಅಂಡ್ ಪೊಲಿಟಿಕಲ್ ಸೈನ್ಸ್ ವಿಶ್ವವಿದ್ಯಾಲಯದಲ್ಲಿ ಎಂ ಎಸ್ ಸಿ ಪದವಿಗಾಗಿ ನೊಂದಾಯಿಸಿಕೊಂಡು ಹಗಲು ರಾತ್ರಿ ಅಧ್ಯಯನ ಮಾಡುತ್ತಾರೆ.

ಇವರು ಇದೇ ರೀತಿ ವಿದ್ಯಾರ್ಜನೆ ಮಾಡಿ 1921ರಲ್ಲಿ ಡಿ.ಎಸ್ ಸಿ ಪದವಿಗಾಗಿ ನೊಂದಾಯಿಸಿಕೊಂಡು 1922 ರಲ್ಲಿ ಹಣದ ಸಮಸ್ಯೆ ಎಂಬ ಪ್ರಬಂಧ ಮಂಡಿಸಿ ಡಿ ಎಸ್ ಸಿ ಪದವಿ ಪಡೆಯುತ್ತಾರೆ . ಅದೇ ರ್ಷ ಗ್ರೇಸ್ ಇನ್ ಕಾಲೇಜಿನಿಂದ ಎಲ್ ಎಲ್ ಡಿ ಪಡೆಯುತ್ತಾರೆ. 1923 ರಲ್ಲಿ ರ್ಮನಿಯ ಬಾನ್ ವಿಶ್ವವಿದ್ಯಾಲಯದಲ್ಲಿ ರ್ಥಶಾಸ್ತ್ರದಲ್ಲಿ ಉನ್ನತ ಪದವಿಗಾಗಿ ನೊಂದಾಯಿಸಿಕೊಂಡು 6 ತಿಂಗಳವರೆಗೆ ಅಭ್ಯಾಸ ಮಾಡುತ್ತಾರೆ. ಆರ್ಥಿಕ ಕಡುಬಡತನದಿಂದ ವ್ಯಾಸಂಗವನ್ನು ಮಧ್ಯದಲ್ಲಿಯೇ ನಿಲ್ಲಿಸಿ ಭಾರತಕ್ಕೆ ಬಂದು ವಕೀಲ ವೃತ್ತಿಯನ್ನು ಪ್ರಾರಂಭಿಸುತ್ತಾರೆ. ಕೆಲವು ದಿನಗಳ ಕಾಲ ಟ್ಯಾಕ್ಸ್ ಪ್ರ್ಯಾಕ್ಟಿಶನರ್ ಆಗಿಯೂ ಕೆಲಸ ಮಾಡುತ್ತಾರೆ. ಸಾಮಾಜಿಕ ಸೇವೆಯಲ್ಲಿ ಕಾಲಜಿಯುಳ್ಳ ಇವರು ಸಾಮಾಜಿಕ ಸೇವೆಗಾಗಿ ತಮ್ಮ ಬದುಕನ್ನು ಗುರುತಿಸಿಕೊಳ್ಳುತ್ತಾರೆ.

### ಸಾಮಾಜಿಕ ಕಾರ್ಯ

ದಲಿತ ವರ್ಗದವರನ್ನು ಜಾಗೃತರನ್ನಾಗಿ ಮಾಡಲು ಅವರಲ್ಲಿ ಶಿಕ್ಷಣದ ಪ್ರಸಾರ ಮಾಡಲು ಸಂಸ್ಕೃತಿಯ ಬಗ್ಗೆ ತಿಳಿಸಲು ಥಿಕ ಸೌರ್ಯ ಮಾಡಲು ಹಾಗೂ ಅವರ ಸಮಸ್ಯೆಗಳಿಗೆ ಸ್ಪಂದಿಸುವುದು ಇವರ ಉದ್ದೇಶವಾಗಿತ್ತು. ಅದೇ ರೀತಿ ಬಹಿಷ್ಕೃತ ಭಾರತ ಎಂಬ ಪತ್ರಿಕೆಯನ್ನು ಪ್ರಾರಂಭಿಸುತ್ತಾರೆ. ಸಾಮಾಜಿಕ ಹೋರಾಟದ ಜೀವನ ಪ್ರಾರಂಭಿಸಿದ ಇವರು 1927ರಲ್ಲಿ ಮಹಾಡದ ಚೌಡರ ಕೆರೆಯ ನೀರನ್ನು ಮುಟ್ಟುವ ಚಳುವಳಿಯನ್ನು ಹಮ್ಮಿಕೊಳ್ಳುತ್ತಾರೆ. ತನ್ನ 10 ಸಾವಿರ ಅನುಯಾಯಿಗಳೊಂದಿಗೆ ಚೌಡರ ಕೆರೆಯ ನೀರನ್ನು ಮುಟ್ಟಿಸಿ ಬಹುದಿನಗಳಿಂದ ನಿಷೇಧಿಸಿದ ಈ ಕೆರೆಯಿಂದ

ನೀರು ಕುಡಿಯುವ ಹಕ್ಕು ಒತ್ತಾಯಿಸಿದರು. 1927 ರಲ್ಲಿ ಶ್ರೇಣಿ ಪದ್ಧತಿಯ ರ್ಣಾಶ್ರಮ ಹಾಗೂ ಸ್ತ್ರಿದಮನ ಮಸ್ಥಿದ ಮನಸ್ಮೃತಿಯನ್ನು ಸುತ್ತು ಹಾಕುತ್ತಾರೆ. 1930 ತನ್ನ 15 ಸಾವಿರ ಅನುಯಾಯಿಗಳೊಂದಿಗೆ ನಾಸಿಕದ ಕಾಳರಾಂ ದೇವಾಲಯದ ಪ್ರವೇಶ ಚಳುವಳಿಯನ್ನು ಮಾಡುತ್ತಾರೆ.

1927ರಲ್ಲಿ ಇವರಿಗೆ ಮುಂಬಯಿಯ ಶಾಸಕಾಂಗದ ಸದಸ್ಯರಾಗಿ ಬ್ರಿಟಿಷ್ ಸರ್ಕಾರ ನೇಮಿಸುತ್ತದೆ. 1930 ರಿಂದ 1932 ವರೆಗೆ ಲಂಡನ್ನಿನಲ್ಲಿ ನಡೆಯುವ ದುಂಡು ಮೇಜಿನ ಸಮ್ಮೇಳನದಲ್ಲಿ ದಲಿತರ ಪ್ರತಿನಿಧಿಯಾಗಿ ಭಾಗವಹಿಸಿ ದಲಿತರಿಗೆ ಪ್ರತ್ಯೇಕ ಮತದಾನದ ಸೌಲಭ್ಯ ಕಲ್ಪಿಸಿಕೊಟ್ಟು ಬಹುದಿನಗಳಿಂದ ಆಳ್ವಿಕೆ ಮಾಫಿಯಾ ಅಧಿಕಾರದಿಂದ ದೂರವಿದ್ದ ದಲಿತರಿಗೆ ಆಳ್ವಿಕೆ ಮಾಡುವ ಅಧಿಕಾರವನ್ನು ದೊರಕಿಸಿಕೊಡುತ್ತಾರೆ. ಇಂಗ್ಲೆಂಡಿನ ಪ್ರಧಾನಿಯಾದ ಮ್ಯಾಕ್ ಡೊನಾಲ್ಡ್ ಕೋಮುಆದೇಶದ ಮೂಲಕ ಈ ಅಧಿಕಾರವನ್ನು ದಲಿತರಿಗೆ ನೀಡುತ್ತಾರೆ. ಆದ್ರೆ ಗಾಂಧೀಜಿ ದಲಿತರಿಗೆ ಪ್ರತ್ಯೇಕ ಮತದಾನ ಬೇಡ ಹಿಂದೂ ಧರ್ಮ ಒಡೆದು ಹೋಗುತ್ತದೆಂದು ಪುಣೆಯ ಯರವಾಡ ಜೈಲಿನಲ್ಲಿ ಅಮರಣಾಂತರ ಉಪವಾಸ ಸತ್ಯಾಗ್ರಹ ಮಾಡುತ್ತಾರೆ. ಅಂತಿಮವಾಗಿ ಗಾಂದೀಜಿ ಮತ್ತು ಅಂಬೇಡ್ಕರ್ ರವರ ನಡುವೆ ಸಂಧಾನ ನಡೆಸಿ ಪ್ರತ್ಯೇಕ ಮತ ಕ್ಷೇತ್ರದ 71 ಸೀಟುಗಳ ಬದಲ್ಲಾಗಿ 148 ಸೀಟು ಗಳ ಜಂಟಿ ಮತದಾನ ಪದ್ದತಿ ನೀಡಿ ದಲಿತರಿಗೆ ಮೀಸಲಾತಿ ನೀಡಲಾಯಿತು. ಇದು ಸೆಪ್ಟೆಂಬರ್ 24 1932 ರಲ್ಲಿ ನಡೆದಿದ್ದು ಇದನ್ನು ಪುನಾ ಒಪ್ಪಂದ ಎಂದು ಕರೆಯಲಾಯಿತು.

ಅಸ್ಪೃಶ್ಯರಿಗೆ ಅಧಿಕಾರ ಒದಗಿಸಬೇಕು ಎನ್ನುವ ಹಿನ್ನಲೆಯಲ್ಲಿ 1936ರಲ್ಲಿ ಇಂಡಿಪೆಂಡೆಂಟ್ ಲೇಬರ್ ಪಾರ್ಟಿ ಸ್ಥಾಪಿಸಿ, ಪ್ರಾಂತೀಯ ಶಾಸಕಾಂಗದಲ್ಲಿ ನಡೆದ ಚುನಾವಣೆಯಲ್ಲಿ 17 ಸ್ಥಾನಗಳಿಗೆ ಅಭ್ಯರ್ಥಿಗಳನ್ನು ಹಾಕುತ್ತಾರೆ. ಅದರಲ್ಲಿ 15 ಅಭ್ಯರ್ಥಿಗಳು ಗೆಲ್ಲುತ್ತಾರೆ. ದಲಿತರಿಗೆ ಶಿಕ್ಷಣದ ಅವಶ್ಯಕತೆಯನ್ನು ಗಮನಿಸಿ 1946ರಲ್ಲಿ ಪೀಪಲ್ಸ್ ಎಜುಕೇಶನ್ ಇನ್ಸ್ಟಿಟ್ಯೂಶನ್ ಸ್ಥಾಪಿಸಿದರು. 1946ರಲ್ಲಿ ಸಂವಿಧಾನ ರಚನಾ ಸಭೆಗೆ ಬಂಗಾಳ ಪ್ರಾಂತದಿಂದ ಆಯ್ಕೆಯಾಗಿ ಮುಂದೆ 1947ರಲ್ಲಿ ಕರಡು ಸಮಿತಿ ಅಧ್ಯಕ್ಷರಾಗಿ ನೇಮಕ ಹೊಂದಿ, ಸತತವಾಗಿ ಮೂರು ರ್ಷಗಳವರೆಗೆ ಹಗಲು ರಾತ್ರಿ ಸಂವಿಧಾನ ಬರೆದು 1950ರಲ್ಲಿ ಮುಗಿಸುತ್ತಾರೆ. ಅದಕ್ಕಾಗಿ ಇವರನ್ನು ಸಂವಿಧಾನದ ಶಿಲ್ಪಿ ಎಂದು ಪರಿಗಣಿಸಲಾಗಿದೆ.

1947 ರಲ್ಲಿ ಕಾನೂನು ಮಂತ್ರಿಯಾಗಿ ಪಂಡಿತ ಜವಹಾರಲಾಲ್ ನೆಹರೂ ಮಂತ್ರಿ ಮಂಡಲದಲ್ಲಿ ಇವರು ಪ್ರಧಾನ್ ಮಂತ್ರಿಗೆ ಆತ್ಮೀಯರಾಗುತ್ತಾರೆ. ನೆಹರೂ ಕಲ್ಪಿಸಿದ ಸಮಾಜವಾದಿ ಪ್ರಜಾಸತ್ತಾತ್ಮಕ ರಾಜ್ಯವ್ಯವಸ್ಥೆ ಡಾ ಅಂಬೇಡ್ಕರ್ ರವರಿಂದಲೇ ಪ್ರಭಾವಿತರಾಗಿದ್ದರು. ನೆಹರುಜಿ ಹಾಕಿಕೊಂಡ ಪಂಚ ವಾರ್ಷಿಕ ಯೋಜನೆಗೆ ಅಂಬೇಡ್ಕರರವರು ಮಾರ್ಗದರ್ಶಿಗಳಾಗಿದ್ದರು. ಮತ್ತು ಭಾಕ್ರಾನಂಗಲ್ ಅಣೆಕಟ್ಟು ಕಟ್ಟಲು ಸಲಹೆ ನೀಡಿದವರೆ ಅಂಬೇಡ್ಕರರವರು.

1953ರಲ್ಲಿ ಆಂಧ್ರಪ್ರದೇಹದ ಉಸ್ಮಾನಿಯ ವಿಶ್ವವಿದ್ಯಾಲಯ ಸಂವಿಧಾನದ ಸೇವೆಯನ್ನು ಪರಿಗಣಿಸಿ ಡಾಕ್ಟರ್ ಆಫ್ ಲಿಟರೇಚರ ಎಂಬ ಗೌರವ ಪದವಿಯನ್ನು ನೀಡಿತು. 1951ರಿಂದ ರಾಜ್ಯಸಭಾ ಸದಸ್ಯರಾಗಿ ಆಯ್ಕೆಯಾದರು ಸಕ್ರಿಯ ರಾಜಕೀಯದಿಂದ ದೂರ ಉಳಿದು ಡಾ ಅಂಬೇಡ್ಕರ್ ರವರು ಬೌದ್ಧ ರ್ಮದ ಆಚಾರ ಮತ್ತು ಪ್ರಚಾರಕ್ಕಾಗಿ ಜೀವನವನ್ನು ಅರ್ಪಿಸಿಕೊಂಡರು.

1951 ರಲ್ಲಿ ಜಾಗತಿಕ ಬೌದ್ಧ ಸಮ್ಮೇಳನ ನಡೆಯಿತು, ಅದರಲ್ಲಿ ಭಾಗವಹಿಸಿದರು. 1954ರಲ್ಲಿ ಕಟ್ಮೊಂಡಾದಲ್ಲಿ ನಡೆದ ಜಾಗತಿಕ ಬೌದ್ಧ ಸಮ್ಮೇಳನದಲ್ಲಿ ಭಾಗವಹಿಸಿದರು. 1951ರಲ್ಲಿ ಭಾರತೀಯ ಬೌದ್ಧ ಸಂಘಟನೆಯಲ್ಲಿ ಬುದ್ಧ ಮತ್ತು ಮಾರ್ಕ್ಸ್ ಕುರಿತು ಪ್ರಬಂಧ ಮಂಡಿಸಿದರು. 1955ರಲ್ಲಿ ಭಾರತೀಯ ಬೌದ್ಧ ಮಹಾಸಭೆ ಸ್ಥಾಪಿಸಿದರು. ಬದುಕಿನ ಕೊನೆಯ ದಿನಗಳಲ್ಲಿ ಡಾ ಅಂಬೇಡ್ಕರ್ ಬೌದ್ಧ ಧರ್ಮ ಸ್ವೀಕಾರದ ಕುರಿತು ನಿರ್ಧಾರಮಾಡಿ ಅಕ್ಟೋಬರ್ 14 1956ರಲ್ಲಿ ತನ್ನ 5 ಲಕ್ಷ ಅನುಯಾಯಿಗಳೊಂದಿಗೆ ಪತ್ನಿ ಸವಿತಾ ಅಂಬೇಡ್ಕರ್ ಜೊತೆಗೆ ನಾಗಪುರದಲ್ಲಿ ಬೌದ್ಧ ಧರ್ಮ ಸ್ವೀಕಾರಮಾಡಿದರು.

**ಪ್ರಮುಖ ಕೃತಿಗಳು**

1. ಭಾರತದಲ್ಲಿ ಜಾತಿ ಪದ್ಧತಿ
2. ಕಾರ್ಮಿಕ ವರ್ಗದ ಸಂವಿಧಾನಾತ್ಮಕ ನಿಯಮ
3. ಕಾರ್ಮಿಕರು ಮತ್ತು ಸಂಸದೀಯ ಪ್ರಜಾಪ್ರಭುತ್ವ
5. ಸಂಸದೀಯ ಪ್ರಜಾಪ್ರಭುತ್ವದ ಭವಿಷ್ಯ
6. ಪ್ರಜಾಪ್ರಭುತ್ವದ ಯಶಸ್ವಿ ಅಂಶಗಳು
7. ನನ್ನ ವೈಯಕ್ತಿಕ ತತ್ವಜ್ಞಾನ
8. ಬುದ್ಧಿಸಂ ಅಂಡ್ ಕಮ್ಯುನಿಸಂ.

ಬಾಲ್ಯದಿಂದ ಉನ್ನತ ಹುದ್ದೆಗೆ ಎರಿದಾಗೂ ಪ್ರತಿಹಂತದಲ್ಲು ಅವಮಾನವನ್ನು ಸಹಿಸಿ ಅಸ್ಪ್ರಶ್ಯರ ಏಳಿಗೆಗಾಗಿ ಜೀವನ ಪರ್ಯಾಂತ ಹಗಲಿ ಇರುಳು ಎನ್ನದೆ ಸೇವೆ ಸಲ್ಲಿಸಿ ಶೀಕ್ಷಣ ಸಂಘಟನೆ ಹೋರಾಟದ ಧ್ಯೆಯ ವಾಕ್ಯ ನೀಡಿದ ಸಾಮಜಿಕ ಸುಧಾರಕ ಭಾರತ ರತ್ನ ಡಾ॥ ಬಿ. ಆರ್ ಅಂಬೇಡ್ಕರ.

# ಹೊಸ ವರುಷದ ಸಂಭ್ರಮ ಹೊತ್ತು ತರುವ ಯುಗಾದಿ

– ಶ್ರೀ ಶಂಕರ ಎಸ್, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.



ಏಪ್ರಿಲ್ ತಿಂಗಳ ದೇಶದಾದ್ಯಂತ ಹೊಸ ವರ್ಷದ ಆಚರಣೆಗಳನ್ನು ಪ್ರಾರಂಭಿಸುತ್ತದೆ. ಜನರು ಉತ್ಸಾಹದಿಂದ ಆಚರಿಸುವ ಪ್ರಾದೇಶಿಕ ಹೊಸ ವರ್ಷದ ಹಬ್ಬಗಳಲ್ಲಿ ಯುಗಾದಿಯೂ ಒಂದು. ಯುಗಾದಿ ಎಂಬುದು ಸಂಸ್ಕೃತ ಪದಗಳಾದ ಯುಗ (ಯುಗ) ಮತ್ತು ಆದಿ (ಆರಂಭ) ದಿಂದ ಬಂದಿದೆ ಇದರ ಅರ್ಥ "ಹೊಸ ಯುಗದ ಆರಂಭ".

ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ ಹೊಸ ವರುಷಕೆ ಹರುಷವ ಹೊಸತು ಹೊಸತು ತರುತಿದೆ. ಶ್ರೀ ದ. ರಾ. ಬೇಂದ್ರೆಯವರ ಈ ಜನಪ್ರಿಯ ಭಾವಗೀತೆಯನ್ನು ಕುಲವಧು ಚಲನಚಿತ್ರದಲ್ಲಿ ಅಳವಡಿಸಿಕೊಂಡು ಲೀಲಾವತಿಯವರು ಹಾಡುತ್ತ ನರ್ತಿಸುವುದನ್ನು ನೋಡುತ್ತಿದ್ದರೆ ಅದುವೇ ಕಣ್ಣಿಗೆ ಹಬ್ಬ. ಮನಸ್ಸಿಗೆ ಆನಂದ.

ನಿಸರ್ಗದ ಮೈತುಂಬಿ... 'ಯುಗಾದಿ' ಬಂದಿತೆಂದರೆ ಎಲ್ಲೆಡೆಯಲ್ಲಿ ಸಂತೋಷ, ಸಂಭ್ರಮ ತುಂಬಿ ತುಳುಕುತ್ತಿರುತ್ತದೆ. ಚೈತ್ರಮಾಸದಿಂದ ವಸಂತ ಋತು ಶುರುವಾಗುತ್ತದೆ. ವನಗಳೆಲ್ಲ ಚಿಗುರಿ ಹೂ ಬಿಟ್ಟು ಯುಗಾದಿಯ ಹರ್ಷವನ್ನು ಬೀರುವವು. ಎಲ್ಲಿ ನೋಡಿದರೂ ಮರಗಿಡಬಳ್ಳಿಗಳು ಹಸಿರಾಗಿ ನಳನಳಿಸುತ್ತಿರುವುದು. ಯುಗಾದಿಯ ದಿನ ಮುಂಜಾನೆ ಬೇವು ಮಿಶ್ರಿತ ನೀರಿನಿಂದ ಸ್ನಾನ ಮಾಡಿ, ಹೊಸಬಟ್ಟೆ ಧರಿಸಿ ಮನೆಯ ದೇವರನ್ನು ಪೂಜಿಸಿ, ಬೇವು ಬೆಲ್ಲವನ್ನು ಸೇವನೆ ಮಾಡುತ್ತಾರೆ. ಬೇವು–ಬೆಲ್ಲವು ಸುಖ–ದುಃಖ, ರಾತ್ರಿ–ಹಗಲು ಇವುಗಳ ಸಂಕೇತಗಳಾಗಿವೆ. ಮಾನವರ ಬದುಕಿನಲ್ಲಿ ಸುಖ–ದುಃಖಗಳು ಅವಿಭಾಜ್ಯ ಅಂಶಗಳು. ಇವೆಲ್ಲವುಗಳೊಂದಿಗೆ ಸಮತೋಲನ ಕಾಯ್ದುಕೊಂಡೇ ಮನುಷ್ಯ ಬದುಕಬೇಕು. ಜೀವನ ಕಷ್ಟ–ಸುಖ. ನೋವು ನಲಿವುಗಳ ಸಮ್ಮಿಶ್ರಣವಾಗಿದೆ. ಇವೆರಡೂ ಒಟ್ಟಿಗೆ ಇರುವವು. ಎರಡನ್ನೂ ಸಮದೃಷ್ಟಿಯಿಂದ ಸವಿಯುವುದನ್ನು ಕಲಿಯಲೆಂದೇ ಯುಗಾದಿಯೆಂದು ಬೇವು–ಬೆಲ್ಲವನ್ನು ತಿನ್ನಿಸುವರು. ನೋವು ನಲಿವು ಎರಡಕ್ಕೂ ನಾವು ಸ್ವಾಗತ ನೀಡಬೇಕು. ನಾವು ಬೇವಿನ ಸಮಾನವಾದ ದುಃಖ, ಅಶಾಂತಿಯ, ಪ್ರಪಂಚದಲ್ಲಿದ್ದರೂ ಬೆಲ್ಲದ ಸಮಾನವಾದ ಶಾಂತಿ, ಅತೀಂದ್ರಿಯ ಸುಖ, ಆತ್ಮೀಯತೆ, ಸ್ನೇಹ, ಮಧುರತೆಯ ಅನುಭವ ಮಾಡುವುದು ಎಂಬ ನಿಜ ಅರ್ಥವಾಗಿದೆ.

### ಹಬ್ಬದ ವಿಶೇಷ ಖಾದ್ಯಗಳು :

ಹಬ್ಬ ಹರಿದಿನಗಳಲ್ಲಿ ತಯಾರಿಸುವ ತಿಂಡಿ ತಿನಿಸುಗಳ ಹೊರತಾಗಿ, ಯುಗಾದಿಗೆ ಕರ್ನಾಟಕದಲ್ಲಿ ಹೋಳಿಗೆ ಅಂದಿನ ವಿಶೇಷ ಖಾದ್ಯವಾಗಿ ತಯಾರುಗೊಳ್ಳುತ್ತದೆ. ಬೆಲ್ಲದ ಪಾನಕ, ಶಾವಿಗೆ ಕೂಡ ಅಂದಿನ ಸ್ಪೆಷಲ್ ಮಹಾರಾಷ್ಟ್ರದಲ್ಲಿ ಹೋಳಿಗೆಯನ್ನೇ ಹೋಲುವ ಪೂರಣ್ ಪೋಳಿ ತಯಾರಿಸುತ್ತಾರೆ.

ಆಂಧ್ರ, ತೆಲಂಗಾಣದಲ್ಲಿ ಬೇವು– ಬೆಲ್ಲ, ಮಾವಿನ ಕಾಯಿ, ಉಪ್ಪು, ಮೆಣಸು, ಹುಣಸೆ ಹಣ್ಣುಗಳ ಮಿಶ್ರಣ ಮಾಡಿ 'ಪಚ್ಚಡಿ' ತಯಾರಿಸುತ್ತಾರೆ. ಈ ಕೆಳಗಿನ ಆರೂ ಪದಾರ್ಥಗಳು ಆರು ಗುಣಗಳನ್ನು ಸಾರುತ್ತವೆ ಎಂಬುದು ಅಲ್ಲಿನ ನಂಬುಗೆ.

- **ಬೆಲ್ಲ (ಸಿಹಿ) :** ಸಂತೋಷವನ್ನು ಸಂಕೇತಿಸುತ್ತದೆ.
- **ಉಪ್ಪು (ಉಪ್ಪು) :** ಜೀವನದಲ್ಲಿ ಆಸಕ್ತಿ ತೋರಿಸುವುದು.
- **ಹುಣಸೆಹಣ್ಣು (ಹುಳಿ) :** ಸವಾಲುಗಳನ್ನು ಸಂಕೇತಿಸುತ್ತದೆ
- **ಬೇವಿನ ಹೂವುಗಳು (ಕಹಿ) :** ಜೀವನದ ಕಷ್ಟಗಳನ್ನು ತೋರಿಸುತ್ತದೆ
- **ಹಸಿ ಮಾವು (ಟ್ಯಾಂಜಿ) :** ಆಶ್ಚರ್ಯಗಳು ಮತ್ತು ಹೊಸ ಸವಾಲುಗಳನ್ನು ಸೂಚಿಸುತ್ತದೆ
- **ಮೆಣಸಿನ ಪುಡಿ (ಮಸಾಲೆ) :** ಒಬ್ಬರ ಜೀವನದಲ್ಲಿ ಕೋಪದ ಕ್ಷಣಗಳನ್ನು ತೋರಿಸುತ್ತದೆ.

ಜೀವನದ ಎಲ್ಲಾ ಅಭಿರುಚಿಗಳನ್ನು ಹೊಂದಿರುವ ಭಕ್ಷ್ಯವು ಮಹತ್ವದ್ದಾಗಿದೆ. ಜೀವನವು ಎಲ್ಲಾ ಭಾವನೆಗಳ ಮಿಶ್ರಣವಾಗಿದೆ ಎಂದು ಅದು ಕಲಿಸುತ್ತದೆ. ಈ ದಿನದಂದು ಅನುಸರಿಸುವ ಪ್ರತಿಯೊಂದು ಆಚರಣೆಗೂ ತನ್ನದೇ ಆದ ಮಹತ್ವವಿದೆ.


ಮಾವಿನ ಎಲೆಗಳನ್ನು ನೇತುಹಾಕುವುದು ಮತ್ತು ಬಾಗಿಲಿನ ಬಳಿ ಕಲಶವನ್ನು ಇಡುವುದು ಅಥವಾ ವಾರ್ಷಿಕ ಭವಿಷ್ಯವನ್ನು ಮಾಡಲು ಅರ್ಚಕರನ್ನು ಕರೆಯುವುದು ಯುಗಾದಿಯ ಮಹತ್ವ ಮತ್ತು ಸಂಕೇತದ ಭಾಗವಾಗಿದೆ.

### ವರ್ಷ ತೊಡಕು :

ಯುಗಾದಿ ಹಬ್ಬದ ಮಾರನೇ ದಿನ ವರ್ಷ ತೊಡಕು ಅನ್ನು ಆಚರಿಸುತ್ತಾರೆ. ವರ್ಷದ ತೊಡಕಿನಂದು ಕಡ್ಡಾಯವಾಗಿ ಮಾಂಸದ ಅಡುಗೆಗಳನ್ನೇ ಮಾಡುವ ಪರಿಪಾಠವಿದೆ. ನಾವುಗಳು ಆ ಹಬ್ಬಗಳ ನಿಜವಾದ ಅರ್ಥವನ್ನು ತಿಳಿದು ಆಚರಿಸಿದರೆ ಹಬ್ಬ ಮಾಡಿದ್ದಕ್ಕೂ ಸಾರ್ಥಕ ಮತ್ತು ಎಲ್ಲರ ಮನಸ್ಸಿಗೂ ನೆಮ್ಮದಿ ಇರುತ್ತದೆ.

# ಜಲಕ್ಷಾಮ ನಿರ್ವಹಣೆ

– ಶ್ರೀಮತಿ ಸವಿತ ಎನ್. ಇ, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು




ಒಂದೆ ಗಗನವ ಕಾಣುತೊಂದೆ ನೆಲವನು ತುಳಿಯು ।
ತೊಂದೆ ಧಾನ್ಯವನುಣ್ಣುತೊಂದೆ ನೀರ್ಗುಡಿದು ॥
ಒಂದೆ ಗಾಳಿಯನುಸಿರ್ವ ನರಜಾತಿಯೊಳಗೆಂತು ।
ಬಂದುದೀ ವೈಷಮ್ಯ? – ಮಂಕುತಿಮ್ಮ

ಪ್ರಸಕ್ತ ಜಲಕ್ಷಾಮ ನಿರ್ವಹಿಸುವ ಸಂದರ್ಭದಲ್ಲಿ ನೀರನ್ನು ಹೇಗೆ ಮಿತವ್ಯಯವಾಗಿ ಬಳಸಬೇಕು, ನೀರಿನ ಸಂಪನ್ಮೂಲಗಳನ್ನು ಹೇಗೆ ರಕ್ಷಿಸಬೇಕು. ಜೀವಜಲವನ್ನು ಹೇಗೆ ವೃದ್ಧಿಸಬೇಕು? ನೀರನ್ನು ಮುಂಬರುವ ಪೀಳಿಗೆಗೆ ಸಂರಕ್ಷಿಸುವ ಅಗತ್ಯತೆಯನ್ನು ತಿಳಿಸುವುದಕ್ಕಾಗಿ ಈ ಲೇಖನ ಒಟ್ಟು ಕೋರಿದೆ.

ವಿಶೇಷವಾಗಿ ಸಹಕಾರಿ ಸಂಸ್ಥೆಗಳ ವತಿಯಿಂದ ಜಲಕ್ಷಾಮ ನಿರ್ವಹಣೆಯಲ್ಲಿ ಮಹತ್ವದ ಪಾತ್ರವನ್ನುವಹಿಸಿ ಅಗತ್ಯ ಕ್ರಿಯಾ ಯೋಜನೆಗಳನ್ನು ರೂಪಿಸುವ ಸಲುವಾಗಿ ಈ ಲೇಖನ

ಜೀವನದ ಅತ್ಯವಶ್ಯಕ ವಸ್ತುಗಳಲ್ಲಿ ನೀರು ಪ್ರಮುಖ ಪಾತ್ರವಹಿಸುತ್ತದೆ. ನೀರು ಮಾನವನ ಪ್ರಗತಿಯ ಮಾನದಂಡ ಕೂಡ ಹೌದು. ನೀರು ನಮ್ಮ ಪರಿಸರ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿದೆ. ಇದು ನಮ್ಮ ಗ್ರಹವನ್ನು ಬದುಕಲು ಯೋಗ್ಯವಾಗಿಸುವ ಮುಖ್ಯ ವಸ್ತುಗಳಲ್ಲಿ ಒಂದಾಗಿದೆ. ನೀರು ಎಂದರೆ ಜೀವನ. ನೀರು ಒಂದು ಪ್ರಧಾನ ನೈಸರ್ಗಿಕ ಸಂಪನ್ಮೂಲವಾಗಿದೆ. ಇದು ಮಾನವರಿಗೆ ಮೂಲಭೂತ ಅವಶ್ಯಕತೆ ಮತ್ತು ಜೀವಿಗಳು ಹೊಂದಿರುವ ಅಮೂಲ್ಯ ಆಸ್ತಿಯಾಗಿದೆ. ಸಸ್ಯ ಮತ್ತು ಪ್ರಾಣಿ ಸಾಮ್ರಾಜ್ಯದ ಉಳಿವಿಗೆ ನೀರು ಸಮಾನವಾಗಿ ಮುಖ್ಯವಾಗಿದೆ. ಸಸ್ಯಗಳನ್ನು ಉಳಿಸಿಕೊಳ್ಳಲು ಮಣ್ಣಿಗೆ ನೀರು ಬೇಕು. ಪರಿಸರ ಸಮತೋಲನಕ್ಕೂ ಜಲಚಕ್ರ ಅತ್ಯಗತ್ಯ. ಭೂಮಿಯ ಒಂದು ದೊಡ್ಡ ಭಾಗವು ನೀರಿನಿಂದ ಆವೃತವಾಗಿದ್ದರೂ, ಅದರ ಒಂದು ಸಣ್ಣ ಭಾಗವನ್ನು ಮಾತ್ರ ವಿವಿಧ ಮಾನವ ಚಟುವಟಿಕೆಗಳಿಗೆ ಬಳಸಬಹುದಾಗಿದೆ. 1993 ರಿಂದ, ವಿಶ್ವ ಜಲ ದಿನ ಮಾರ್ಚ್ 22 ರಂದು ನೀರು ಮತ್ತು ನೈರ್ಮಲ್ಯ ಬಿಕ್ಕಟ್ಟಿನ ಬಗ್ಗೆ ಸಾರ್ವಜನಿಕ ಜಾಗೃತಿಯನ್ನು ಹೆಚ್ಚಿಸಿದೆ ಮತ್ತು ಕ್ರಮ ತೆಗೆದುಕೊಳ್ಳಲು ಜನರನ್ನು ಪ್ರೇರೇಪಿಸಿದೆ. ಇದು ಜಾಗತಿಕವಾಗಿ ಶುದ್ಧ ನೀರಿನ ಲಭ್ಯತೆಯ ಕೊರತೆಯಿರುವ 2.2 ಶತಕೋಟಿ ಜನರನ್ನು ಉದ್ದೇಶಿಸುವುದಾಗಿದೆ.

ನಮ್ಮ ಮನೆ, ಆಹಾರ, ಸಂಸ್ಕೃತಿ, ಆರೋಗ್ಯ, ಶಿಕ್ಷಣ, ಅರ್ಥಶಾಸ್ತ್ರ ಮತ್ತು ನೈಸರ್ಗಿಕ ಪರಿಸರದಲ್ಲಿ ಅಗಾಧವಾದ ಮತ್ತು ಸಂಕೀರ್ಣವಾದ ಮೌಲ್ಯವನ್ನು ಹೊಂದಿರುವ ಕಾರಣ ನೀರು ಪ್ರತಿಯೊಬ್ಬರ ಜೀವನಕ್ಕೆ ಅತ್ಯಗತ್ಯ. ಆದಾಗ್ಯೂ, ಅಸಮರ್ಥ ಬಳಕೆ ಮತ್ತು ಮಾಲಿನ್ಯದ ಕಾರಣದಿಂದಾಗಿ, ಶತಕೋಟಿ ಜನರಿಗೆ ಸುರಕ್ಷಿತ ನೀರಿನ ಪ್ರವೇಶ ಕೂಡ ಸಿಕ್ಕಿಲ್ಲ ಇದರಿಂದ ಅವರ ಜೀವವನ್ನು ಅಪಾಯಕ್ಕೆ ಈಡಾಗಿದೆ.

### ನೀರಿನ ಪ್ರಾಮುಖ್ಯತೆ

ನಾವೆಲ್ಲರೂ ಕುಡಿಯುವ ನೀರಿಗಾಗಿ ಬಹುತೇಕ ಅಂತರ್ಜಲವನ್ನೇ ಅವಲಂಬಿಸಿದ್ದೇವೆ. ನೀರಿನ ಪ್ರಾಮುಖ್ಯತೆಯನ್ನು ನಾವು ನಿರ್ಲಕ್ಷಿಸಲಾಗುವುದಿಲ್ಲ, ಆದ್ದರಿಂದ ಈ ಅಮೂಲ್ಯವಾದ ನೈಸರ್ಗಿಕ ಸಂಪನ್ಮೂಲವನ್ನು ಉಳಿಸಿದ್ದಲ್ಲಿ ನಿಮ್ಮ ಕುಟುಂಬವನ್ನು ಮಾಲಿನ್ಯದಿಂದ ರಕ್ಷಿಸುವುದು ಜೀವಜಲವಾಗಿದೆ. ನೀರಿನ ಕೊರತೆಯು ಮಾನವ ಜೀವನಕ್ಕೆ ಏನು ಮಾಡಬಹುದು ಎಂಬುದರ ಕುರಿತು ಅರಿವು ಮೂಡಿಸುತ್ತದೆ. ಭಾರತದ ಮುಖ್ಯ ಉದ್ಯೋಗ ಕೃಷಿಯಾಗಿರುವುದರಿಂದ, ನೀರನ್ನು ಇಲ್ಲಿ ಸಮಗ್ರವಾಗಿ ಬಳಸಲಾಗುತ್ತದೆ. ನೀರಾವರಿ ಮತ್ತು ಜಾನುವಾರು ಸಾಕಣೆಗೆ ಸಾಕಷ್ಟು ನೀರು ಬೇಕಾಗುತ್ತದೆ. ಹೀಗಾಗಿ ಬಹಳಷ್ಟು ರೈತರ ಬದುಕು ಇದರ ಮೇಲೆ ಅವಲಂಬಿತವಾಗಿದೆ. ಇದಲ್ಲದೆ, ಕೈಗಾರಿಕೆಗಳು ನೀರನ್ನು ವಿವಿಧ ಉದ್ದೇಶಗಳಿಗಾಗಿ ಬಳಸುತ್ತೇವೆ. ತಂಪಾಗಿಸುವಾಗ, ಉತ್ಪಾದನೆ ಮತ್ತು ಹಲವಾರು ಸರಕುಗಳನ್ನು ಸಾಗಿಸುವಾಗ ಇದು ಸೂಕ್ತವಾಗಿ ಬರುತ್ತದೆ. ಉದಾಹರಣೆಗೆ, ಥರ್ಮಲ್ ಪವರ್ ಪ್ಲಾಂಟ್ಗಳು ತಮ್ಮ ಚಾಲನೆಗೆ ಸಾಕಷ್ಟು ಪ್ರಮಾಣದ ನೀರನ್ನು ಬಳಸುತ್ತವೆ. ಇದಲ್ಲದೆ, ನೀರಿನ ಮನೆಯ ಬಳಕೆ ಹೇಳತೀರದು ಶ್ರೀ ಸಾಮಾನ್ಯನ ದೈನಂದಿನ ಜೀವನದಲ್ಲಿ ನೀರು ಬಹುಮುಖ್ಯ ಪಾತ್ರ ವಹಿಸುತ್ತದೆ. ಅಂದರೆ ಕುಡಿಯುವ ನೀರಿನಿಂದ ಪ್ರತಿ ಹಂತದಲ್ಲೂ ನೀರು ಬೇಕು. ಅದರ ನಂತರ, ಸಸ್ಯಗಳು ಬದುಕಲು ಮತ್ತು ಆಹಾರವನ್ನು ತಯಾರಿಸಲು ನೀರು ಬೇಕಾಗುತ್ತದೆ. ಇದು ಬೆಳೆಯಲು ಸಹಾಯ ಮಾಡುವ ಮುಖ್ಯ ಅಂಶಗಳಲ್ಲಿ ಒಂದಾಗಿದೆ. ಆದ್ದರಿಂದ, ಮಾನವರು, ಪ್ರಾಣಿಗಳು ಮತ್ತು ಸಸ್ಯಗಳು ಬದುಕಲು ನೀರು ಅತ್ಯಂತ ಮುಖ್ಯವಾಗಿದೆ.

### ಜೀವ ಜಲ ರಕ್ಷಣೆ ನಮ್ಮೆಲ್ಲರ ಹೊಣೆ.

ಇಂದಿನ ದಿನದಲ್ಲಿ ನಾವು ಬಳಸುವ ನೀರಿನ ಮಹತ್ವ ಅರಿಯಬೇಕು, ವಿವಿಧ ನೀರಿನ ಮೂಲಗಳು ಬರಿದಾಗುತ್ತಿವೆ. ನದಿ ಮೂಲಗಳು ಬತ್ತುತ್ತಿವೆ. ಆದ್ದರಿಂದ ನಾವು ಕಲ್ಮಶವಾದ ನೀರನ್ನು ಕುಡಿದು ರೋಗಕ್ಕೆ ತುತ್ತಾಗುವ ಅನಿವಾರ್ಯತೆ ಎದುರಾಗಿದ್ದು, ನೀರಿನ ಮಹತ್ವ ಅರಿತು ಬಳಸುವುದು ಸೂಕ್ತ.

### ನೀರಿನ ಮಿತ ಬಳಕೆಗೆ ಹೀಗೆ ಮಾಡಿ:

- **ನೀರು ವ್ಯರ್ಥವಾಗುವುದನ್ನು ನಿಲ್ಲಿಸಿ :** ಹಲ್ಲುಜ್ಜುವಾಗ ಟ್ಯಾಪ್‌ನಲ್ಲಿ ನೀರು ಬಿಟ್ಟುಕೊಂಡೇ ಇರುತ್ತದೆ. ಅದರ ಬದಲಿಗೆ ಬೇಕಾದಾಗ ಮಾತ್ರ ಬಳಸಿಕೊಳ್ಳಿ. ಪಾತ್ರ ತೊಳೆಯುವಾಗ, ಬಟ್ಟೆ ತೊಳೆಯುವಾಗ ಸುಖಾಸುಮ್ಮನೆ ನೀರು ಪೋಲಾಗದಂತೆ ನೋಡಿಕೊಳ್ಳಿ. ಇದರಿಂದ ನೀರನ್ನು ಉಳಿತಾಯ ಮಾಡಿ ಇನ್ನೊಂದು ಕೆಲಸಕ್ಕೆ ಬಳಸಿಕೊಳ್ಳಬಹುದು. ಇದನ್ನು ಅಭ್ಯಾಸ ಮಾಡಿಕೊಳ್ಳಿ.
- **ಶವರ್ ಬದಲಿಗೆ ಬಕೆಟ್ ಬಳಸಿ :** ಲಭ್ಯವಿರುವ ಮಾಹಿತಿಯ ಪ್ರಕಾರ ಶವರ್ ನಿಮಿಷಕ್ಕೆ ಸುಮಾರು 5 ಗ್ಯಾಲನ್‌ಗಳಷ್ಟು ನೀರನ್ನು ಬಳಸುವುದರಿಂದ ಸ್ನಾನ ಮಾಡುವಾಗ ಸ್ನಾನದ ಬದಲಿಗೆ

Swabhimani Sahakari, Kannada, English Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2023-2025 RNI NO. KARBIL-2004/18001/Pages 32
Licensed to post without Prepayment License No. PMG BG/WPP-384/2023-2025.



ಬಕೆಟ್‌ಗಳನ್ನು ಬಳಸಲು ಸಲಹೆ ನೀಡಲಾಗುತ್ತದೆ.

- **ಮಳೆನೀರನ್ನು ಸಂಗ್ರಹಿಸಿ :** ಅರಣ್ಯನಾಶದಿಂದಾಗಿ ತಾಪಮಾನ ಹೆಚ್ಚಾಗುವುದು ಮಾತ್ರವಲ್ಲದೆ ನಾವು ಪಡೆಯುವ ಮಳೆಯ ಪ್ರಮಾಣವೂ ಕಡಿಮೆಯಾಗಿದೆ. ಆದಾಗ್ಯೂ, ಮಳೆನೀರನ್ನು ಸಂಗ್ರಹಿಸಬಹುದು ಮತ್ತು ಅದನ್ನು ಸಸ್ಯಗಳಿಗೆ ನೀರುಣಿಸಲು, ಬಟ್ಟೆ ಒಗೆಯಲು ಇತ್ಯಾದಿಗಳಿಗೆ ಬಳಸಬಹುದು.
- **ತ್ಯಾಜ್ಯ ನೀರನ್ನು ಮರುಬಳಕೆ ಮಾಡಿ :** ತರಕಾರಿಗಳನ್ನು ತೊಳೆಯಲು ಬಳಸುವ ನೀರನ್ನು ಸಸ್ಯಗಳಿಗೆ ನೀರುಣಿಸಲು ಮರುಬಳಕೆ ಮಾಡಬಹುದು. ಅಲ್ಲದೆ, ಖಔ ಫಿಲ್ಟರ್‌ಗಳಿಂದ ಇಳಿದುಹೋದ ನೀರನ್ನು ನೆಲವನ್ನು ಸ್ವಚ್ಛಗೊಳಿಸಲು ಅಥವಾ ಒರೆಸಲು ಬಳಸಬಹುದು.
- **ಸೋರಿಕೆಯನ್ನು ಪರಿಶೀಲಿಸಿ :** ಪೈಪ್‌ಗಳನ್ನು ಸೋರಿಕೆಗಾಗಿ ನಿಯಮಿತವಾಗಿ ಪರಿಶೀಲಿಸುವುದು ಮತ್ತು ನೀರಿನ ವ್ಯರ್ಥವನ್ನು ಉಳಿಸಲು ಅವುಗಳನ್ನು ಸರಿಪಡಿಸುವುದು ಬಹಳ ಮುಖ್ಯ.
- **ಅಂತರ್ಜಲ ಸಂರಕ್ಷಣೆ ಮಾಡುವುದು.**

### ನೀರನ್ನು ಮುಂಬರುವ ಪೀಳಿಗೆಗೆ ಸಂರಕ್ಷಿಸುವ ಅಗತ್ಯತೆ

ಜಲಸಂಪತ್ತು ಹಾಳಾಗದಂತೆ ತಡೆದು, ಅದನ್ನು ಮುಂದಿನ ಪೀಳಿಗೆಗೆ ಲಭ್ಯವಾಗುವಂತೆ ಮಾಡಬೇಕಾಗಿದೆ. ಭೂಮಂಡಲದಲ್ಲಿ ಒಟ್ಟು ಬಳಕೆಗೆ ಲಭ್ಯತೆಯ ನೀರಿನ ಪ್ರಮಾಣ ತುಂಬಾ ಕಡಿಮೆಯಿದ್ದು, ಅದರ ಸದ್ಬಳಕೆಯಾಗಬೇಕು. ಅರಣ್ಯನಾಶ, ಅತಿಯಾದ ಅಂತರ್ಜಲ ಬಳಕೆ, ಪರಿಸರ ಮಾಲಿನ್ಯ, ಅವೈಜ್ಞಾನಿಕ ನೀರಿನ ಬಳಕೆ, ಮಾನವನ ದುರಾಸೆಯಂತಹ ಮುಂತಾದ ಕಾರಣಗಳಿಂದ ಇದು ಬರಿದಾಗುತ್ತಿದ್ದು, ಇದು ಹೀಗಿಯೇ ಮುಂದುವರೆದರೆ ಕೆಲವು ವರ್ಷಗಳಲ್ಲಿ ನೀರಿಗಾಗಿ ವಿಶ್ವಯುದ್ಧ ಜರುಗಿದರೆ ಆಶ್ಚರ್ಯಪಡಬೇಕಾಗಿಲ್ಲ. ಹಾಗಾಗಿ ಸಕಲ ಜೀವರಾಶಿಗಳ ಅಸ್ತಿತ್ವಕ್ಕೆ ಕಾರಣವಾದ ಅಮೂಲ್ಯವಾದ ಸಂಪತ್ತು ಜಲ. ವಿವಿಧ ಕಾರಣಗಳಿಂದ ಜಲ ಸಂಪತ್ತಿನ ಕೊರತೆಯಿಂದ ಪರಿಸರದ ಅಸಮತೋಲನವಾಗುತ್ತಿದೆ. ಜಲ ಸಂರಕ್ಷಣೆ ಸರ್ಕಾರ, ಕೆಲವು ವ್ಯಕ್ತಿ, ಸಂಸ್ಥೆಗಳ ಜವಾಬ್ದಾರಿಯಾಗಿರದೆ, ಪ್ರತಿಯೊಬ್ಬರ ಆದ್ಯ ಕರ್ತವ್ಯವಾಗಬೇಕಿದೆ.

ಸರ್ಕಾರ ಶುದ್ಧ ಕುಡಿಯುವ ನೀರಿನ ಘಟಕ ಯೋಜನೆ, ಜಲಜೀವನ ಮಿಷನ್, ಅಟಲ್ ಮಿಶನ್ ನಗರ ಸುಧಾರಣೆ ಮತ್ತು ಪುನರ್‌ಚೇತನ ಯೋಜನೆ ಸೇರಿದಂತೆ ಹತ್ತು ಹಲವು ಯೋಜನೆಗಳನ್ನು ಜಾರಿಗೆ ತಂದಿದೆ ಅವುಗಳ ಸದ್ಬಳಕೆಯಾಗುವಂತೆ ನಾವು ಎಚ್ಚರವಹಿಸಬೇಕು.

### ಪರಿಶುದ್ಧ ಕುಡಿಯುವ ನೀರಿನ ಘಟಕ – ಸಹಕಾರಿಗಳ ಕೈ ಜೋಡಣೆ

ಸಹಕಾರಿ ಸಂಸ್ಥೆಗಳು ದೇಶಾದ್ಯಂತ ಸಮಾಜದ ಕಾಳಜಿಯೊಂದಿಗೆ ಕಾರ್ಯನಿರ್ವಹಿಸುತ್ತಾ ಜನಪರ ಚಿಂತನೆಯಲ್ಲಿ ತೊಡಗಿಸಿಕೊಂಡು ಸಾಕಷ್ಟೂ ಪರಿವರ್ತನೆ ತರುತ್ತಿರುವದು ನೆಮ್ಮದಿಯ ಸಂಕೇತವಾಗಿದ್ದು, ಸಮಾಜ ಚಿಂತನೆಯೊಂದಿಗೆ ಸಂಸ್ಥೆಗಳು ಮುನ್ನುಗ್ಗಬೇಕು ಅಂದಾಗ ಮಾತ್ರ ಸಹಕಾರಿಗಳಿಗೆ ಹೆಚ್ಚಿನ ಅರ್ಥ ಬರುತ್ತದೆ, ಇಂದು ಸಹಕಾರಿ ಸಂಸ್ಥೆಗಳು ಹಲವಾರು ಸೇವೆ ನೀಡಲು ದಾಪುಗಾಲು ಇಟ್ಟಿವೆ.

ಸಮಾಜಮುಖಿ ಕಾರ್ಯದಲ್ಲಿ ಸಹಕಾರಿಗಳು ತೊಡಗಿಸಿಕೊಂಡಿದ್ದು ಉಳಿತಾಯದ ಜೊತೆಗೆ ಆರೋಗ್ಯ ಜಾಗೃತಿ ಹಾಗೂ ವಿನೂತನ ಹಣಕಾಸು ಯೋಜನೆಗಳನ್ನು ಜಾರಿಗೆ ತರುವ ಜೊತೆಗೆ ಗ್ರಾಹಕರಿಗೆ ಮತ್ತು ಸಮಾಜಕ್ಕೆ ಉತ್ತಮ ಸೇವೆ ಒದಗಿಸಲು ಬದ್ಧವಾಗಿದ್ದು ಜನತೆ ಆರೋಗ್ಯ ದೃಷ್ಟಿಕೋನದಲ್ಲಿ ಪರಿಶುದ್ಧ ಕುಡಿಯುವ ನೀರಿನ ಘಟಕ ಆರಂಭಿಸಿವೆ ಟ್ಯಾಂಕರ್ ನೀರನ್ನು ಜನರಿಗೆ ನೀಡುವ ಮೂಲಕ, ಬೋರವೆಲ್‌ಗಳನ್ನು ಕೊರೆಸುವುದು ಹಾಗೂ ಕೆರೆಗಳ ಊಳೆತ್ತುವ ಮೂಲಕ ಅನೇಕ ಸಮಾಜಮುಖಿ ಸೇವೆಗಳನ್ನು ರಾಜ್ಯದ ಅನೇಕ ಸೌಹಾರ್ದ ಸಹಕಾರಿಗಳು ಸಮಾಜಕ್ಕೆ ನೀಡುತ್ತಿರುವುದು ಹೆಮ್ಮೆಯ ವಿಷಯ.

### ಉಪಸಂಹಾರ :

ನಮ್ಮ ಭೂಮಿಯ ಬಹುಪಾಲು ನೀರಿನಿಂದ ಆವೃತವಾಗಿದೆ, ಆದರೆ, ಇವೆಲ್ಲವೂ ಬಳಕೆಗೆ ಸುರಕ್ಷಿತವಲ್ಲ. ಆದ್ದರಿಂದ, ಈ ಪಾರದರ್ಶಕ ವಸ್ತುವಿನ ರಾಸಾಯನಿಕವನ್ನು ಬುದ್ಧಿ ವಂತಿಕೆಯಿಂದ ಬಳಸುವುದು ನಮಗೆ ಅತ್ಯಗತ್ಯವಾಗಿರುತ್ತದೆ. ಇದಲ್ಲದೆ, ನಮ್ಮ ದೇಶದಲ್ಲಿ ನಡೆಯುತ್ತಿರುವ ನೀರಿನ ಕೊರತೆಯನ್ನು ನಾವು ನೋಡಿದರೆ, ಅದನ್ನು ತಕ್ಷಣವೇ ಸಂರಕ್ಷಿಸುವುದು ಹೆಚ್ಚು ಮುಖ್ಯ ವಾಗಿದೆ. ಜಲವೇ ಜೀವ ಜೀವಾಳ; ನೀರಿಂದಲೇ ಎಲ್ಲ ಸಕಲ ಜೀವರಾಶಿಗಳ ಮೂಲ ನೀರು. ನೀರಿಲ್ಲದ ಬದುಕು ಊಹೆಗೂ ನಿಲುಕದ್ದು. ಹೀಗಾಗಿ ನೀರಿನ ಸಂರಕ್ಷಣೆ ನಮ್ಮೆಲ್ಲರ ಹೊಣೆಯಾಗಿದೆ. ಹಿಂದೆಂದೂ ಕಾಣದಷ್ಟು ನೀರನ್ನು ಸಂರಕ್ಷಿಸಬಹುದು. ಸಂಕ್ಷಿಪ್ತವಾಗಿ ಹೇಳುವುದಾದರೆ, ಮನುಕುಲದ ಉಳಿವಿಗೆ ನೀರು ಅತ್ಯಗತ್ಯ. ಆದರೆ, ದುರದೃಷ್ಟ ವಶಾತ್, ಇದು ವೇಗವಾಗಿ ವ್ಯರ್ಥವಾಗುತ್ತಿದೆ. ಈ ಸಮಸ್ಯೆಯನ್ನು ನಿಭಾಯಿಸಲು ಪ್ರತಿಯೊಬ್ಬ ನಾಗರಿಕರು ಮತ್ತು ಸರ್ಕಾರ ಒಗ್ಗೂಡಬೇಕು. ಸರ್ಕಾರಗಳು ಎಲ್ಲಾ ಪ್ರದೇಶಗಳಿಗೆ ಸಮಾನವಾಗಿ ನೀರು ಸಿಗುವಂತೆ ನೋಡಿಕೊಳ್ಳಬೇಕು. ಮತ್ತೊಂದೆಡೆ, ನಾಗರಿಕರು ಅದನ್ನು ಬುದ್ಧಿ ವಂತಿಕೆಯಿಂದ ಬಳಸುವುದನ್ನು ನೆನಪಿನಲ್ಲಿಟ್ಟು ಕೊಳ್ಳಬೇಕು ಮತ್ತು ಅನಗತ್ಯವಾಗಿ ವ್ಯರ್ಥ ಮಾಡುವುದನ್ನು ತಡೆಯುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

ಕೇಂದ್ರ ಕಛೇರಿ : "ಸೌಹಾರ್ದ ಸಹಕಾರಿ ಸೌಧ" ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ದೂ: 080–23449933/34
ಇ–ಸ್ಟಾಂಪಿಂಗ್ ವಿಭಾಗ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ–ಸ್ಟಾಂಪಿಂಗ ವಿಭಾಗ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ಬೆಂಗಳೂರು ಪ್ರಾಂತೀಯ ಕಛೇರಿ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ: 080–23525546.
ಮೈಸೂರು ಪ್ರಾಂತೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821–2332299
ಬೆಳಗಾವಿ ಪ್ರಾಂತೀಯ ಕಛೇರಿ : #1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ–590015 ದೂರವಾಣಿ: 0831–2401551.
ಕಲಬುರಗಿ ಪ್ರಾಂತೀಯ ಕಛೇರಿ : # 2284, ಕಾಡಾ ಕಛೇರಿ ಹತ್ತಿರ, ಧರಿಯಾಪುರ ಕೊಟನೂರ, ಜಿಡಿಎ ಬಡಾವಣೆ, ಕಲಬುರಗಿ–585102. ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., #68, 17th & 18th Cross, Margosa Road, Malleshwaram, Bengaluru-560 003